بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّی عَلٰی رَسُوْلِهِ الْکَرِیْمِ وَعَلٰی عَبْدِهِ الْمَسِیْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 02

ವಾರ್ಷಿಕ ಶುಲ್ಕ ರೂ.575/-

ಸಂಚಿಕೆ: 19

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

13 ಮೇ 2021, 13 ಹಿಜ್ರತ್ 1400 ತಬ್‌ಲೀಗ್ ಹಿಜರಿ ಶಮ್‌ಸಿ,
30 ರಮಝಾನ್ 1442 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِیْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

يٰٓاَيُّهَا الَّذِيْنَ اٰمَنُوْا كُوْنُوْا قَوّٰمِيْنَ لِلّٰهِ شُهَدَآءَ بِالْقِسْطِ ۡ وَلَا يَجْرِمَنَّكُمْ شَنَاٰنُ قَوْمٍ عَلٰٓى اَلَّا تَعْدِلُوْا ؕ اِعْدِلُوْا ۟ هُوَ اَقْرَبُ لِلتَّقْوٰى ۡ وَاتَّقُوا (المائدة:9)

(ಅಲ್‌ಮಾಇದ: 09)

ಅಂದರೆ: ಎಲೈ ಸತ್ಯವಿಶ್ವಾಸಿಗಳೇ, ನೀವು ನ್ಯಾಯೋಚಿತವಾಗಿ ಸಾಕ್ಷ್ಯವಹಿಸುವವರಾಗಿದ್ದುಕೊಂಡು, ಅಲ್ಲಾಹನ ಮಾರ್ಗದಲ್ಲಿ ಸ್ಥಿರ ಚಿತ್ತರಾಗಿರಿ. ಒಂದು ಜನಾಂಗದವರ ಶತ್ರುತ್ವ ಅವರೊಡನೆ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. (ಸದಾ) ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದು. ನೀವು ಅಲ್ಲಾಹನ ಭಯಭಕ್ತಿಯಿರಿಸಿಕೊಳ್ಳಿರಿ

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

(1237) ಹಝ್‌ರತ್ ಅಬೂಝರ್ (ಘಿಫಾರಿ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ನುಡಿದರು. ನನ್ನ ಪ್ರಭುವಿನ ಕಡೆಯಿಂದ ಒಬ್ಬ ನನ್ನ ಬಳಿ ಬಂದು ನನಗೆ ಸುವಾರ್ತೆ ನೀಡಿದನು. “ಯಾರು ನನ್ನ ಸಮುದಾಯದಲ್ಲಿ ಅಲ್ಲಾಹನ ಹೊರತು ಯಾರನ್ನೂ ಸಹ ಭಾಗಿದಾರನಾಗಿ ಮಾಡಲಿಲ್ಲವೋ ಅವನು ಸ್ವರ್ಗದಲ್ಲಿ ಪ್ರವೇಶ ಮಾಡುವನು.

(1238) ಹಝ್‌ರತ್ ಅಬ್ದುಲ್ಲ (ಬಿನ್ ಮಸ್‌ಊದ್) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ನುಡಿದರು. ಯಾರು ಅಲ್ಲಾಹನೊಡನೆ ಭಾಗಿದಾರರನ್ನಾಗಿ ಮಾಡುತ್ತಾ ಮರಣ ಹೊಂದುವನೋ ಅವನು ನರಕದಲ್ಲಿ ಪ್ರವೇಶ ಪಡೆಯುವವನು. ನಾನು (ಅಂದರೆ ಅಬ್ದುಲ್ಲ ಬಿನ್ ಮಸ್‌ಊದ್) ಹೇಳುತ್ತೇನೆ. ಯಾರು ಅಲ್ಲಾಹನೊಡನೆ ಯಾರನ್ನಾದರೂ ಭಾಗಿಧಾರನನ್ನಾಗಿ ಮಾಡದೇ ಮರಣ ಹೊಂದಿದರೆ ಅವನು ಸ್ವರ್ಗದಲ್ಲಿ ಪ್ರವೇಶ ಪಡೆಯುವನು.

(1239) ಹಝ್‌ರತ್ ಬಿರಾಹ್ (ಬಿನ್ ಆಝೀಬ್) ವರದಿ ಮಾಡುತ್ತಾರೆ, ನಮಗೆ ರಸೂಲುಲ್ಲಾಹ್(ಸ) ಏಳು ವಿಷಯಗಳನ್ನು ಮಾಡಲು ನಿರ್ದೇಶಿಸಿದರು ಮತ್ತು ಏಳು ವಿಷಯಗಳನ್ನು ಮಾಡದಿರಲು ನಿರ್ದೇಶಿಸಿದರು. ನಮಗೆ ನಿರ್ದೇಶಿಸಿದರು. (ಜನಾಝಃ) ಶವಯಾತ್ರೆಯ ಜೊತೆ ಹೋಗುವುದು, ರೋಗಿಗಳನ್ನು ಉಪಚರಿಸುವುದು, ಬಿನ್ನಹ ಕೊಟ್ಟವರ ಬಿನ್ನಹ ಸ್ವೀಕರಿಸುವುದು, ಅಸಹಾಯಕರಿಗೆ ಸಹಾಯ ನೀಡುವುದು, ಕೊಟ್ಟ ಮಾತನ್ನು ಪೂರೈಸುವುದು, ಸಲಾಂ ಹೇಳುವವರಿಗೆ ಉತ್ತರ ನೀಡುವುದು, ಸೀನುವವರಿಗೆ ದುಆ ಮಾಡಲು ಹಾಗೆಯೇ ಬೆಳ್ಳಿಯ ಪಾತ್ರೆ, ಚಿನ್ನದ ಉಂಗುರ, ರೇಷ್ಮೆ ವಸ್ತ್ರ, ಖಸಿ, ಇಸ್ತಬ್ರಖ್ (ಉಡುಪು) ಮತ್ತು ದೀಬಾಜ್ (ಸಿಲ್ಕ್) ದಿಂದ ನಮ್ಮನ್ನು ತಡೆದರು.

**(ಸಹೀಹ್ ಬುಖಾರಿ, ಸಂಪುಟ–2, ಕಿತಾಬುಲ್ ಜನಾಏಝ್, ಮುದ್ರಣ ಖಾದಿಯಾನ್ 2006)**

**ನೈತಿಕ ಸುಧಾರಣೆಗಾಗಿ ಒಬ್ಬ ಎಲ್ಲ ವಸ್ತು ಸ್ಥಿತಿ ತಿಳಿಯುವ, ಎಲ್ಲ ಸಮಯ ಉಸ್ತುವಾರಿ ವಹಿಸುವಂತಹ ಮತ್ತು ಅವನ ಕರ್ಮಗಳ ಹಾಗೂ ಕೃತ್ಯಗಳ ಮತ್ತು ಅವನ ಹೃದಯಾಂತರಗಳ ಭೇಧ ಅರಿಯುವಂತಹ ವ್ಯಕ್ತಿತ್ವ ಅನಿವಾರ್ಯವಾಗಿದೆ.**

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಕಾಲದ ಅವಶ್ಯಕತೆ

ಇಂದು ಜನರು ಸತ್ಯ ವಿಶ್ವಾಸಗಳಿಂದ ಎಷ್ಟೊಂದು ವಿಮುಖರಾಗಿದ್ದಾರೆಂದು ನೋಡಬಹುದು. 20 ಕೋಟಿ ಗ್ರಂಥಗಳು ಇಸ್ಲಾಮಿನ ವಿರುದ್ಧ ಪ್ರಕಟಣೆಗೊಂಡಿವೆ ಮತ್ತು ಲಕ್ಷಾಂತರ ಜನರು ಕ್ರೈಸ್ತರಾಗಿದ್ದಾರೆ. ಎಲ್ಲ ಮಾತುಗಳಿಗೆ ಒಂದು ಮಿತಿ ಎಂಬುದು ಇರುತ್ತದೆ. ಬರ ಬಂದ ನಂತರ ಕಾಡುಪ್ರಾಣಿಗಳು ಸಹ ಮಳೆಯನ್ನು ನಂಬಿ ಆಕಾಶದತ್ತ ತಮ್ಮ ಮುಖಗಳನ್ನು ಎತ್ತುತ್ತವೆ. ಇಂದು 1300 ವರ್ಷಗಳ ಬಿಸಿಲು ಮತ್ತು ಮಳೆಯ ಅಭಾವದ ನಂತರ ಆಕಾಶದಿಂದ ಮಳೆ ಇಳಿದಿದೆ. ಈಗ ಅದನ್ನು ಯಾರಿಗೂ ತಡೆಯಲು ಸಾಧ್ಯವಿಲ್ಲ. ಮಳೆಯ ಸಮಯ ಬಂದ ನಂತರ ಅದನ್ನು ತಡೆಯುವುದು ಯಾರಿಂದ ಸಾಧ್ಯ? ಇಂದು ಎಂತಹ ಸಮಯವಿದೆ. ಯಾವ ಮಟ್ಟದಲ್ಲಿದೆ ಎಂದರೆ ಸ್ವಯಂ ದೇವನ ಮೇಲೆ ಸಂಶಯ ಉಂಟಾಗಿದೆ.

### ಅಲ್ಲಾಹನ ಮೇಲೆ ವಿಶ್ವಾಸ ಹೊಂದುವ ಅಗತ್ಯತೆ

ಅದಾಗ್ಯೂ ಎಲ್ಲ ಕರ್ಮಗಳಿಗೆ ಕೇವಲ ವಿಶ್ವಾಸವು ಇಂಬು ನೀಡುತ್ತದೆ. ಉದಾಹರಣೆಗೆ **ಸಮ್ಮುಲ್ ಫಾರ್** ಅನ್ನು ಒಬ್ಬ ವ್ಯಕ್ತಿ ತಬಾಶೀರ್(ಔಷಧಿ) ಎಂದು ತಿಳಿದುಕೊಂಡರೆ ಅಂಜಿಕೆಯಿಲ್ಲದೆ ಎಷ್ಟೋ ಮಾಸೆಗಳು ಸಹ ತಿನ್ನಬಹುದು. ಆದರೆ ಅದನ್ನು ವಿಷ ಎಂದು ಖಚಿತಪಡಿಸಿಕೊಂಡರೆ ಎಂದೂ ಅದನ್ನು ಮೂಸಿಯೂ ನೋಡುವುದಿಲ್ಲ. ನಿಜವಾದ ಸತ್ಕಾರ್ಯ ಕೈಗೊಳ್ಳಲು ಅಲ್ಲಾಹನ ಅಸ್ತಿತ್ವದ ಬಗ್ಗೆ ವಿಶ್ವಾಸ ಅನಿವಾರ್ಯವಾಗಿದೆ. ಏಕೆಂದರೆ ಐಹಿಕ ಅಧಿಕಾರಿಗಳಿಗೆ ತಿಳಿದಿರುವುದಿಲ್ಲ. ಯಾರು ಮನೆಯ ಒಳಗೆ ಏನು ಮಾಡುತ್ತಿದ್ದಾರೆ ಎಂದು ಮತ್ತು ಅವನ ಕಾರ್ಯ ಚಟುವಟಿಕೆಗಳು ಏನು ಎಂದು? ಯಾರಾದರೂ ಮೌಖಿಕವಾಗಿ ಒಳ್ಳೆಯದನ್ನು ಹೇಳಿಕೊಂಡರೂ ತನ್ನ ಮನಸ್ಸಿನಲ್ಲಿ ಏನಿದೆ ಅದಕ್ಕಾಗಿ ಅವನಿಗೆ ನಮ್ಮಿಂದ ಕೇಳಲ್ಪಡುವ ಭಯವಿರುವುದಿಲ್ಲ. ಅದೇ ರೀತಿ ಲೋಕದ ಸರ್ಕಾರದಲ್ಲಿ ಮನುಷ್ಯನಿಗೆ ಹಗಲು ಇರುಳು, ಕತ್ತಲೆ ಬೆಳಕು, ಏಕಾಂತ ಗುಂಪಿನಲ್ಲಿ, ನಿರ್ಜನ ಜನವಸತಿಯಲ್ಲಿ, ಮನೆಯಲ್ಲಿ, ಪೇಟೆಯಲ್ಲಿ ಎಲ್ಲ ಜಾಗದಲ್ಲಿಯೂ ಸಮಾನವಾದ ಭಯವಿರುವುದಿಲ್ಲ. ಆದುದರಿಂದ ನೈತಿಕ ಸುಧಾರಣೆಗೋಸ್ಕರ ಎಲ್ಲ ಸ್ಥಿತಿಯಲ್ಲೂ, ಎಲ್ಲ ಸಮಯಕ್ಕೂ ಅದರ ಉಸ್ತುವಾರಿ ಮತ್ತು ಅವನ ಕರ್ಮಗಳ ಹಾಗೂ ಕೃತ್ಯಗಳ ಮತ್ತು ಅವನ ಹೃದಯಗಳ ಭೇದವನ್ನು ಸಾಕ್ಷ್ಯವಹಿಸುವಂತಿರಬೇಕು. ಏಕೆಂದರೆ ನಿಜವಾದ ಸತ್ಕರ್ಮಿಯ ಅಂತರಂಗ ಮತ್ತು ಬಹಿರಂಗ ಒಂದಾಗಿರಬೇಕು. ಅವನ ಮನಸ್ಸು ಪಾರದರ್ಶಕವಾಗಿರಬೇಕು. ಭೂಮಿಯ ಮೇಲೆ ದೇವದೂತನಂತೆ ನಡೆಯಬೇಕು. ಒಂದು ನಾಸ್ತಿಕ ಸರಕಾರ ಇಂತಹ ನೀತಿ ಸಾಧಿಸಲಾರದು. ಎಲ್ಲ ಕರ್ಮಫಲಗಳು ವಿಶ್ವಾಸದಿಂದ ಜನ್ಮಪಡೆಯುತ್ತವೆ.

ಅಂದ ಹಾಗೆ ಹಾವಿನ ಹುತ್ತ ನೋಡಿ ಯಾರು ಸಹ ಅದರಲ್ಲಿ ಬೆರಳು ತೂರುವ ಸಾಹಸ ಮಾಡುವುದಿಲ್ಲ. ಒಂದಿಷ್ಟು ವಿಷ ವಸ್ತುವು ನಮ್ಮನ್ನು ಹತ್ಯೆಗೈಯಬಹುದು ಎಂಬ ವಿಶ್ವಾಸವಿದ್ದರೆ ಅದರ ಹತ್ತಿರವು ನಾವು ಹೋಗುವುದಿಲ್ಲ, ಅದನ್ನು ಮುಖಕ್ಕೆ ತಾಗಿಸುವುದಿಲ್ಲ. ಏಕೆಂದರೆ ಮರಣದಿಂದ ದೂರ ಉಳಿಯಬೇಕಾಗಿದೆ.

**(ಮಲ್ಫೂಝಾತ್, ಸಂಪುಟ–1, ಪುಟ–285, ಮುದ್ರಣ ಖಾದಿಯಾನ್ 2018)**

**ಬೈಬಲ್‌ನ ವರದಿ ಆಧಾರದಲ್ಲಿ ಪವಿತ್ರ ಖುರ್‌ಆನ್‌ನ ಮೇಲೆ ಆಕ್ಷೇಪವೆತ್ತುವುದು ಅಚ್ಚರಿಯ ಮಾತಾಗಿದೆ. ನಿಸ್ಸಂದೇಹವಾಗಿಯೂ ನಾವು ಬೈಬಲಿನ ಕೆಲವು ವರದಿಗಳನ್ನು ಐತಿಹಾಸಿಕ ಸತ್ಯದನ್ವಯ ಪರಿಗಣಿಸಿಕೊಳ್ಳುತ್ತೇವೆ. ಆದರೆ ಆ ಸಮಯಕ್ಕೆ ಅವು ಬೌದ್ಧಿಕ ನೆಲೆಯಲ್ಲಿ ಇತರ ಇತಿಹಾಸ ನಿಮಿತ್ತ ಅಥವಾ ಪವಿತ್ರ ಖುರ್‌ಆನ್‌ನ ಅನ್ವಯ ಆಗಿರಬೇಕು.**

ಸಯ್ಯದ್‌ನಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ಸೂರಃ ಯೂಸೂಫ್ ವಚನ 81 ರ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ.

**ಕಬೀರುಹುಮ್** ಎಂದು ಯಾವ ಸಹೋದರನ ಕುರಿತು ಬಂದಿದೆಯೋ ಅವರ ಹೃದಯದಲ್ಲಿ ಒಂದಿಷ್ಟು ದೇವಭಯವಿತ್ತು ಎಂದು ತಿಳಿದುಬರುತ್ತದೆ. ಏಕೆಂದರೆ ಅವನು ತನ್ನ ಪಿತನೊಡನೆ ದ್ರೋಹ ಬಗೆಯುವುದರಿಂದ ತನ್ನ ಇತರ ಸಹೋದರರನ್ನು ಎಚ್ಚರಿಸುತ್ತಾನೆ. ಅಲ್ಲದೇ ತಾನು ಕೊಟ್ಟ

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

لَا إِلٰهَ إِلَّا اللهُ مُحَمَّدٌ رَّسُولُ الله

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

إِنَّ السُّمُوْمَ لَشَرُّ مَا فِي الْعَالَمِ ✿ شَرُّ السُّمُوْمِ عَدَاوَةُ الصُّلَحَاءِ

**ಚಂದ್ರನನ್ನು ಮೂರು ದಿನಗಳವರೆಗೆ "ಹಿಲಾಲ್" ಎಂದು ಕರೆಯುತ್ತಾರೆ ಖಮರ್ ಎಂದಲ್ಲ. ಅದರ ವಿರುದ್ಧವಾಗಿ ಯಾರಾದರೂ ಸಾಬೀತುಪಡಿಸುವುದಾದರೆ ಅವರಿಗೆ ಒಂದು ಸಾವಿರ ರೂಪಾಯಿಗಳ ಬಹುಮಾನ.**

ಹಿಂದಿನ ಸಂಚಿಕೆಯಲ್ಲಿ ನಾವು ಸಯ್ಯದ್‌ನಾ ಹಝ್ರತ್ ಅಖ್‌ದಸ್ ಮುಹಮ್ಮದ್ ಮುಸ್ತಫಾ(ಸ) ರವರ ಸುಫ ವ ಖುಸೂಫ್ (ಚಂದ್ರ ಸೂರ್ಯ ಗ್ರಹಣ) ಭವಿಷ್ಯವಾಣಿಗಳ ಬಗ್ಗೆ ವಿವರಿಸಿದೆವು. ಅದನ್ನು ಅವರು ಆಗಮಿಸಲಿರುವ ಇಮಾಮ್ ಮಹದಿ ಮತ್ತು ಮಸೀಹ್ ಮೌಊದ್‌ರ ಸತ್ಯ ಸಾಕ್ಷ್ಯಕ್ಕಾಗಿ ನುಡಿದಿದ್ದರು. ಈ ಭವಿಷ್ಯವಾಣಿ ಸುನ್ನಿಗಳ ಗ್ರಂಥವಾದ "ದಾರ್‌ಖುತನಿ" ಯಲ್ಲಿ ಒಂದು ಸಾವಿರ ವರ್ಷದ ಪೂರ್ವದಿಂದ ನಡೆದುಬಂದಿದೆ, ಅದೇ ರೀತಿ ಶಿಯಾಗಳ ಗ್ರಂಥವಾದ "ಇಕ್ಮಾಲುದ್ದೀನ್" ನಲ್ಲಿಯೂ ಅಷ್ಟೇ ಅವಧಿಯಿಂದ ಸುರಕ್ಷಿತವಾಗಿದೆ. ಅಂದರೆ ಈ ಮಹೋನ್ನತವಾದ ಭವಿಷ್ಯವಾಣಿಯ ಸುರಕ್ಷತೆ ಸಾವಿರ ವರ್ಷ ಪೂರ್ವದಿಂದ ಎರಡು ಬೃಹತ್ ಸಮುದಾಯದವರು ಮಾಡಿಕೊಂಡು ಬರುತ್ತಿದ್ದಾರೆ. ಅಷ್ಟೇ ಅಲ್ಲ, ಪವಿತ್ರ ಖುರ್‌ಆನ್‌ನಿಂದಲೂ ಅದರ ವಿವರ ದೊರೆಯುತ್ತದೆ. ಹನಫಿಯರ ಕೆಲ ಮಹಾತ್ಮರುಗಳು ಸಹ ಈ ಭವಿಷ್ಯವಾಣಿ ಕುರಿತು ಬರೆದಿರುತ್ತಾರೆ. ಈ ನೆಲೆಯಲ್ಲಿ ಈ ಭವಿಷ್ಯವಾಣಿ ಮುಸ್ಲಿಮರಲ್ಲಿ ಜನಜನಿತವಾಗಿದೆ. ಮುಸ್ಲಿಮರು ಉಲಮಾ ಮತ್ತು ಸತ್ಯವಿಶ್ವಾಸಿಗಳು. ಪ್ರೇಮಿಗಳ ಹಾಗೆ ಅದರ ಪ್ರತೀಕ್ಷೆ ಮಾಡುತ್ತಿದ್ದರು. ಹಬ್ಬದ ಚಂದ್ರನನ್ನು ಕಾಣುವ ಹಾಗೆ ಕಣ್ಣಿನಲ್ಲಿ ಕಣ್ಣಿಟ್ಟು ಕಾಯುತ್ತಿದ್ದರು. ಮಕ್ಕ ನಿವಾಸಿಗಳು ಸಹ ಈ ದೃಷ್ಟಾಂತ ಕಾಣಲು ಕಾಯುತ್ತಿದ್ದರು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಮಕ್ಕ ನಿವಾಸಿಗಳಲ್ಲಿ ಒಂದು ಉತ್ಸಾಹ ಮನೆಮಾಡಿತು. ನಾನು ಒಂದು ಪತ್ರದಲ್ಲಿ ಓದಿದ್ದೆ. ಅವರು ಸೂರ್ಯ ಚಂದ್ರ, ಗ್ರಹಣವನ್ನು ಕಾತರದಿಂದ ನಿರೀಕ್ಷಿಸುತ್ತಿದ್ದಾರೆ. ಈ ಮಾಸದ ಚಂದ್ರ ಹಿಲಾಲನ್ನು ನಿರೀಕ್ಷಿಸುವ ರೀತಿಯಲ್ಲಿ ಪ್ರತೀಕ್ಷಿಸುತ್ತಿದ್ದಾರೆ. ಹಗಲಿರುಳು ಅದರ ವಿವರಗಳಿಲ್ಲದೇ ಕಳೆಯದ ಯಾವ ಮನೆಯ ಜನರು ಸಹ ಕಂಡು ಬರುತ್ತಿರಲಿಲ್ಲ. ಅಂದರೆ ಇದೊಂದು ದೈವಿಕ ಆಗ್ರಹವಾಗಿದೆ. ಅವನು ಈ ಪ್ರಕಾಶವನ್ನು ಪ್ರಚಾರಪಡಿಸ ಬಯಸುತ್ತಾನೆ. ನಾನು ನೋಡುತ್ತಿದ್ದೇನೆ. ಮಕ್ಕ ನಿವಾಸಿಗಳು ಸರ್ವಶಕ್ತನಾದ ಅಲ್ಲಾಹನ ಈ ತಂಡದಲ್ಲಿ ಸೈನ್ಯದ ಹಿಂದೆ ಸೈನ್ಯ ಧಾವಿಸಿದಂತೆ ಬರುವರು. ಇದು ಆಕಾಶದ ಅಂದರೆ ದೈವಿಕ ಕಾರ್ಯವಾಗಿದೆ. ಆಂದರ ಭೂಮಂಡಲದ ಜನರ ವಿಚಾರದಲ್ಲಿ ವಿಚಿತ್ರವಾಗಿದೆ." (ನೂರುಲ್ ಹಖ್, ಭಾಗ–2, ರೂಹಾನಿ ಖಝಾಈನ್ ಸಂಪುಟ–8, ಪುಟ–197)

ಈ ದೃಷ್ಟಾಂತವು ಸಮಯಕ್ಕೆ ಸರಿಯಾಗಿ ಪ್ರಕಟಗೊಂಡಾಗ ಹಿಂದ್ ಪಾಕ್ ಉಪಖಂಡದ ಉಲಮಾಗಳು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ವಿರೋಧದಲ್ಲಿ ಅದನ್ನು ನಿರಾಕರಿಸಿದರು. ಹಾಗೆ ನೋಡಿದರೆ ಅವರೇ ಮೊದಲಗೊಂಡು ಸ್ವೀಕರಿಸಬೇಕಾಗಿತ್ತು. ಏಕೆಂದರೆ ಅವರೇ ಈ ದೃಷ್ಟಾಂತವನ್ನು ಕಾತರದಿಂದ ಪ್ರಕಟವಾಗುವ ಬಯಕೆ ಹೊಂದಿದ್ದರು. ಅಕಟಕಟಾ! ಅವರು ತಿಳಿಯಬೇಕಾಗಿತ್ತು. ಇದು ವಾಗ್ದತ್ತ ಮಸೀಹರ ವಿರೋಧ ಅಲ್ಲ. ಬದಲು ಎರಡು ಲೋಕಗಳ ಸರದಾರರಾದ ಹಝ್ರತ್ ಮುಹಮ್ಮದ್ ಮುಸ್ತಫ(ಸ) ರವರ ವಿರೋಧವಾಗಿದೆ. ಆ ಸಮಯ ಒಂದು ರೋಚಕವಾದ ಘಟನೆ, ಈ ದೃಷ್ಟಾಂತ ಪ್ರಕಟಗೊಂಡಿತ್ತು. ಗಮನಿಸಿರಿ.

ಮೌಲಾನ ಇಬ್ರಾಹಿಂ ಸಾಹಿಬ್ ಬಖಾಪೂರಿ(ರ) ವಿವರಿಸುತ್ತಾರೆ. ತಂದೆ ಹಾಗೂ ಮಗನಾದ ಇಬ್ಬರು ವ್ಯಕ್ತಿಗಳಾದ ಮೌಲ್ವಿ ಅಬ್ದುಲ್ ಜಬ್ಬಾರ್ "(ಹಾಗೂ ಮೌಲ್ವಿ ಅಬ್ದುಲ್ಲ ಗಝ್‌ನವಿ. ಅವರು ಓರ್ವ ಸಜ್ಜನ ಪುರುಷರಾಗಿದ್ದರು. ದಿವ್ಯ ಸ್ವಪ್ನ ಹಾಗೂ ದೇವವಾಣಿ ಪಡೆದವರಾಗಿದ್ದರು. ಅವರು ಭವಿಷ್ಯವಾಣಿ ಮಾಡಿದ್ದರು. ಖಾದಿಯಾನಿನಲ್ಲಿ ಪ್ರಕಾಶವೊಂದು ಅವತರಿಸಿದ್ದೆ ಆದರೆ ನನ್ನ ಸಂತಾನ ಅದರಿಂದ ವಂಚಿತವಾಗುವುದು. ಹಾಗೆಯೇ ಆಯಿತು. ಅವರ ಸಂತಾನಕ್ಕೆ ಹಝ್ರತ್ ಮಸೀಹ್ ಮೌಊದ್(ಅ) ರವರ ಮೇಲೆ ವಿಶ್ವಾಸ ತರುವ ಭಾಗ್ಯ ದೊರೆಯಲಿಲ್ಲ, ಮೌಲ್ವಿ ಅಬ್ದುಲ್ ಜಬ್ಬಾರ್ ಹಝ್ರತ್ ಮಸೀಹ್ ಮೌಊದ್(ಅ) ರವರ ವಿರೋಧಿಯಾಗಿದ್ದ. ಜೀವನವಿಡಿ ವಿರೋಧ ಮಾಡುತ್ತಿದ್ದ, ಹಝ್ರತ್ ಮಸೀಹ್ ಮೌಊದ್(ಅ) ಮೌಲ್ವಿ ಅಬ್ದುಲ್ಲ ಗಝ್‌ನವಿ ಕುರಿತು ಹೇಳಿದರು. ಅವರು ನನ್ನ ಕಾಲಘಟ್ಟ ಪಡೆಯುವವರಾಗಿದ್ದರೆ ನಾನು ನಿಶ್ಚಯವಾಗಿ ಹೇಳುತ್ತೇನೆ. ಅವರು ನನಗೆ ನನ್ನ ದಾವೆಯನ್ನು ಮನ್ನಿಸುತ್ತಿದ್ದರೆ ಹೊರತು ರದ್ದು ಮಾಡುತ್ತಿರಲಿಲ್ಲ)" ನನ್ನ ಬಳಿ ಬಂದು ಹೇಳತೊಡಗಿದರು. ಇಮಾಮ್ ಮಹದಿಯ ಆಗಮನ ಕುರಿತು ಚಂದ್ರ, ಸೂರ್ಯರ ಭವಿಷ್ಯವಾಣಿ ಸರಿಯಾಗಿದೆಯೇ? ಮೌಲ್ವಿ ಸಾಹಿಬ್ ಹೇಳಿದರು. ಹದೀಸ್ ಏನೋ ಸರಿಯಾಗಿದೆ. ಆದರೆ ಮಿರ್ಝಾ ಸಾಹೇಬರ ಬಲೆಗೆ ಬೀಳಬೇಡಿ. ಏಕೆಂದರೆ ಅವರು ಅದನ್ನು ತನ್ನ ಸತ್ಯತೆಗೋಸ್ಕರ ಒಂದು ಪುರಾವೆಯಾಗಿ ಬಳಸುತ್ತಿದ್ದಾರೆ. ಈ ಹದೀಸ್ ಇಮಾಮ್ ಮಹದಿಯ ಜನನ ಕುರಿತಾಗಿದೆಯೇ ಹೊರತು ದಾವೆಯ ಪುರಾವೆಯಾಗಿ ಅಲ್ಲ. ತಂದೆ ಹೇಳಿದರು. ಮೌಲ್ವಿ ಸಾಹಿಬ್! ನಾನು ನಿಮಗೆ ಕೇಳಿದ್ದಕ್ಕೆ ಉತ್ತರ ಕೊಟ್ಟಿದ್ದೀರಿ. ಇದು ಯಾರ ಮೇಲೆ ಹೊಂದುತ್ತದೆ ಎಂಬುದು ಬೇರೆ ವಿಷಯ. ನನ್ನ ಇಡೀ ವಯಸ್ಸು ನ್ಯಾಯಾಲಯದ ಮೊಕದ್ದಮೆಗಳಲ್ಲಿ ಕಳೆದಿದೆ. ಆದ ಕಾರಣ ನನಗೆ ಎಂದೂ ದಾವೆ ಹೂಡುವ ಮೊದಲು ಸಾಕ್ಷಿ ತರಲು ಹೇಳಿದ್ದ ಉದಾಹರಣೆ ಇಲ್ಲ. ಅದೇ ಸ್ಥಿತಿ ಮಿರ್ಝಾ ಸಾಹಿಬರದ್ದಾಗಿದೆ. ಅವರ ದಾವೆಯಂತೂ ಮುಂಚಿನಿಂದ ಇದೆ. ಅವರ ದಾವೆಯ ಸಾಕ್ಷಿಗೋಸ್ಕರ ಪುರಾವೆಯಾಗಿ ಈ ಸೂರ್ಯ, ಚಂದ್ರ ಗ್ರಹಣದ ದೃಷ್ಟಾಂತ ಗೋಚರವಾಗಿದೆ. ಆಗ ಮೌಲ್ವಿ ಸಾಹಿಬರು ಮೌನವಹಿಸಿದರು. ಇಬ್ಬರು ತಂದೆ ಮಗ ತನ್ನ ಊರಿಗೆ ಹೊರಟರು.

(ಖುತ್‌ಬ ಜುಮ್‌ಅ, ಹಝ್ರತ್ ಖಲೀಫತುಲ್ ಮೀಸೀಹ್ ಖಾಮಿಸ್. 20–03–2015)

ಈ ಭವಿಷ್ಯವಾಣಿ ಪೂರ್ಣಗೊಂಡಾಗ ಅದರ ಮೇಲೆ ನಾನಾ ರೀತಿಯ ಆಕ್ಷೇಪಗಳನ್ನು ಎತ್ತಿ ಇಂತಹದೊಂದು ಮಹೋನ್ನತ ಹದೀಸನ್ನು ಸಂಶಯಗಳಿಗೆ ಒಳಗಾಗುವಂತೆ ಪ್ರಯತ್ನ ಮಾಡಿದರು. ಈ ಹದೀಸಿನ ಬಗ್ಗೆ ಏನೇನು ಆಕ್ಷೇಪಗಳನ್ನು ಮಾಡಿದರು. ಈ ಕೆಳಗಿನ ವಿಷಯವನ್ನು ಗಮನಿಸಿರಿ.

1) ಈ ಹದೀಸ್ ದುರ್ಬಲವಾಗಿದೆ. ಅಂದರೆ ಇದು ರಸೂಲುಲ್ಲಾಹ್(ಸ) ರವರ ಹದೀಸ್ ಅಲ್ಲ. ಬದಲು ಸೃಷ್ಟಿಸಲಾಗಿದೆ. 2) ಹದೀಸಿನಲ್ಲಿದೆ ಅದು ವಿಶೇಷ ರೀತಿಯ ಸೂರ್ಯ, ಚಂದ್ರ, ಗ್ರಹಣವಾಗಿರುವುದು ಎಂದು. ಆದರೆ ಇದು ಸಾಮಾನ್ಯ ಜನಜನಿತ ರೀತಿಯಲ್ಲಿಯೇ ಆದ ಸೂರ್ಯ, ಚಂದ್ರ ಗ್ರಹಣವಾಗಿದೆ. 3) ಹದೀಸ್ ತಜ್ಞರು "ದಾರುಖುತುನಿ" ಹದೀಸು ಕುರಿತು ಕೆಲ ವರದಿಗಾರರ ಮೇಲೆ ಆಕ್ಷೇಪವೆತ್ತಿದ್ದಾರೆ. ಆದುದರಿಂದ ಇದು ಸಹೀ ಹದೀಸ್ ಅಲ್ಲ. 4) ಸೂರ್ಯ, ಚಂದ್ರ, ಗ್ರಹಣ ಉಂಟಾದ ನಂತರ ದಾವೆದಾರನು ಆಗಮಿಸಬೇಕೇ ಹೊರತು ಮೊದಲಲ್ಲ. 5) ಸೂರ್ಯ, ಚಂದ್ರ, ಗ್ರಹಣ ದೃಷ್ಟಾಂತ ಅಂತ್ಯ ದಿನದಂದು ಉಂಟಾಗುವುದೇ ಹೊರತು ಇಂದಲ್ಲ.

6) ಚಂದ್ರಗ್ರಹಣ 13 ರಂಝಾನಿಗೆ ಉಂಟಾಗಿದೆ. ಹದೀಸಿನ ಪ್ರಕಾರ ಮೊದಲ ರಂಝಾನಿಗೆ ಆಗಬೇಕಿತ್ತು. 7) ಸೂರ್ಯಗ್ರಹಣ 28 ರಂಝಾನಿಗೆ ಉಂಟಾಗಿದೆ. ಅದು ತಿಂಗಳಿನ ಮಧ್ಯದಲ್ಲಿ ಆಗಬೇಕಿತ್ತು. 8) ಒಂದು ಆಕ್ಷೇಪ ಹೀಗೂ ಮಾಡಲಾಗಿದೆ. ಸೂರ್ಯ, ಚಂದ್ರ, ಗ್ರಹಣ, ಈಗ ರಂಝಾನಿನಲ್ಲಿ ಉಂಟಾಗಿವೆ. ಆದರೆ ಮಹದಿ ಅದ ನಂತರ ಜನಿಸಲು ಸಾಧ್ಯವಿಲ್ಲವೇ.

ಇದೀಗ ನಾವು ಆಕ್ಷೇಪ ನಂಬರ್ 6 ರ ಉತ್ತರ ಬರೆಯುವೆವು. ಅದರ ಕುರಿತು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಒಂದು ಸಾವಿರ ರೂಪಾಯಿಗಳ ಬಹುಮಾನದ ಪಂಥಾಹ್ವಾನವನ್ನು ನೀಡಿದ್ದಾರೆ. ಅಂದರೆ ಚಂದ್ರಕ್ಕೆ ಗ್ರಹಣ ರಂಝಾನಿನ ಮೊದಲ ತಾರೀಖಿಗೆ ಆಗಬೇಕಿತ್ತು. ಬದಲು ಅದು 13 ರಂಝಾನ್‌ಗೆ ಉಂಟಾಯಿತು. ಅದಕ್ಕೆ ಉತ್ತರವೇನೆಂದರೆ, ಅಲ್ಲಾಹನು ಈ ಭೂಮ್ಯಾಕಾಶ ಸೃಷ್ಟಿಸಿದಾಗಿನಿಂದಲು ಚಂದ್ರ, ಸೂರ್ಯ, ಗ್ರಹಣಗಳನ್ನು ಉಂಟಾಗಲು ಒಂದು ದೇವನಿಯಮವನ್ನು ಮಾಡಿರುತ್ತಾನೆ. ಅದೇನೆಂದರೆ ಚಂದ್ರನಿಗೆ ಎಂದೇ ಗ್ರಹಣ ಉಂಟಾಗಲಿ. ಅದಕ್ಕೆ ನಿಗದಿಯಾಗಿರುವ ತಾರೀಖುಗಳು ಮಾತ್ರ ಚಂದ್ರಮಾಸದ 13, 14, 15 ತಾರಿಖುಗಳಲ್ಲಿಯೇ ಯಾವುದೇ ಒಂದು ತಾರೀಖಿಗೆ ಆಗುವುದು. ಅದೇ ರೀತಿ ಎಂದೇ ಸೂರ್ಯಗ್ರಹಣ ಉಂಟಾಗಲಿ. ಅದು ಚಂದ್ರಮಾಸದ 27, 28, 29 ತಾರೀಖುಗಳಲ್ಲಿ ಯಾವುದೇ ಒಂದು ತಾರೀಖಿಗೆ ಉಂಟಾಗುವುದು. ಹದೀಸಿನ ಪದಗಳು ಹೀಗಿವೆ. "ಯನ್‌ಕಸಿಫುಲ್ ಖಮರು ಲಿಅವ್ವಲಿ ಲೈಲತಿಮ್ ಮಿನ್ ರಂಝಾನ್" ಅದರ ಅನುವಾದ ರಂಝಾನಿನ ಮೊದಲ ರಾತ್ರಿಗೆ ಚಂದ್ರಗ್ರಹಣ ಉಂಟಾಗುವುದು ಎಂದು ಮಾಡಲಾಗುತ್ತದೆ. ಈ ಅನುವಾದ ಆ ಸಮಯ ಕೇವಲ ಹಝ್ರತ್ ಮಸೀಹ್ ಮೌಊದ್(ಅ) ರವರ ವಿರೋಧಕ್ಕೆ ಮಾತ್ರ ಮಾಡಲಾಗಿದೆ. ಏಕೆಂದರೆ ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ರವರಿಗೆ ಅದು ತಮ್ಮ ಸತ್ಯಸಾಕ್ಷ್ಯಕ್ಕಾಗಿ ಬಳಸುವಂತಾಗದಿರಲಿ ಎಂದು. ಇದು ಅಲ್ಲಾಹನ ಪ್ರಾಕೃತಿಕ ನಿಯಮವಾಗಿದೆ. ಮನುಷ್ಯನು ಸತ್ಯವನ್ನು ವಿರೋಧಿಸಿದರೆ ಅವನಿಂದ ಆಜ್ಞಾನ ಪ್ರಕಟವಾಗುತ್ತದೆ. ಉದಾಹರಣೆಗೆ ಅಬೂ ಜಹಲ್ ಮೊದಲು ಅಬೂಲ್ ಹಕಮ್ ಆಗಿದ್ದನು. ಅಂದರೆ ವಿವೇಕಿಗಳ ಮಹಾಪಿತ ಎಂದು ಕರೆಯಲ್ಪಡುತ್ತಿದ್ದ. ಶೇಖ್ ಮುಹಮ್ಮದ್

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಹರ್ಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಬೂಬಕರ್, ಉಮರ್, ಉಸ್ಮಾನ್, ಅಲಿ ರಝಿಯಲ್ಲಾಹು ಅನ್‌ಹುಮ್‌ರಂತಹ ಸ್ವಭಾವಗುಣಗಳನ್ನು ತನ್ನೊಳಗೆ ಉಂಟುಮಾಡುವ ತನಕ ಯಾವನೇ ವ್ಯಕ್ತಿ ಸತ್ಯವಿಶ್ವಾಸಿಯಾಗಲಾರನು. ಇವರೆಲ್ಲರೂ ಯಥಾರ್ಥವಾಗಿ ಧರ್ಮದ ಸಂರಕ್ಷಕರಾಗಿದ್ದರು.**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಧುನ್ನೂರೈನ್ ಹರ್ಝ್ರತ್ ಉಸ್ಮಾನ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಹರ್ಝ್ರತ್ ಪೈಗಂಬರರ(ಸ) ಕಾಲದಲ್ಲಿ ನಾವು ಜನರಲ್ಲಿ ಒಬ್ಬರನ್ನು ಮತ್ತೊಬ್ಬರಿಗಿಂತ ಉತ್ತಮರೆಂದು ಭಾವಿಸುತ್ತಿದ್ದೆವು. ಹರ್ಝ್ರತ್ ಅಬೂಬಕರ್(ರ) ಎಲ್ಲರಿಗಿಂತ ಉತ್ತಮರು, ಅನಂತರ ಹರ್ಝ್ರತ್ ಉಮರ್ ಬಿನ್ ಖತ್ತಾಬ್(ರ) ಅನಂತರ ಉಸ್ಮಾನ್ ಬಿನ್ ಅಫ್ಫಾನ್(ರ) ಎಂದು ತಿಳಿದಿದ್ದೆವು.**

**ಅಲ್ಲಾಹನಾಣೆ, ಅಲ್ಲಾಹನು ಶೇಖೈನ್‌ರಾದ ಹರ್ಝ್ರತ್ ಅಬೂಬಕರ್ ಮತ್ತು ಹರ್ಝ್ರತ್ ಉಮರ್ ಹಾಗೂ ಮೂರನೆಯದಾಗಿ ಧುನ್ನುರೈನ್‌ರಾದ ಹರ್ಝ್ರತ್ ಉಸ್ಮಾನ್‌ರನ್ನು ಇಸ್ಲಾಮಿನ ಬಾಗಿಲುಗಳ ಮತ್ತು ಸೃಷ್ಟಿಗಳಲ್ಲಿ ಉತ್ತಮರಾದ ಮುಹಮ್ಮದ್ ರಸೂಲುಲ್ಲಾಹ್‌ರ ಸೈನ್ಯದ ಪ್ರಮುಖರನ್ನಾಗಿ ಮಾಡಿರುವನು.**

**ಹದಿನೈದು ದಿವಂಗತರಾದ ಸನ್ಮಾನ್ಯ ಮುಹಮ್ಮದ್ ಸಾದಿಖ್ ಸಾಹಿಬ್, ದಾರುಲ್‌ಯಮನ್ ರಬ್ವದ ರಶೀದ್ ಅಹ್ಮದ್ ಅಲ್‌ವಾಲ್ ಸಾಹಿಬ್‌ರ ಪತ್ನಿಯಾದ ಮುಖ್‌ತಾರಾ ಬೀಬಿ ಸಾಹಿಬ, ಮಂಝೂರ್ ಅಹ್ಮದ್ ಶಾಹ್ ಸಾಹಿಬ್, ಯು.ಎಸ್.ಎ. ಯ ಅಬ್ದುರ್ರಹ್ಮಾನ್ ಸಲೀಂ ಸಾಹಿಬ್‌ರ ಪತ್ನಿಯಾದ ಹಮೀದ ಉಖ್ತರ್ ಸಾಹಿಬ, ಸನ್ಮಾನ್ಯ ನಾಸಿರ್ ಪೀಟರ್ ಲೋಟ್‌ಸೀನ್ ಸಾಹಿಬ್, ಜಾಮಿಅ ರಬ್ವದ ವೈಸ್ ಪ್ರಿನ್ಸಿಪಾಲ್ ಆದ ಮುರಬ್ಬಿ ಖಲೀಲ್ ಅಹ್ಮದ್ ತನ್ವೀರ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ರಝಿಯ ತನ್ವೀರ್ ಸಾಹಿಬ, ಸರ್‌ಗೋಧ ಜಿಲ್ಲೆಯ ದೋಥ ಗ್ರಾಮದ ಮಿಯಾ ಶೇರ್ ಮುಹಮ್ಮದ್ ಸಾಹಿಬ್‌ರ ಮಗನಾದ ಮಿಯಾ ಮಂಝೂರ್ ಅಹ್ಮದ್ ಗ್ಹಾಲಿಬ್, ಯಮನಿನ ಹಮೀದ್ ಅಹ್ಮದ್ ಅದನ್ ಸಾಹಿಬ್‌ರ ಪತ್ನಿಯಾದ ಬುಶ್ರಾ ಹಮೀದ್ ಅನ್ವರ್ ಅದ್‌ನೀ ಸಾಹಿಬ, ಏಲ್ಡ್ ವರೀಡ್ ಕೆನ್ಯಾದ ಮುಬಲ್ಲಿಗ್ ಆಗಿರುವ ಸನ್ಮಾನ್ಯ ಮುಹಮ್ಮದ್ ಅಫ್‌ಝಲ್ ಝಫರ್ ಸಾಹಿಬ್‌ರ ಪತ್ನಿಯಾದ ನೂರುಸ್ಸಬಾಹುಝ್ಝಫರ್ ಸಾಹಿಬ, ಮುಹಮ್ಮದ್ ಅಹ್ಮದ್ ನಈಂ ಸಾಹಿಬ್‌ರ ತಂದೆಯಾದ ಸುಲ್ತಾನ್ ಅಲಿ ರೈಹಾನ್ ಸಾಹಿಬ್, ಮೌಲವಿ ಗುಲಾಂ ಖಾದಿರ್ ಸಾಹಿಬ್, ಖಾದಿಯಾನಿನ ದರ್ವೇಶ್ ಆದ ಮುಹಮ್ಮದ್ ಸಾದಿಖ್ ಸಾಹಿಬ್‌ರ ಪತ್ನಿಯಾದ ಮಹ್ಮೂದ ಬೇಗಂ ಸಾಹಿಬ, ಅರ್ದನಿನ ಖ್ಹಾಲಿದ್ ಸಅದುಲ್ಲಾಹ್ ಮಿಸ್ರೀ ಸಾಹಿಬ್, ರಬ್ವದ ದಾರುಲ್‌ಫಝ್ಲಿನ ಸನ್ಮಾನ್ಯ ಮುಹಮ್ಮದ್ ಮುನೀರ್ ಸಾಹಿಬ್ ಮತ್ತು ರಬ್ವದ ದಾರುಲ್‌ಬರ್ಕತಿನ ಮಾಸ್ಟರ್ ನಧೀರ್ ಅಹ್ಮದ್ ಸಾಹಿಬ್ ಅವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

**ಅಲ್‌ಇಸ್ಲಾಂ ವೆಬ್‌ಸೈಟ್ ಪವಿತ್ರ ಖುರ್‌ಆನ್ ಸರ್ಚಿನ ಒಂದು ಹೊಸ ವೆಬ್‌ಸೈಟ್‌ನ ಮೊದಲ ವೆರ್ಶನ್ ಶುರುಮಾಡಿದೆ ಅದರ ಉದ್ಘಾಟನೆಯ ಘೋಷಣೆ**

**ಪಾಕಿಸ್ತಾನ ಮತ್ತು ಅಲ್‌ಜೀರಿಯದ ಅಹ್ಮದಿಯರಿಗಾಗಿ ದುಆ ಮಾಡಲು ಪುನಃ ವಿಶೇಶ ಕೋರಿಕೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹರ್ಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **09–04–2021** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಹರ್ಝ್ರತ್ ಉಸ್ಮಾನ್‌ರ ಪ್ರಸ್ತಾಪ ನಡೆಯುತ್ತಿತ್ತು. ಅವರ ಸ್ಥಾನ ಏನಾಗಿತ್ತು. ಹರ್ಝ್ರತ್ ಪೈಗಂಬರರ(ಸ) ಜೀವಿತದಲ್ಲೂ ನಂತರವೂ ಸಹಾಬರಿಗೆ ಅವರ ಕುರಿತು ಏನು ಅಭಿಪ್ರಾಯವಿತ್ತು ಎಂಬುದರ ಕುರಿತು ವರದಿಯಿದೆ. ಹರ್ಝ್ರತ್ ಇಬ್ನು ಉಮರ್‌ರಿಂದ(ರ) ನಾಫೀ ವರದಿ ಮಾಡುತ್ತಾರೆ: ಹರ್ಝ್ರತ್ ಪೈಗಂಬರರ(ಸ) ಕಾಲದಲ್ಲಿ ನಾವು ಜನರಲ್ಲಿ ಒಬ್ಬರನ್ನು ಮತ್ತೊಬ್ಬರಿಗಿಂತ ಉತ್ತಮರೆಂದು ಭಾವಿಸುತ್ತಿದ್ದೆವು. ಹರ್ಝ್ರತ್ ಅಬೂಬಕರ್(ರ) ಎಲ್ಲರಿಗಿಂತ ಉತ್ತಮರು, ಅನಂತರ ಹರ್ಝ್ರತ್ ಉಮರ್ ಬಿನ್ ಖತ್ತಾಬ್(ರ) ಅನಂತರ ಉಸ್ಮಾನ್ ಬಿನ್ ಅಫ್ಫಾನ್(ರ) ಎಂದು ತಿಳಿದಿದ್ದೆವು. (ಸಹೀಹ್ ಬುಖಾರಿ ಕಿತಾಬ್ ಫಝಾಎಲುಸ್ಸಹಾಬ ಅನ್ನಬಿ(ಸ) ಹದೀಸ್–3655)

ಇನ್ನೊಂದು ವರದಿ ಬುಖಾರಿಯಲ್ಲಿ ಹೀಗಿದೆ: ಹರ್ಝ್ರತ್ ಇಬ್ನು ಉಮರ್‌ರಿಂದ(ರ) ನಾಫೀ ವರದಿ ಮಾಡುತ್ತಾರೆ: ನಾವು ಹರ್ಝ್ರತ್ ಪೈಗಂಬರರ(ಸ) ಕಾಲದಲ್ಲಿ ಸಹಾಬರಲ್ಲಿ ಯಾರನ್ನೂ ಹರ್ಝ್ರತ್ ಅಬೂಬಕರ್‌ರಿಗೆ ಸಮವೆಂದು ಭಾವಿಸುತ್ತಿರಲಿಲ್ಲ. ಅನಂತರ ಹರ್ಝ್ರತ್ ಉಮರ್(ರ), ಅನಂತರ ಹರ್ಝ್ರತ್ ಉಸ್ಮಾನ್‌ರನ್ನು(ರ) ಶ್ರೇಷ್ಠರೆಂದು ಭಾವಿಸುತ್ತಿದ್ದೆವು. (ಸಹೀಹ್ ಬುಖಾರಿ ಕಿತಾಬ್ ಫಝಾಎಲುಸ್ಸಹಾಬ ಅನ್ನಬಿ(ಸ) ಹದೀಸ್–3697)

ಹರ್ಝ್ರತ್ ಪೈಗಂಬರರ(ಸ) ನಂತರ ಶ್ರೇಷ್ಠರಾದ ವ್ಯಕ್ತಿಗಳಲ್ಲಿ ಹರ್ಝ್ರತ್ ಉಸ್ಮಾನ್(ರ) ಒಳಪಟ್ಟಿದ್ದ ಬಗ್ಗೆ ಸಿಗುವ ಒಂದು ವರದಿಯಲ್ಲಿ ಮುಹಮ್ಮದ್ ಬಿನ್ ಹನ್‌ಫಿಯ ತನ್ನ ತಂದೆಯಾದ ಹರ್ಝ್ರತ್ ಅಲಿ ರಝಿಯಲ್ಲಾಹು ಅನ್‌ಹುರೊಡನೆ ಹರ್ಝ್ರತ್ ಪೈಗಂಬರರ(ಸ) ನಂತರ ಮುಸ್ಲಿಮರಲ್ಲಿ ಶ್ರೇಷ್ಠರು ಯಾರೆಂದು ಕೇಳಿದೆ. ಹರ್ಝ್ರತ್ ಅಬೂಬಕರ್(ರ) ಎಂದು ಹರ್ಝ್ರತ್ ಅಲಿ(ರ) ಹೇಳಿದರು. ಅನಂತರ ಯಾರೆಂದು ನಾನು ಕೇಳಿದೆ. ಹರ್ಝ್ರತ್ ಉಮರ್(ರ) ಎಂದು ಅವರು ಹೇಳಿದರು. ಅನಂತರ ಯಾರೆಂದು ನಾನು ಹೆದರುತ್ತಾ ಕೇಳಿದೆ. ಹರ್ಝ್ರತ್ ಉಸ್ಮಾನ್(ರ) ಎಂದು ಅವರು ಹೇಳಿದರು. ನಾನು ಕೇಳಿದೆ: ಹೇ ನನ್ನ ತಂದೆ, ಹರ್ಝ್ರತ್ ಉಸ್ಮಾನ್‌ರ(ರ) ನಂತರ ನೀವು ಎಲ್ಲರಿಗಿಂತ ಶ್ರೇಷ್ಠರಲ್ಲವೇ? ಹರ್ಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಹೇಳಿದರು: "ನಾನು ಮುಸ್ಲಿಮರಲ್ಲಿ ಒಬ್ಬ ಸಾಮಾನ್ಯ ವ್ಯಕ್ತಿಯಾಗಿರುವೆನು. (ಸುನನ್ ಅಬೂದಾವೂದ್ ಕಿತಾಬುಸ್ಸನ ಬಾಬುತ್ತಫ್ಝೀಲ್, ಹದೀಸ್–4629)

ಹರ್ಝ್ರತ್ ಉಸ್ಮಾನ್‌ರೊಂದಿಗೆ ಹಗೆಯಿರಿಸುತ್ತಿದ್ದ ಒಬ್ಬ ವ್ಯಕ್ತಿಯ ಜನಾರ್ಝ಼ ನಮಾರ್ಝ಼ನ್ನು ಹರ್ಝ್ರತ್ ಪೈಗಂಬರ್(ಸ) ನಿರ್ವಹಿಸಿರಲಿಲ್ಲವೆಂಬುದರಿಂದ ಹರ್ಝ್ರತ್ ಪೈಗಂಬರರೊಂದಿಗೆ(ಸ) ಹರ್ಝ್ರತ್ ಉಸ್ಮಾನ್‌ರ(ರ) ಸಂಬಂಧ ಹೇಗಿತ್ತು, ಹರ್ಝ್ರತ್ ಪೈಗಂಬರರ(ಸ) ದೃಷ್ಟಿಯಲ್ಲಿ ಅವರ ಸ್ಥಾನ ಏನಾಗಿತ್ತು ಎಂಬುದರ ಅಂದಾಜು ಆಗುತ್ತದೆ. ಅದರ ವಿಶದವಿವರ ಹೀಗಿದೆ: ಹರ್ಝ್ರತ್ ಜಾಬಿರ್(ರ) ವರದಿ ಮಾಡುತ್ತಾರೆ: ಒಂದು ಸಲ

ಹಝ್ರತ್ ಪೈಗಂಬರರ(ಸ) ಸನ್ನಿಧಿಯಲ್ಲಿ, ಜನಾಝ ನಿರ್ವಹಿಸುವ ಉದ್ದೇಶದಿಂದ ಒಬ್ಬ ವ್ಯಕ್ತಿಯ ಜನಾಝವನ್ನು ತರಲಾಯಿತು. ಆದರೆ ಹಝ್ರತ್ ಪೈಗಂಬರ್(ಸ) ಅವನ ಜನಾಝ ನಮಾಝ್ ನಿರ್ವಹಿಸಲಿಲ್ಲ. ಒಬ್ಬ ವ್ಯಕ್ತಿ ಹೇಳಿದರು: ಯಾ ರಸೂಲಲ್ಲಾಹ್, ನೀವು ಯಾರದಾದರೂ ಜನಾಝ ನಮಾಝನ್ನು ನಿರ್ವಹಿಸದೇ ಇರುವುದಾಗಿ ನಾವು ಇದಕ್ಕೆ ಮುಂದೆ ಎಂದೂ ನೋಡಿಲ್ಲ. ಹಝ್ರತ್ ಪೈಗಂಬರ್(ಸ) ಹೇಳಿದರು: ಈ ವ್ಯಕ್ತಿ ಉಸ್ಮಾನ್‌ರೊಂದಿಗೆ ಹಗೆ ಇರಿಸುತ್ತಿದ್ದನು. ಆದ್ದರಿಂದ ಅಲ್ಲಾಹನು ಅವನ ಶತ್ರುವಾಗಿರುವನು.
(ಸುನನ್ ಅತ್ತಿರ್‌ಮಿಧಿ, ಅಬ್ವಾಬುಲ್ ಮನಾಖಿಬ್ ಉಸ್ಮಾನ್...... ಹದೀಸ್–3709)

ಹಝ್ರತ್ ಉಸ್ಮಾನ್‌ರ(ರ) ನೀತಿ ನ್ಯಾಯದ ಸ್ಥಿತಿಯ ಬಗ್ಗೆ ವರದಿಯಿದೆ. ತನ್ನ ಸಹೋದರ ತಪ್ಪು ಮಾಡಿದ್ದಾಗಿ ಸಾಬೀತಾದಾಗ ಅವನಿಗೆ ಶಿಕ್ಷೆ ಕೊಡಲು ಹೇಳಿದ್ದರು. ಉಬೈದುಲ್ಲಾಹ್ ಬಿನ್ ಅದ್ದೀ ವರದಿ ಮಾಡುತ್ತಾರೆ: ಹಝ್ರತ್ ಮುಸ್‌ವರ್ ಬಿನ್ ಮಖ್‌ರಮ ಮತ್ತು ಅಬ್ದುರ್ರಹ್ಮಾನ್ ಬಿನ್ ಅಸ್ವದ್ ಬಿನ್ ಅಬ್ದೇ ಯಗೂಸ್ ಇಬ್ಬರು ನನ್ನೊಡನೆ ಕೇಳಿದರು: ಹಝ್ರತ್ ಉಸ್ಮಾನ್‌ರ ಸಹೋದರನಾದ ವಲೀದ್‌ನ ಕುರಿತು ಮಾತುಕತೆ ನಡೆಸಲು ನಿನಗೆ ಏನಾಗಿದೆ. ಏಕೆಂದರೆ ಜನರು ಅವರ ಕುರಿತು ಕೆಲವು ತಪ್ಪು ಕೃತ್ಯಗಳ ಕಾರಣದಿಂದ ಬಹಳವಾಗಿ ವದಂತಿಗಳನ್ನು ಹಬ್ಬಿಸಿದ್ದಾರೆ. ಆಗ ನಾನು ಹಝ್ರತ್ ಉಸ್ಮಾನ್‌ರ ಬಳಿಗೆ ಹೋದೆನು. ಅವರು ನಮಾಝಿಗಾಗಿ ಹೊರಗೆ ಬಂದರು. ನನಗೆ ನಿಮ್ಮೊಡನೆ ಒಂದು ಸಂಗತಿಯ ಬಗ್ಗೆ ಕೇಳಲಿಕ್ಕೆ ಇದೆ ಮತ್ತು ನಿಮ್ಮ ಒಳಿತನ್ನು ಬಯಸುತ್ತೇನೆ ಎಂದು ನಾನು ಹೇಳಿದೆ. ಹಝ್ರತ್ ಉಸ್ಮಾನ್(ರ) ಹೇಳಿದರು: ಬಹಳ ಚೆನ್ನ, ನಿನ್ನೊಡನೆ ಮಾಮ್ಮರ್ ಹೇಳಿದ್ದನೇ? ಅವರು ಹೇಳಿರಬೇಕೆಂದು ನಾನು ಭಾವಿಸುತ್ತೇನೆ. ಅವರ ಸಂದೇಶವನ್ನು ಪಡೆದುಕೊಂಡು ನೀನು ಬಂದಿದ್ದೀಯಲ್ಲವೇ? ನಾನು ನಿಮ್ಮಿಂದ ಅಲ್ಲಾಹನ ಅಭಯವನ್ನು ಯಾಚಿಸುತ್ತೇನೆ. ಹೀಗೆ ಹೇಳಿ ಅವರು ಅಲ್ಲಿಂದ ಹೊರಟು ಹೋದರು. ಹಝ್ರತ್ ಉಸ್ಮಾನ್‌ರ ಬಳಿಗೆ ಬಂದ ವ್ಯಕ್ತಿ ಮರಳಿ ಜನರ ಬಳಿಗೆ ಹೋದರು. ಅಷ್ಟರಲ್ಲಿ ಹಝ್ರತ್ ಉಸ್ಮಾನ್‌ರ ದೂತನು ಬಂದನು. ನೀನು ಬಯಸುವ ಒಳಿತೇನೆಂದು ಹಝ್ರತ್ ಉಸ್ಮಾನ್(ರ) ಕೇಳಿದರು. ನಾನು ಹೇಳಿದೆ: ಅಲ್ಲಾಹನು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಸತ್ಯದೊಂದಿಗೆ ಕಳುಹಿಸಿದನು. ಅವರ ಮೇಲೆ ಗ್ರಂಥವನ್ನು ಅವತೀರ್ಣಗೊಳಿಸಿದನು. ಅಲ್ಲಾಹನ ಮತ್ತು ಪೈಗಂಬರರ(ಸ) ಕರೆಗೆ ಉತ್ತರ ಕೊಟ್ಟವರಲ್ಲಿ ನೀವು ಸಹ ಸೇರಿದ್ದೀರಿ. ನೀವು ಎರಡು ಹಿಜ್ರತ್‌ಗಳನ್ನು ಮಾಡಿದ್ದೀರಿ. ಹಝ್ರತ್ ಪೈಗಂಬರರ(ಸ) ಜೊತೆಗೆ ಇದ್ದೀರಿ. ನೀವು ಹಝ್ರತ್ ಪೈಗಂಬರರ(ಸ) ಜೀವಿತಶೈಲಿಯನ್ನು ಕಂಡಿದ್ದೀರಿ. ಅನಂತರ ನಾನು ಹೇಳಿದೆ: ನಿಮ್ಮ ಸಹೋದರನಾದ ವಲೀದ್‌ರ ಕುರಿತು ಜನರು ಬಹಳಷ್ಟು ಹೇಳಿರುವರು. ಹಝ್ರತ್ ಉಸ್ಮಾನ್(ರ) ಕೇಳಿದರು: ನೀವು ಹಝ್ರತ್ ಪೈಗಂಬರರ(ಸ) ಕಾಲವನ್ನು ಪಡೆದಿದ್ದೀರಾ? ನಾನು ಹೇಳಿದೆ: ಇಲ್ಲ, ಆದರೆ ನಿಮ್ಮಿಂದ ಅವರ ಕಾಲದ ಸಂಗತಿಗಳು ತಲುಪಿವೆ. ಹಝ್ರತ್ ಉಸ್ಮಾನ್(ರ) ಹೇಳಿದರು: ಖಂಡಿತವಾಗಿಯೂ ಅಲ್ಲಾಹನು ಮುಹಮ್ಮದ್‌ರನ್ನು(ಸ) ಸತ್ಯದೊಂದಿಗೆ ಕಳುಹಿಸಿದ್ದನು. ಅಲ್ಲಾಹನ ಮತ್ತು ಅವನ ಪೈಗಂಬರರ(ಸ) ಕರೆಯನ್ನು ಸ್ವೀಕರಿಸಿದ ಜನರಲ್ಲಿ ನಾನು ಸೇರಿದ್ದೇನೆ. ಹಝ್ರತ್ ಪೈಗಂಬರ್‌ರನ್ನು(ಸ) ಯಾವೆಲ್ಲ ಸಂಗತಿಗಳೊಂದಿಗೆ ಕಳುಹಿಸಲಾಗಿತ್ತೋ ಅವೆಲ್ಲದರ ಮೇಲೆ ನಾನು ವಿಶ್ವಾಸವಿಡುತ್ತೇನೆ. ನೀವು ಹೇಳಿದಂತೆ ನಾನು ಎರಡು ಹಿಜ್ರತ್‌ಗಳನ್ನು ಮಾಡಿರುವೆನು. ನಾನು ಹಝ್ರತ್ ಪೈಗಂಬರರ(ಸ) ಜೊತೆಗೆ ಇದ್ದೆ ಮತ್ತು ಅವರ ಕೈಯಲ್ಲಿ ಬೈಅತ್ ಮಾಡಿದೆ. ಅಲ್ಲಾಹನಾಣೆ ನಾನು ಅವರಿಗೆ ಅವಿಧೇಯತೆ ತೋರಿಸಿರಲಿಲ್ಲ. ಅವರನ್ನು ವಂಚಿಸಲಿಲ್ಲ. ಹಝ್ರತ್ ಪೈಗಂಬರರ(ಸ) ಮರಣದ ನಂತರ ನಾನು ಹಝ್ರತ್ ಅಬೂಬಕರ್‌ರಿಗೆ ವಿಧೇಯನಾಗಿದ್ದೆ. ಹಝ್ರತ್ ಉಮರ್‌ರಿಗೂ ವಿಧೇಯನಾಗಿದ್ದೆ. ಅವರನ್ನು ಸಹ ಅನುಸರಿಸುತ್ತಿದ್ದೆ. ಅನಂತರ ನನ್ನನ್ನು ಖಲೀಫನನ್ನಾಗಿ ಮಾಡಲಾಯಿತು. ಹಿಂದಿನ ಖಲೀಫರಿಗೆ ಇರುವ ಅದೇ ಹಕ್ಕು ನನಗೂ ಇಲ್ಲವೇ? ಏಕಿಲ್ಲವೆಂದು ನಾನು ಉತ್ತರಿಸಿದೆ. ಹಾಗಾದರೆ ನನ್ನ ಬಳಿಗೆ ತಲುಪುತ್ತಿರುವ ಈ ಸಂಗತಿಗಳೇನು? ವಲೀದ್‌ನ ವಿಷಯದಲ್ಲಿ ನೀನು ಹೇಳಿದ್ದೀಯ. ನಾವು ಅವರಿಗೆ ತಕ್ಕುದಾದ ಶಿಕ್ಷೆಯನ್ನು ಕೊಡುವೆವು. ಅನಂತರ ಅವರು ಹಝ್ರತ್ ಅಲಿಯನ್ನು ಕರೆದರು. ಎಂಬತ್ತು ಚಾವಟಿಯೇಟು ಕೊಡಲು ಅವರೊಡನೆ ಹೇಳಿದರು. (ಸಹೀಹ್ ಬುಖಾರಿ ಕಿತಾಬ್ ಅಸ್ಹಾಬುನ್ನಬಿ(ಸ) ಬಾಬ್ ಮನಾಖಿಬ್ ಉಸ್ಮಾನ್...... ಹದೀಸ್–3696)

ಹಝ್ರತ್ ಸಯ್ಯದ್ ಝೈನುದ್ದೀನ್ ವಲಿಯುಲ್ಲಾಹ್ ಶಾಹ್ ಸಾಹಿಬ್ ಅದರ ವ್ಯಾಖ್ಯಾನದಲ್ಲಿ ಹೇಳುತ್ತಾರೆ; ಶರಾಬು ಕುಡಿದ ಕಾರಣದಿಂದ ವಲೀದ್ ಬಿನ್ ಉಖ್‌ಬರಿಗೆ ಶಿಕ್ಷೆ ನೀಡಲಾಯಿತೆಂದು ಬುಖಾರಿಯಲ್ಲಿ ವರದಿಯಾಗಿದೆ. ಅವರು ಕುಡಿದದ್ದು ದ್ರಾಕ್ಷೆ ಅಥವಾ ಖರ್ಜೂರದ ಪಾನೀಯವಲ್ಲ ಬದಲಾಗಿ ಜಾಹಿಲಿಯ್ಯ ಕಾಲದಲ್ಲಿ ಕುಡಿಯಲಾಗುತ್ತಿದ್ದ ಶರಾಬು ಆಗಿತ್ತೆಂದು ಸಾಕ್ಷಿಗಳ ಮೂಲಕ ಸಾಬೀತಾದಾಗ ಹಝ್ರತ್ ಉಸ್ಮಾನ್(ರ) ನಿಕಟ ಸಂಬಂಧವೆಂಬುದನ್ನು ಗಮನದಲ್ಲಿಡಲಿಲ್ಲ. ಬದಲಾಗಿ ನಿಕಟ ಸಂಬಂಧದ ಕಾರಣ ಇಮ್ಮಡಿ ಶಿಕ್ಷೆಯನ್ನು ಕೊಟ್ಟರು. ನಾಲ್ವತ್ತು ಚಾವಟಿ ಏಟಿಗೆ ಬದಲಿಗೆ ಎಂಬತ್ತು ಚಾವಟಿಯೇಟು ಕೊಡಿಸಿದರು. (ಸಹೀಹ್ ಬುಖಾರಿ ಉರ್ದು ಅನುವಾದ, ಸಂಪುಟ–7, ಪುಟ–192, ನಝಾರತ್ ಇಶಾಅತ್ ರಬ್ವಾ)

ಇನ್ನೊಂದು ವರದಿಯಲ್ಲಿ ಬಂದಿದೆ. ಹಝ್ರತ್ ಉಸ್ಮಾನ್ ಸ್ವತಂತ್ರಗೊಳಿಸಿದ ಗುಲಾಮರಾದ ಹಮ್‌ರಾನ್ ವರದಿ ಮಾಡಿದ್ದಾಗಿ ಅತಾ ಬಿನ್ ಯಝೀದ್ ಹೇಳುತ್ತಾರೆ: ಒಂದು ಸಲ ಹಝ್ರತ್ ಉಸ್ಮಾನ್(ರ) ಒಂದು ಪಾತ್ರೆಯಲ್ಲಿ ನೀರನ್ನು ತರಿಸಿದರು. ತಮ್ಮ ಎರಡೂ ಕೈಗಳನ್ನು ಮೂರು ಬಾರಿ ನೀರಿನಿಂದ ತೊಳೆದರು. ಅನಂತರ ತಮ್ಮ ಬಲಗೈಯಿಂದ ಪಾತ್ರೆಯಿಂದ ನೀರನ್ನು ತೆಗೆದುಕೊಂಡು ಬಾಯಿ ಮುಕ್ಕಳಿಸಿದರು. ಮೂಗನ್ನು ಶುಚಿಗೊಳಿಸಿದರು. ಅನಂತರ ಮುಖ, ಕೈಗಳನ್ನು ಮೂರು ಬಾರಿ ತೊಳೆದರು. ತಮ್ಮ ತಲೆಯನ್ನು ಸವರಿದರು. ಅನಂತರ ಎರಡೂ ಕಾಲುಗಳನ್ನು ಮೂರು ಬಾರಿ ತೊಳೆದರು. ಅನಂತರ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾಗಿ ಹೇಳಿದರು: ಯಾವನು ನಾನು ವುಝು ಮಾಡಿದ ರೀತಿಯಲ್ಲಿ ವುಝು ಮಾಡಿಕೊಂಡು ಎರಡು ರಕಅತ್ ನಮಾಝ್ ನಿರ್ವಹಿಸುವಾಗ ಬೇರೆ ಆಲೋಚನೆಗಳು ಬರದಂತೆ ನೋಡಿಕೊಳ್ಳುತ್ತಾನೋ ಅವನಿಂದ ಅದಕ್ಕಿಂತ ಮುಂಚೆ ಆದ ಎಲ್ಲ ಪಾಪಗಳನ್ನು ಅಲ್ಲಾಹನು ಕ್ಷಮಿಸುವನು. (ಸಹೀಹ್ ಬುಖಾರಿ ಕಿತಾಬುಲ್ ವಧು, ಹದೀಸ್–159)

ಜುಮಾ ದಿವಸ ಎರಡನೇ ಅಧಾನಿನ ವರ್ಧನೆ ಸಹ ಹಝ್ರತ್ ಉಸ್ಮಾನ್‌ರ ಕಾಲದಲ್ಲಿ ಉಂಟಾಗಿತ್ತು. ಅದರ ವಿಶದ ವಿವರ ಹೀಗಿದೆ. ಝುಹರಿ ಸಾಯಿಬ್ ಬಿನ್ ಯಝೀಧ್‌ರಿಂದ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರರ(ಸ), ಹಝ್ರತ್ ಅಬೂಬಕರರ(ರ), ಹಝ್ರತ್ ಉಮರರ(ರ) ಕಾಲದಲ್ಲಿ ಜುಮಾ ದಿನದಂದು ಮೊದಲ ಅಧಾನ್ ಇಮಾಂ ಮಿಂಬರ್‌ನಲ್ಲಿ ಕುಳಿತುಕೊಳ್ಳುವಾಗ ನೀಡಲಾಗುತ್ತಿತ್ತು. ಹಝ್ರತ್ ಉಸ್ಮಾನ್‌ರ(ರ) ಕಾಲದಲ್ಲಿ ಜನರು ಹೆಚ್ಚಾದಾಗ ಎರಡನೇ ಅಧಾನ್ ನೀಡುವುದನ್ನು ರೂಢಿಗೆ ತರಲಾಯಿತು. ಅದನ್ನು ಮಸೀದಿಯ ಬಾಗಿಲ ಬಳಿ ಇರುವ ಒಂದು ಕಲ್ಲಿನ ಮೇಲೆ ನಿಂತುಕೊಂಡು ನೀಡಲಾಗುತ್ತಿತ್ತು. ಅದರ ಹೆಸರು ಝುಹ್‌ರಾ ಎಂದಾಗಿತ್ತು. (ಸಹೀಹ್ ಬುಖಾರಿ ಕಿತಾಬುಲ್ ಜುಮುಅ, ಹದೀಸ್–912)

ಈದ್ ಹಬ್ಬದ ದಿನ ಜುಮಾ ನಮಾಝಿನ ರಿಯಾಯಿತಿ ಬಗ್ಗೆ ವರದಿಯಿದೆ. ಇಬ್ನು ಅಝ್‌ಹರ್ ಸ್ವತಂತ್ರಗೊಳಿಸಿದ ಗುಲಾಮನಾದ ಅಬೂ ಉಬೈದ ವರದಿ ಮಾಡುತ್ತಾರೆ: ಅವರು ಹಝ್ರತ್ ಉಮರರ ಹಿಂದೆ ಈದುಲ್‌ಅಝ್‌ಹ ದಿನದಂದು ಈದ್ ನಮಾಝ್ ನಿರ್ವಹಿಸಿದರು. ಅವರು ಖುತ್ಬಕ್ಕೆ ಮುಂಚೆ ನಮಾಝ್ ನಿರ್ವಹಿಸಿದರು. ಅನಂತರ ಅವರು ಜನರನ್ನು ಸಂಬೋಧಿಸಿ ಹೇಳಿದರು: ಹೇ ಜನರೇ, ಎರಡು ಈದ್‌ಗಳಲ್ಲಿ ಉಪವಾಸವಿರಿಸುವುದರಿಂದ ಹಝ್ರತ್ ಪೈಗಂಬರ್(ಸ) ತಡೆದಿದ್ದರು. ಅದರಲ್ಲಿ ಒಂದು ಉಪವಾಸದ ನಂತರ ಬರುವ ಈದಿನ ದಿನವಾಗಿದೆ. ಮತ್ತೊಂದು ಕುರ್ಬಾನಿಯ ಈದ್ ಆಗಿದೆ. ಅಬೂ ಉಬೈದ ಹೇಳುತ್ತಾರೆ: ಅವರು ಹಝ್ರತ್ ಉಸ್ಮಾನ್‌ರ(ರ) ಕಾಲದಲ್ಲಿ ಅವರ ಹಿಂದೆ ಒಂದು ಈದ್ ನಿರ್ವಹಿಸಿದ್ದರು. ಅಂದು ಜುಮಾ ದಿವಸವಾಗಿತ್ತು. ಹಝ್ರತ್ ಉಸ್ಮಾನ್(ರ) ಖುತ್ಬಕ್ಕೆ ಮುಂಚೆ ನಮಾಝ್ ನಿರ್ವಹಿಸಿದರು. ಅನಂತರ ಜನರನ್ನು ಸಂಬೋಧಿಸುತ್ತಾ ಹೇಳಿದರು: ಹೇ ಜನರೇ, ಇಂದು ನಿಮಗೆ ಎರಡು ಈದ್‌ಗಳು ಒಟ್ಟಿಗೆ ಬಂದಿರುವ ದಿನವಾಗಿದೆ. ಆದ್ದರಿಂದ ಮದೀನದ ಸುತ್ತಮುತ್ತ ಇರುವ ಜನರಲ್ಲಿ ಯಾರಿಗೆ ಜುಮಾ ನಿರ್ವಹಿಸಲು ಕಾಯಲು ಸಾಧ್ಯವಿದ್ದರೆ, ಅವರು ಕಾಯಬಹುದಾಗಿದೆ ಮತ್ತು ಯಾರು ಮರಳಿ ಹೋಗಲು ಬಯಸುತ್ತಾರೋ ಅವರಿಗೆ ಮರಳಿ ಹೋಗಲು ನಾನು ಅನುಮತಿ ಕೊಡುತ್ತೇನೆ. (ಸಹೀಹ್ ಬುಖಾರಿ ಕಿತಾಬುಲ್ ಅಝಾಹ ಹದೀಸ್–5571–5572)

ಫಿಖ ಅಹ್ಮದಿಯಾದಲ್ಲಿ ಒಂದು ಸಂಗತಿ ಬರೆಯಲಾಗಿದೆ. ಅದಕ್ಕೆ ಸಂಬಂಧಿಸಿ ನನಗಂತು ಸ್ಪಷ್ಟವಾದ ಪುರಾವೆ ಸಿಕ್ಕಿಲ್ಲ. ಜುಮಾ ಮತ್ತು ಈದ್ ಒಂದೇ ದಿನ ಬಂದರೆ ಈದ್ ನಮಾಝಿನ ನಂತರ ಜುಮಾ ಮತ್ತು ಝುಹರ್ ನಮಾಝ್ ನಿರ್ವಹಿಸುವ ಅಗತ್ಯವಿಲ್ಲ, ಬದಲಾಗಿ ಅಸರಿನ ಸಮಯದಲ್ಲಿ ಅಸರ್ ನಮಾಝ್ ನಿರ್ವಹಿಸಿದರೆ ಆಯಿತೆಂದು ಅಲ್ಲಿ ಬರೆಯಲಾಗಿದೆ.

"ಅತಾ ಬಿನ್ ರಬಾಹ್ ಹೇಳುತ್ತಾರೆ: ಒಂದು ಬಾರಿ ಜುಮಾ ಮತ್ತು ಈದುಲ್ ಫಿತರ್ ಒಂದೇ ದಿನ ಬಂದುವು. ಹಝ್ರತ್ ಅಬ್ದುಲ್ಲಾಹ್ ಬಿನ್ ಝುಬೇರ್ ಹೇಳುತ್ತಾರೆ: ಇಂದು ಎರಡು ಈದ್‌ಗಳು ಒಟ್ಟಿಗೆ ಬಂದಿವೆ. ಅದನ್ನು ಸೇರಿಸಿ ನಿರ್ವಹಿಸಲಾಗುವುದು. ಹೀಗೆ ಅವರು ಎರಡಕ್ಕಾಗಿಯೂ ಎರಡು ರಕಅತ್‌ಗಳನ್ನು ಮಧ್ಯಾಹ್ನಕ್ಕೆ ಮುಂಚಿತವಾಗಿ ನಿರ್ವಹಿಸಿದರು."
(ಫಿಖಾ ಅಹ್ಮದಿಯಾ, ಪುಟ–177)

ಅದರ ನಂತರ ಅಸರಿನ ತನಕ ಯಾವುದೇ ನಮಾಝ್ ನಿರ್ವಹಿಸಲಿಲ್ಲ. ಇದರ ಬಗ್ಗೆ ಹೆಚ್ಚಿನ ಶೋಧನೆಯ ಆವಶ್ಯಕತೆಯಿದೆ. (ಖುತ್ಬಾತೆ ತಾಹಿರ್, ಸಂಪುಟ–6, ಪುಟ–374, ಖುತ್ಬ ಜುಮ್ಅ 29–05–1987)

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್ಮಹುಲ್ಲಾಹ್) ಸಹ ಹೀಗೆಯೇ ಹೇಳಿದ್ದರು. ಏಕೆಂದರೆ ಝುಹರ್ ನಮಾಝ್ ಕೂಡ ಉಪೇಕ್ಷಿಸಿದ್ದಾಗಿ ಹಝ್ರತ್ ಪೈಗಂಬರರ(ಸ) ಚರ್ಯೆಯಿಂದ ನೇರವಾಗಿ ಸಾಬೀತಾಗುವ ಇಂತಹ ಬೇರೆ ಯಾವುದೇ ವರದಿ ಸಿಗುತ್ತಿಲ್ಲ. ಹಝ್ರತ್ ಅಬ್ದುಲ್ಲಾಹ್ ಬಿನ್ ಝುಬೇರ್‌ನ ಬಗ್ಗೆಗಿನ ಈ ವರದಿ ಮಾತ್ರ ಲಭಿಸಿದೆ. ಇದರ ಬಗ್ಗೆ ಹೆಚ್ಚಿನ ಅನ್ವೇಷಣೆಯ ಆವಶ್ಯಕತೆಯಿದೆ. ಫಿಖ ಅಹ್ಮದಿಯಾ ಪುನಃ ರಿವ್ಯೂ ಆಗುತ್ತಿದೆ. ಝುಹರ್ ನಮಾಝ್ ಸಹ ನಿರ್ವಹಿಸಿದೇ ಇರಬಹುದು ಎಂಬ ಈ ವರದಿ ಎಷ್ಟು ಸರಿ ಮತ್ತು ಪ್ರಬಲವಾಗಿದೆ ಎಂದು ನೋಡಬೇಕಾಗಿದೆ. ಜುಮಾ ನಿರ್ವಹಿಸದೇ ಇರುವುದು ಎಂಬುದು ಸರಿಯೇ. ಆದರೆ ಝುಹರ್ ನಮಾಝ್ ಸಹ ನಿರ್ವಹಿಸಬೇಕಾಗಿಲ್ಲ ಎಂಬುದಕ್ಕೆ ಈ ವರದಿಯನ್ನು ಹೊರತುಪಡಿಸಿ, ಹಝ್ರತ್ ಪೈಗಂಬರ್‌ರಿಂದ(ಸ) ಅಥವಾ ಖುಲಫಾ ರಾಶಿದೀನ್‌ರಿಂದ ನೇರವಾಗಿ ಯಾವುದೇ ವರದಿ ಸಿಗುತ್ತಿಲ್ಲ.

ಜುಮಾ ದಿವಸ ಸ್ನಾನ ಮಾಡುವುದರ ಕುರಿತು ವರದಿಯಿದೆ. ಹಝ್ರತ್ ಅಬೂಹುರೈರಾ(ರ) ವರದಿ ಮಾಡುತ್ತಾರೆ: ಒಂದು ಬಾರಿ ಹಝ್ರತ್ ಉಮರ್(ರ) ಜುಮಾದ ಖುತ್ಬವನ್ನು ನೀಡುತ್ತಿದ್ದರು. ಅಷ್ಟರಲ್ಲಿ ಹಝ್ರತ್ ಉಸ್ಮಾನ್(ರ) ಪ್ರವೇಶಿಸಿದರು. ಹಝ್ರತ್ ಉಮರ್(ರ) ಇಶಾರೆಯಿಂದ ಕೇಳಿದರು: ಜನರಿಗೆ ಏನಾಗಿದೆ? ಅವರು ಅಧ್ಾನಿನ ನಂತರ ಸಹ ತಡವಾಗಿ ಬರುತ್ತಾರೆ. ಆಗ ಹಝ್ರತ್ ಉಸ್ಮಾನ್(ರ) ಹೇಳಿದರು: ಹೇ ಅಮೀರುಲ್ ಮೂಅ್‌ಮಿನೀನ್, ನಾನಂತು ಅಧ್ಾನ್ ಕೇಳಿದೊಡನೆ ವುಝು ಮಾಡಿಕೊಂಡು ಬಂದೆನು. ಹಝ್ರತ್ ಉಮರ್(ರ) ಕೇಳಿದರು: ವುಝು ಮಾತ್ರವೇ? ನೀವು ಜುಮಾಕ್ಕಾಗಿ ಬರುವಾಗ ಸ್ನಾನ ಮಾಡಬೇಕೆಂದು ಹಝ್ರತ್ ಪೈಗಂಬರ್(ಸ) ಹೇಳಿದ್ದನ್ನು ನೀವು ಆಲಿಸಿರಲಿಲ್ಲವೇ? (ಸಹೀಹ್ ಬುಖಾರಿ, ಕಿತಾಬುಲ್ ಜುಮ್ಅ ಹದೀಸ್–1956)

ನೀರು ಲಭ್ಯವಾಗಿದ್ದರೆ, ಸ್ನಾನ ಮಾಡುವುದು ಅವಶ್ಯ. ಇತರ ಸಹಾಬರಿಗೆ ಹೋಲಿಸಿದರೆ, ಹಝ್ರತ್ ಉಸ್ಮಾನ್‌ರಿಂದ ವರದಿಯಾದ ಹದೀಸ್‌ಗಳು ಬಹಳ ಕಮ್ಮಿ. ಅವರು ವರದಿ ಮಾಡಿರುವ ಒಟ್ಟು ಹದೀಸ್‌ಗಳ ಸಂಖ್ಯೆ 146 ಆಗಿವೆ. ಅವುಗಳಲ್ಲಿ ಮೂರು ಮುತ್ತಫಿಖ್ ಅಲೈಹಿ. ಎಂದರೆ, ಬುಖಾರಿ ಮತ್ತು ಮುಸ್ಲಿಮ್ ಎರಡರಲ್ಲೂ ಇರುವಂತದ್ದು. ಎಂಟು ಬುಖಾರಿಯಲ್ಲಿ ಮಾತ್ರವಿರುವುವು. ಐದು ಕೇವಲ ಮುಸ್ಲಿಮ್‌ನಲ್ಲಿವೆ. ಹೀಗೆ ಬುಖಾರಿ ಮತ್ತು ಮುಸ್ಲಿಮ್ ಸೇರಿಸಿ ಅವರ ಒಟ್ಟು 16 ಹದೀಸ್‌ಗಳಿವೆ. ಅವರ ರಿವಾಯತ್‌ಗಳ ಕೊರತೆಗೆ ಕಾರಣವೇನೆಂದರೆ, ಹದೀಸ್‌ಗಳನ್ನು ವರದಿ ಮಾಡುವುದರಲ್ಲಿ ಹಝ್ರತ್ ಉಸ್ಮಾನ್(ರ) ಅತ್ಯಂತ ಮುನ್ನೆಚ್ಚರಿಕೆ ವಹಿಸುತ್ತಿದ್ದರು. ಇತರ ಸಹಾಬಿಯರಿಗೆ ಹೋಲಿಸಿದರೆ ನನ್ನ ಜ್ಞಾಪಕಶಕ್ತಿ ಅಷ್ಟು ಉತ್ತಮವಾಗಿರದಿರಬಹುದು ಎಂದು ಅವರು ಭಾವಿಸುತ್ತಿದ್ದುದರಿಂದ ಹಝ್ರತ್ ಪೈಗಂಬರ್(ಸ) ಹೇಳಿದ್ದನ್ನು ವರದಿ ಮಾಡುತ್ತಿರಲಿಲ್ಲ. ಹಝ್ರತ್ ಉಸ್ಮಾನ್(ರ) ಹೇಳುತ್ತಾರೆ; ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದ್ದಾಗಿ ನಾನು ಸಾಕ್ಷ್ಯವಹಿಸುತ್ತೇನೆ: ಯಾರು ನಾನು ಹೇಳದೇ ಇದ್ದದ್ದನ್ನು ನನಗೆ ಸಂಬಂಧಿಸಿ ಹೇಳುತ್ತಾನೋ ಅವನು ತನ್ನ ವಾಸವನ್ನು ನರಕದಲ್ಲಿ ಕಾದಿರಿಸಲಿ. ಅಬ್ದುರ್‍ರಹ್ಮಾನ್ ಬಿನ್ ಹಾತಿಬ್ ಹೇಳುತ್ತಾರೆ: ಹಝ್ರತ್ ಉಸ್ಮಾನ್‌ರಿಗಿಂತ ಉತ್ತಮ ರೀತಿಯಲ್ಲಿ ಮಾತನ್ನು ಸಂಪೂರ್ಣವಾಗಿ ಹೇಳುವವರನ್ನು ಸಹಾಬಿಯರಲ್ಲಿ ಯಾರನ್ನೂ ನಾನು ಕಂಡಿಲ್ಲ. ಆದರೆ ಅವರು ಹದೀಸ್ ವರದಿ ಮಾಡುವುದರಿಂದ ಹೆದರುತ್ತಿದ್ದರು. (ಸೈರುಸ್ಸಹಾಬ ಖುಲಫಾ ಎ ರಾಶಿದೀನ್, ಸಂಪುಟ–1, ಪುಟ–204)

ಹುಮ್ರಾನ್ ಬಿನ್ ಅಬಾನ್ ಹೇಳುತ್ತಾರೆ: ಒಂದು ಬಾರಿ ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್ ವುಝು ಮಾಡಲು ನೀರನ್ನು ತರಿಸಿದರು. ಬಾಯಿ ಮುಕ್ಕಳಿಸಿದರು, ಮೂಗನ್ನು ಸ್ವಚ್ಛಗೊಳಿಸಿದರು, ಮೂರು ಬಾರಿ ಮುಖವನ್ನು ತೊಳೆದರು, ಕೈಗಳನ್ನು ಮೂರು ಬಾರಿ ತೊಳೆದರು. ತಲೆಯನ್ನು ಮತ್ತು ಕುತ್ತಿಗೆಯ ಸುತ್ತಮುತ್ತಲಿನ ಭಾಗಗಳನ್ನು ನೀರಿನಿಂದ ಸವರಿದರು. ಅನಂತರ ಮುಗುಳ್ನಕ್ಕರು. ನಾನು ಮುಗುಳ್ನಗಲು ಕಾರಣವೇನೆಂದು ನೀವು ನನ್ನೊಡನೆ ಕೇಳುವುದಿಲ್ಲವೇ? ಎಂದು ಹಝ್ರತ್ ಉಸ್ಮಾನ್(ರ) ಕೇಳಿದರು. ಯಾ ಅಮೀರಲ್ ಮೂಮಿನೀನ್ ನೀವೇಕೆ ಹೀಗೆ ಮುಗುಳ್ನಕ್ಕಿದ್ದೀರಿ ಎಂದು ಜನರು ಕೇಳಿದರು. ಹಝ್ರತ್ ಉಸ್ಮಾನ್(ರ) ಹೇಳಿದರು: ಇದೇ ಜಾಗದ ಸಮೀಪ ಹಝ್ರತ್ ಪೈಗಂಬರ್(ಸ) ನೀರನ್ನು ತರಿಸಿದ್ದನ್ನು ನಾನು ನೋಡಿದ್ದೇನೆ. ನಾನು ವುಝು ಮಾಡಿದಂತೆ ಅವರು ಇದೇ ಜಾಗದಲ್ಲಿ ವುಝು ಮಾಡಿದ್ದರು. ಅನಂತರ ಮುಗುಳ್ನಕ್ಕರು. ಹಝ್ರತ್ ಪೈಗಂಬರ್(ಸ) ಹೇಳಿದರು: ನಾನು ಮುಗುಳ್ನಗಲು ಕಾರಣವೇನೆಂದು ನೀವು ನನ್ನೊಡನೆ ಕೇಳುವುದಿಲ್ಲವೇ? ನೀವು ಏಕೆ ಮುಗುಳ್ನಕ್ಕಿದ್ದೀರಿ ಎಂದು ಸಹಾಬರು ಕೇಳಿದರು. ಹಝ್ರತ್ ಪೈಗಂಬರ್(ಸ) ಹೇಳಿದರು: ವ್ಯಕ್ತಿಯು ವುಝುಗಾಗಿ ನೀರನ್ನು ತರಿಸಿಕೊಂಡು ತನ್ನ ಮುಖವನ್ನು ತೊಳೆಯುವಾಗ ಅವನ ಮುಖದಿಂದ ಉಂಟಾದ ಎಲ್ಲ ಪಾಪಗಳನ್ನು ಅಲ್ಲಾಹನು ಕ್ಷಮಿಸುತ್ತಾನೆ. ಅನಂತರ ಅವನು ತನ್ನ ಕೈತೋಳುಗಳನ್ನು ತೊಳೆಯುವಾಗಲೂ ಹೀಗೆಯೇ ಆಗುತ್ತದೆ. ಅನಂತರ ಅವನು ತನ್ನ ತಲೆಯನ್ನು ಸವೆರುವಾಗಲೂ ಹಾಗೆಯೇ ಆಗುತ್ತದೆ. ಅವನು ತನ್ನ ಕಾಲುಗಳನ್ನು ತೊಳೆಯುವಾಗಲೂ ಹಾಗೆಯೇ ಆಗುತ್ತದೆ. (ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–1, ಪುಟ–201, ಹದೀಸ್–415, ಆಲಿಮುಲ್ ಕುತುಬ್ ಬೈರೂತ್ 1998)

ವರದಿಗಳ ಪ್ರಕಾರ ಹಝ್ರತ್ ಉಸ್ಮಾನ್(ರ) 8 ವಿವಾಹಗಳನ್ನು ಮಾಡಿದ್ದರು. ಈ ಎಲ್ಲ ವಿವಾಹಗಳು ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ನಂತರ ಮಾಡಿದ್ದರು. ಅವರ ಪತ್ನಿಯಂದಿರು ಮತ್ತು ಮಕ್ಕಳ ಹೆಸರುಗಳು ಹೀಗಿವೆ: ಹಝ್ರತ್ ರುಖಿಯ ಬಿನ್ತ್ ರಸೂಲುಲ್ಲಾಹ್‌ರಿಂದ ಅವರ ಮಗನಾದ ಅಬ್ದುಲ್ಲಾಹ್ ಬಿನ್ ಉಸ್ಮಾನ್ ಜನಿಸಿದರು. ಹಝ್ರತ್ ರುಖಿಯರ ಮರಣದ ನಂತರ ಹಝ್ರತ್ ಉಸ್ಮಾನ್(ರ) ಹಝ್ರತ್ ಉಮ್ಮೇ ಕುಲ್ಸುಮ್ ಬಿನ್ತ್ ರಸೂಲುಲ್ಲಾಹ್‌ರನ್ನು ವಿವಾಹವಾದರು. ಹಝ್ರತ್ ಉತ್‌ಬ ಬಿನ್ ಗಝ್‌ವಾನ್‌ರ ಸಹೋದರಿಯಾದ ಹಝ್ರತ್ ಫಾಖ್‌ತ ಬಿನ್ತ್ ಗಝ್‌ವಾನ್‌ರಿಂದ ಮಗನಾದ ಅಬ್ದುಲ್ಲಾಹ್ ಜನಿಸಿದರು. ಅವರನ್ನು ಅಬ್ದುಲ್ಲಾಹ್ ಸುಗ್‌ರ ಎಂದು ಕರೆಯಲಾಯಿತು. ಹಝ್ರತ್ ಅಮ್ರ್ ಬಿನ್ತ್ ಜುಂದುಬ್ ಅಸದಿಯರಿಂದ ಅಮ್ರ್, ಖಾಲಿದ್, ಅಬಾನ್, ಉಮರ್, ಮರ್‌ಯಮ್ ಜನಿಸಿದರು. ಹಝ್ರತ್ ಫಾತಿಮ ಬಿನ್ತ್ ವಲೀದ್ ಮಖ್‌ಝೂಮಿಯರಿಂದ ವಲೀದ್, ಸಈದ್, ಉಮ್ಮೇಸಈದ್ ಜನಿಸಿದರು. ಉಮ್ಮುಲ್‌ಬನೀನ್ ಬಿನ್ತ್ ಐನಿಯ ಬಿನ್ ಹಿಸನ್ ಹಝ್ಝಾರಿಯರಿಂದ ಅಬ್ದುಲ್‌ಮಲಿಕ್ ಜನಿಸಿದರು. ಹಝ್ರತ್ ರಮ್ಲ ಬಿನ್ತ್ ಶೀಬ ಬಿನ್ ರಬೀಅರಿಂದ ಆಯಿಶ ಉಮ್ಮೇ ಅಬಾನ್ ಮತ್ತು ಉಮ್ಮೇ ಅಮ್ರ್ ಜನಿಸಿದರು. ಹಝ್ರತ್ ನಾಇಲ ಬಿನ್ತ್ ಫ್ರಾಫ್‌ಸ ಬಿನ್ತ್ ಅಹ್‌ಫಸ್. ಇವರು ಕ್ರೈಸ್ತರಾಗಿದ್ದರು. ವಿವಾಹಕ್ಕೆ ಮುಂಚೆ ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದರು. ಉತ್ತಮ ಮುಸ್ಲಿಮರಾಗಿದ್ದರು. ಅವರಿಂದ ಮಗಳಾದ ಮರ್‌ಯಂ ಜನಿಸಿದಳು. ಒಬ್ಬ ಮಗನು ಅಂಬಸ ಸಹ ಜನಿಸಿದರು ಎಂದು ಹೇಳಲಾಗುತ್ತದೆ. ಹಝ್ರತ್ ಉಸ್ಮಾನ್ ಶಹೀದ್ ಆದ ಸಮಯದಲ್ಲಿ ಅವರಿಗೆ ನಾಲ್ಕು ಪತ್ನಿಯಂದಿರು ಇದ್ದರು ಎಂದು ಒಂದು ವರದಿಯಲ್ಲಿ ಬಂದಿದೆ. ಹಝ್ರತ್ ರಮ್ಲ, ಹಝ್ರತ್ ನಾಇಲ, ಹಝ್ರತ್ ಉಮ್ಮುಲ್‌ಬನೀನ್ ಮತ್ತು ಹಝ್ರತ್ ಫಾಖ್‌ತ ಎಂಬವರು. ಒಂದು ವರದಿಯ ಪ್ರಕಾರ ಹಝ್ರತ್ ಉಸ್ಮಾನ್(ರ) ಮುತ್ತಿಗೆ ಸಮಯದಲ್ಲಿ ಹಝ್ರತ್ ಉಮ್ಮುಲ್ ಬನೀನ್‌ರಿಗೆ ತಲಾಖ್ ನೀಡಿದ್ದರು ಎಂದಿದೆ. (ತಾರೀಖ್ ಅತ್ತಿಬರಿ, ಸಂಪುಟ–5, ಪುಟ–200, ದಾರುಲ್ ಫಿಕರ್ ಬೈರೂತ್ 1998) (ಸೀರತ್ ಅಮೀರುಲ್ ಮುಮಿನೀನ್ ಉಸ್ಮಾನ್ ಬಿನ್ ಅಫ್ಫಾನ್, ಪುಟ–17, ಭಾಗ–1, ದಾರುಲ್ ಮಾರಿಫ ಬೈರೂತ್ 2006)

ಸೂರಃ ನೂರ್‌ನ ವ್ಯಾಖ್ಯಾನ ಮಾಡುತ್ತಾ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್(ರ) ಹೇಳುತ್ತಾರೆ: ಒಂದು ಪರಿಜ್ಞಾನದ ಪ್ರಕಾಶವಿರುತ್ತದೆ. ಅದರಿಂದ ಒಳಿತು ಕೆಡುಕಿನ ವ್ಯತ್ಯಾಸ ಗೊತ್ತಾಗುತ್ತದೆ. ಬೆಳಿಗ್ಗೆ – ರಾತ್ರಿ ಅಲ್ಲಾಹನ ಸ್ಮರಣೆ ಮಾಡಲ್ಪಡುವ ಮನೆಯಲ್ಲಿ ಈ ಪ್ರಕಾಶವಿರುತ್ತದೆ. ಅಲ್ಲಿರುವ ಜನರು ವ್ಯಾಪಾರಸ್ಥರಾಗಿರುವರು. ಅವರ ಮನೆ ಸಣ್ಣದು. ಆದರೆ ಒಂದು ದಿನ ಅಲ್ಲಾಹನು ಅವರ ಮನೆಯನ್ನು ವಿಶಾಲಗೊಳಿಸುವನು. ಪವಿತ್ರ ಖುರ್‌ಆನನ್ನು ಸಂಕಲಿಸಿದವರು ಹಝ್ರತ್ ಅಬೂಬಕರ್ ಸಿದ್ದೀಖ್ ಆಗಿರುವರು, ಹಝ್ರತ್ ಉಮರ್ ಮತ್ತು ಹಝ್ರತ್ ಉಸ್ಮಾನ್ ಅದರ ಪ್ರಚಾರಕರಾಗಿದ್ದರು. ಅನಂತರ ಹಝ್ರತ್ ಅಲಿಯರಿಂದ(ರ) ನೈಜ ಆಧ್ಯಾತ್ಮಿಕ ಜ್ಞಾನ ಲೋಕಕ್ಕೆ ತಲುಪಿತು. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಹೇಳುತ್ತಾರೆ: ನಾನು ಸಹ ಸ್ವತಃ ಹಝ್ರತ್ ಅಲಿಯರಿಂದ ಪವಿತ್ರ ಖುರ್‌ಆನಿನ ಕೆಲವು ಜ್ಞಾನಗಳನ್ನು ಕಲಿತಿರುವೆನು. ಮತ್ತೆ ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ಹೇಳುತ್ತಾರೆ: ಅಲ್ಲಾಹನು ಈ ರುಕೂಗಳಲ್ಲಿ ಅನ್ಸಾರ್‌ಗಳಲ್ಲಿ ಖಿಲಾಫತ್ ಇರುವುದಿಲ್ಲ ಅದು ಮುಹಾಜಿರರಲ್ಲಿ ಇರುವುದು ಎಂದು ಹೇಳಿದ್ದಾನೆ. ಮತ್ತೆ ಹೇಳಿದನು ಅವರನ್ನು ಮುಸ್ಲಿಮರು ಮತ್ತು ಸತ್ಯನಿಷೇಧಿಗಳು ವಿರೋಧಿಸುವರು. ಹೀಗೆ ಹಝ್ರತ್ ಅಬೂಬಕರ್‌ರನ್ನು(ರ) ವಿರೋಧಿಸಲಾಯಿತು. ಕೆಲವರು ಖಿಲಾಫತನ್ನು ಅಂಗೀಕರಿಸುತ್ತಿರಲಿಲ್ಲ. ಅಲ್ಲಾಹನು ಎರಡೂ ವಿಭಾಗಗಳ ಉದಾಹರಣೆಗಳನ್ನು ನೀಡಿರುವನು. ಒಂದು ವಿಭಾಗ ಸಮುದ್ರದ ನೊರೆಯನ್ನು ಕುಡಿಯುವ ನೀರೆಂದು ಭಾವಿಸುತ್ತಾರೆ. ಕೆಲವರು ಶರೀಅತಿನ ಸಮುದ್ರದಲ್ಲಿ ಇದ್ದುಕೊಂಡೂ ವಿರೋಧಿಸುತ್ತಾರೆ. ಪರಿಣಾಮವೇನೆಂದರೆ, ಪ್ರಾಣಿ ಪಕ್ಷಿಗಳು ಅವರ ಮಾಂಸವನ್ನು ತಿನ್ನುವುದು. ಖಲೀಫರಲ್ಲಿ ಹಝ್ರತ್ ಅಬೂಬಕರ್ ಬಹಳ ಕಷ್ಟತೆಗಳನ್ನು ಅನುಭವಿಸಿದರು. ಹಝ್ರತ್ ಉಸಾಮರೊಡನೆ ಸೈನ್ಯವನ್ನು ರವಾನೆ ಮಾಡಲಾಗಿತ್ತು. ಇತ್ತ ಕಡೆ ಅರೇಬಿಯದಲ್ಲಿ ಪ್ರತಿಯೊಂದು ಜಾಗದಲ್ಲಿ ಫಿತ್ನ ಎದ್ದಿತ್ತು. ಮಕ್ಕದಲ್ಲೂ ವಿದ್ರೋಹಕ್ಕೆ ತಯಾರಾಗಿ ಜನರು ನಿಂತಿದ್ದರು. ಅಲ್ಲಿಗೆ

ಒಬ್ಬ ವಿವೇಕವಂತ ವ್ಯಕ್ತಿ ತಲುಪಿ ಹೀಗೆ ಹೇಳಿದರು: ವಿಶ್ವಾಸ ಕೈಗೊಳ್ಳುವುದರಲ್ಲಿ ಅತ್ಯಂತ ಹಿಂದಿದ್ದ ನೀವು ಧರ್ಮತ್ಯಾಗ ಮಾಡುವುದರಲ್ಲಿ ಅತ್ಯಂತ ಮುಂದಿದ್ದೀರಾ? ಹೀಗೆ ಹೇಳಿದ ಕಾರಣದಿಂದ ಅವರು ಇದರಿಂದ ಹಿಂದೆ ಸರಿದರು. ವಿರೋಧಿಗಳಾದ ಈ ಜನರು ಹಝ್ರ‌ತ್ ಅಬೂಬಕರ, ಹಝ್ರ‌ತ್ ಉಮರರ, ಹಝ್ರ‌ತ್ ಉಸ್ಮಾನ್‌ರ ಮತ್ತು ಹಝ್ರ‌ತ್ ಅಲಿಯರ ಕಾಲದಲ್ಲಿ ಯಶಸ್ಸನ್ನು ಗಳಿಸಲಿಲ್ಲ. ಆದರೆ ಕೇಳುವ ಮತ್ತು ಅನುಸರಿಸುವ ವಿಭಾಗ ಸದಾ ಯಶಸ್ವಿಗಳಾಗಿದ್ದರು. ಅವರು ವಿಜಯಿಗಳು ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ. (ಹಖಾಎಖಿಲ್ ಖುರ್‌ಆನ್, ಸಂಪುಟ–3, ಪುಟ–223)

ಹಝ್ರ‌ತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಬೂಬಕರ್, ಉಮರ್, ಉಸ್ಮಾನ್, ಅಲಿ ರಝಿಯಲ್ಲಾಹು ಅನ್‌ಹುಮ್‌ರಂತಹ ಸ್ವಭಾವಗುಣಗಳನ್ನು ತನ್ನೊಳಗೆ ಉಂಟುಮಾಡುವ ತನಕ ಯಾವನೇ ವ್ಯಕ್ತಿ ಸತ್ಯವಿಶ್ವಾಸಿಯಾಗಲಾರನು. ಇವರೆಲ್ಲರೂ ಯಥಾರ್ಥವಾಗಿ ಧರ್ಮದ ಸಂರಕ್ಷಕರಾಗಿದ್ದರು. (ಲೆಕ್ಚರ್ ಲುಧಿಯನ, ರೂಹಾನಿ ಖಝಾಇನ್, ಸಂಪುಟ–20, ಪುಟ–294)

ಅದೇ ರೀತಿ ಮತ್ತೆ ಹೇಳುತ್ತಾರೆ: ಹಝ್ರ‌ತ್ ಅಬೂಬಕರ್ ಇಸ್ಲಾಮಿಗೆ ಎರಡನೇ ಆದಂ ಆಗಿರುವರು. ಅದೇ ರೀತಿಯಲ್ಲಿ ಹಝ್ರ‌ತ್ ಉಮರ್ ಫಾರೂಖ್, ಹಝ್ರ‌ತ್ ಉಸ್ಮಾನ್ ಧರ್ಮದ ಸಂರಕ್ಷಕರಾಗಿರದಿದ್ದರೆ ಒಂದೇ ಒಂದು ಆಯತ್ತನ್ನು ಅಲ್ಲಾಹನಂದ ಅವತೀರ್ಣವಾದದ್ದೆಂದು ಹೇಳಲು ಇಂದು ನಮಗೆ ಕಷ್ಟವಾಗುತ್ತಿತ್ತು. ಅವರೆಲ್ಲರೂ ತಮ್ಮ ಜೀವಿತಗಳನ್ನು ಅಲ್ಲಾಹನ ಮಾರ್ಗದಲ್ಲಿ ಅರ್ಪಿಸಿದ್ದರು. (ಮಕ್ತೂಬಾತೆ ಅಹ್ಮದ್, ಸಂಪುಟ–2, ಪುಟ–151, ಮಕ್ತೂಬ್–2, ಮುದ್ರಣ ರಬ್ವಾ)

ಅಲ್ಲಾಹನಾಣೆ, ಅಲ್ಲಾಹನು ಶೇಖೈನ್‌ರಾದ ಹಝ್ರ‌ತ್ ಅಬೂಬಕರ್ ಮತ್ತು ಹಝ್ರ‌ತ್ ಉಮರ್ ಹಾಗೂ ಮೂರನೆಯದಾಗಿ ಧುನ್ನುರೈನ್‌ರಾದ ಹಝ್ರ‌ತ್ ಉಸ್ಮಾನ್‌ರನ್ನು ಇಸ್ಲಾಮಿನ ಬಾಗಿಲುಗಳ ಮತ್ತು ಸೃಷ್ಟಿಗಳಲ್ಲಿ ಉತ್ತಮರಾದ ಮುಹಮ್ಮದ್ ರಸೂಲುಲ್ಲಾಹ್‌ರ ಸೈನ್ಯದ ಪ್ರಮುಖರನ್ನಾಗಿ ಮಾಡಿರುವನು. ಆದ್ದರಿಂದ ಯಾರು ಅವರ ಮಹತ್ವವನ್ನು ನಿರಾಕರಿಸಿತ್ತಾರೋ, ಅವರನ್ನು ನಿಂದ್ಯರು ಎಂದು ಭಾವಿಸುತ್ತಾರೋ, ಅವರನ್ನು ಗೌರವಿಸುವುದಿಲ್ಲವೋ, ಅವರನ್ನು ಬೈಯ್ಯುತ್ತಾರೋ ಅವರ ಪರಿಣಾಮ ಮತ್ತು ಅವರ ವಿಶ್ವಾಸದ ಬಗ್ಗೆ ನನಗೆ ಭಯವಿದೆ. (ಸಿರ್‍ರುಲ್ ಖಿಲಾಫ, ಉರ್ದು ಅನುವಾದ ಮುದ್ರಣ ನಝಾರತ್ ಇಶಾಅತ್ ರಬ್ವಾ ಪುಟ–28–29)

ಹಝ್ರ‌ತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರ‌ತ್ ಪೈಗಂಬರ್‌ರ(ಸ) ನಂತರ ಇಸ್ಲಾಮಿಗೆ ಉಂಟಾದ ಪ್ರಗತಿಗೆ ಕಾರಣ ಈ ಮೂವರು ಖಲೀಫರೇ ಆಗಿರುವರು. (ಮಲ್‌ಫೂಝಾತ್ ಸಂಪುಟ–6, ಪುಟ–414)

ಅನಂತರ ಶಿಯಾ ವಿಭಾಗದವರ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರ‌ತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಾವು ನಿಮ್ಮ ಬೈಗುಳಗಳ ಬಗ್ಗೆ ಏನು ದೂರುಮಾಡಲಿ? ಏಕೆಂದರೆ, ನೀವು ಸಹಾಬಿಯರನ್ನು ದೂಷಿಸುತ್ತೀರಿ ಮತ್ತು ಹಝ್ರ‌ತ್ ಪೈಗಂಬರರ(ಸ) ಪತ್ನಿಯಂದಿರನ್ನು ಶಾಪ ಪ್ರಾರ್ಥನೆಗಳನ್ನು ನೀಡುತ್ತಾ ನೆನಪು ಮಾಡುತ್ತೀರಿ. ಅಲ್ಲಾಹನ ಗ್ರಂಥದಲ್ಲಿ ಅವರು ಹೆಚ್ಚು ಕಮ್ಮಿ ಮಾಡಿರುವರು ಮತ್ತದು ಅಲ್ಲಾಹನ ವಚನಗಳಲ್ಲ, ಬದಲಾಗಿ ಹಝ್ರ‌ತ್ ಉಸ್ಮಾನ್‌ರ ಹಸ್ತಪ್ರತಿಗಳೆಂದು ಭಾವಿಸುತ್ತೀರಿ. ಇಸ್ಲಾಮನ್ನು ಒಣಭೂಮಿ ಮತ್ತು ಕೃಷಿಯಿಲ್ಲದ ಒಂದು ಕಾಡಿನ ಹಾಗೆಂದು ನೀವು ಭಾವಿಸಿದ್ದೀರಿ. ಹೇ ಹದ್ದುಮೀರಿ ವರ್ತಿಸುವವರೇ, ನಿಮ್ಮ ಬಳಿ ಯಾವ ಗೌರವ ಬಾಕಿಯಿದೆ.
(ಹುಜ್ಜತುಲ್ಲಾ, ರೂಹಾನಿ ಖಝಾಇನ್, ಸಂಪುಟ–12, ಪುಟ–184–185)

ಮತ್ತೆ ಹಝ್ರ‌ತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸಂಶೋಧನೆ ಮೂಲಕ ಅಲ್ಲಾಹನು ನನಗೆ ಖಿಲಾಫತ್ ಬಗ್ಗೆ ತಿಳಿಸಿಕೊಟ್ಟಿದ್ದಾನೆ. ಹಝ್ರ‌ತ್ ಅಬೂಬಕರ್ ಸಿದ್ದೀಖ್, ಹಝ್ರ‌ತ್ ಉಮರ್ ಫಾರೂಖ್ ಮತ್ತು ಹಝ್ರ‌ತ್ ಉಸ್ಮಾನ್(ರ) ಸಾತ್ವಿಕರು, ಸತ್ಯವಿಶ್ವಾಸಿಗಳು ಮತ್ತು ಅಲ್ಲಾಹನು ಆಯ್ಕೆ ಮಾಡಿದ್ದ ವ್ಯಕ್ತಿಗಳಲ್ಲಿ ಸೇರಿರುವರು ಆಗಿರುವರು ಎಂದು ಅಲ್ಲಾಹನು ನನಗೆ ಸ್ಪಷ್ಟವಾಗಿ ಅರುಹಿದ್ದಾನೆ. ಜ್ಞಾನಿಗಳಾದ ಅನೇಕರು ಅವರ ಸ್ವಭಾವ ಶ್ರೇಷ್ಠತೆಗಳ ಬಗ್ಗೆ ಸಾಕ್ಷ್ಯವಹಿಸಿದ್ದಾರೆ. ಈ ಖಲೀಫರು ಅತ್ಯುನ್ನತನಾದ ಅಲ್ಲಾಹನ ಸಂಪ್ರೀತಿಗಾಗಿ ಸ್ವದೇಶವನ್ನು ಉಪೇಕ್ಷಿಸಿದರು. ಪ್ರತಿಯೊಂದು ಯುದ್ಧದ ಬೆಂಕಿಯಲ್ಲಿ ಪ್ರವೇಶಿಸಿದರು. ಬೇಸಿಗೆಗಾಲದ ಮಧ್ಯಾಹ್ನದ ಬಿಸಿ ಮತ್ತು ಚಳಿಗಾಲದ ರಾತ್ರಿಯ ತಂಪಿನ ಪರಿವೆ ಮಾಡಲಿಲ್ಲ. ಬದಲಾಗಿ ಯುವಕರಂತೆ ಧರ್ಮದ ಮಾರ್ಗದಲ್ಲಿ ಮಗ್ನರಾಗಿದ್ದರು. ಸ್ವಂತ ಮತ್ತು ಪರರ ಕಡೆಗೆ ಆಕರ್ಷಿತರಾಗಿರಲಿಲ್ಲ. ಸರ್ವಲೋಕಗಳ ಪರಿಪಾಲಕನಾದ ಅಲ್ಲಾಹನಿಗಾಗಿ ಎಲ್ಲರಿಗೂ ವಿದಾಯ ಹೇಳಿದರು. ಅವರ ಸತ್ಕರ್ಮದಲ್ಲಿ ಸುವಾಸನೆ ಮತ್ತು ಕೃತ್ಯಗಳಲ್ಲಿ ಸುಗಂಧವಿತ್ತು. ಇವೆಲ್ಲವೂ ಅವರ ಪದವಿಯ ತೋಟಗಳು ಮತ್ತು ಒಳಿತುಗಳ ತೋಟಗಳ ಕಡೆಗೆ ಬೊಟ್ಟು ಮಾಡುತ್ತದೆ. ಕೆಲವು ವರದಿಗಳನ್ನು ನಂಬಬೇಡಿರಿ. ಅದರಲ್ಲಿ ಬಹಳ ವಿಷವಿದೆ. ಅದು ವಿಶ್ವಾಸಯೋಗ್ಯವಲ್ಲ. ಅವುಗಳಲ್ಲಿ ಅನೇಕ ವರದಿಗಳು ಅಡಿಮೇಲು ಮಾಡುವ ಬಿರುಗಾಳಿಯಂತೆಯಾಗಿದೆ. ಆದ್ದರಿಂದ ಅಲ್ಲಾಹನ ಭಯವಿರಿಸಿಕೊಳ್ಳಿರಿ. ಇಂತಹ ವರದಿಗಳನ್ನು ನಂಬುವವರಾಗದಿರಿ.
(ಸಿರ್‍ರುಲ್ ಖಿಲಾಫ, ಉರ್ದು ಅನುವಾದ ಪ್ರಕಾಶನ ನಝಾರತ್ ಇಶಾಅತ್ ಪುಟ–25–26)

ಇದರೊಂದಿಗೆ ಹಝ್ರ‌ತ್ ಉಸ್ಮಾನ್‌ರ ಪ್ರಸ್ತಾಪ ಕೊನೆಗೊಳ್ಳುತ್ತದೆ. ಹಝ್ರ‌ತ್ ಉಮರರ(ರ) ಪ್ರಸ್ತಾಪ ಶುರುವಾಗುವುದು. ಇನ್‌ಶಾ ಅಲ್ಲಾಹ್.

ಮತ್ತೊಂದು ಸಂಗತಿಯೇನೆಂದರೆ, ಅಲ್‌ಇಸ್ಲಾಂ ವೆಬ್‌ಸೈಟ್ ಪವಿತ್ರ ಖುರ್‌ಆನ್ ಸರ್ಚಿನ ಒಂದು ಹೊಸ ವೆಬ್‌ಸೈಟ್‌ನ ಮೊದಲ ವರ್ಶನ್ ಶುರುಮಾಡಿದೆ. Holyquran.io. ಈ ವೆಬ್‌ಸೈಟ್ ಅಲ್‌ಇಸ್ಲಾಂ ವೆಬ್‌ಸೈಟ್‌ಗೆ ಹೋಗದೇ ಕೂಡ ನೋಡಬಹುದಾಗಿದೆ. ಯಾವುದೇ ಸೂರತ್, ಆಯತ್, ಪದ ಅಥವಾ ವಿಷಯವನ್ನು ಅರಬೀ, ಇಂಗ್ಲಿಷ್ ಅಥವಾ ಉರ್ದುವಿನಲ್ಲಿ ಒಂದು ಹೊಸ ಸರ್ಚ್ ಇಂಜಿನಿನ ಮೂಲಕ ಕಂಡುಹಿಡಿಯಬಹುದಾಗಿದೆ. ಸರ್ಚ್ ರಿಸಲ್ಟ್‌ನಲ್ಲಿ ಅಹ್ಮದೀ ಮತ್ತು ಅಹ್ಮದಿಯೇತರರ ತರ್ಜುಮೆಗಳು ಬರುವುವು. ಪ್ರತಿಯೊಂದು ಆಯತ್ತಿನೊಂದಿಗೆ ಅದರ ವ್ಯಾಖ್ಯಾನ ಮತ್ತು ಅದಕ್ಕೆ ಸಂಬಂಧಿಸಿದ ವಚನಗಳನ್ನು ನೋಡಬಹುದಾಗಿದೆ. ಹೆಚ್ಚಿನ ವಿಷಯಗಳ ಮೇಲೆ ಕೆಲಸ ಜಾರಿಯಲ್ಲಿದೆ. ಇದರ ಮುಂದಿನ ಭಾಗ ಜಲ್ಸ ಸಾಲಾನ ಯು.ಕೆ. 2021ರ ತನಕ ತಯಾರಾಗುವುದು. ಇನ್‌ಶಾ ಅಲ್ಲಾಹ್. ಇದಲ್ಲದೇ ಅಲ್‌ಇಸ್ಲಾಂ ವೆಬ್‌ಸೈಟಿನಲ್ಲಿ ಪವಿತ್ರ ಖುರ್‌ಆನ್ ಓದಲು, ಆಲಿಸಲು ಮತ್ತು ಸರ್ಚ್ ಮಾಡಲು ಮನೋಹರವಾದ ವರ್ಶನ್ ಆದ readquran.app ನ್ನು ಸಹ ತಯಾರು ಮಾಡಲಾಗಿದೆ. ಅದರಲ್ಲಿ ಇಂಗ್ಲಿಷ್ ಭಾಷೆಯ ವ್ಯಾಖ್ಯಾನದೊಂದಿಗೆ ತಫ್ಸೀರ್ ಸಗೀರಿನ ನೋಟ್ಸ್, ಪದಾನುಪದ ತರ್ಜುಮೆ, ವಿಷಯಗಳ ಇಂಡೆಕ್ಸ್ ಮತ್ತು ದಿನನಿತ್ಯದ ಪವಿತ್ರ ಖುರ್‌ಆನಿನ ಪಾರಾಯಣಕ್ಕೆ ಬೇಕಾದ ಹಲವಾರು ಉಪಯುಕ್ತ ವರ್ಧನೆಗಳನ್ನು ಸೇರಿಸಲಾಗಿವೆ. ಈ ಪ್ರೊಜೆಕ್ಟ್ ಪವಿತ್ರ ಖುರ್‌ಆನಿನ ಸುಂದರವಾದ ಪಾಠಗಳನ್ನು ಲೋಕದಲ್ಲಿ ಹರಡಲು ಕಾರಣವಾಗಲಿ, ಜಮಾಅತಿನವರು ಸಹ ಇದರಿಂದ ಪೂರ್ಣವಾದ ಪ್ರಯೋಜನವನ್ನು ಪಡೆಯಲಿ ಎಂದು ಅಲ್ಲಾಹನಲ್ಲಿ ದುಆ ಮಾಡುತ್ತೇನೆ. ಇದರೊಂದಿಗೆ ನಾನು ಪಾಕಿಸ್ತಾನದ ಅಹ್ಮದಿಯರಿಗಾಗಿ ದುಆ ಮಾಡಲು ವಿನಂತಿಸುತ್ತೇನೆ. ಅಲ್ಲಾಹನು ಅವರ ಸ್ಥಿತಿಗತಿಗಳನ್ನು ಬದಲಾಯಿಸಲಿ, ಅವರ ಕಷ್ಟತೆಗಳನ್ನು ಹಗುರಗೊಳಿಸಲಿ. ಅದೇ ರೀತಿಯಲ್ಲಿ ಅಲ್‌ಜೀರಿಯದ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಅಲ್ಲಾಹನು ಅವರಿಗೂ ಸ್ಥೈರ್ಯವನ್ನು ಪ್ರದಾನಿಸಲಿ, ಅವರ ಸ್ಥಿತಿಗತಿಗಳಲ್ಲಿ ಬದಲಾವಣೆ ಉಂಟುಮಾಡಲಿ.

ಈಗ ನಾನು ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸುತ್ತೇನೆ. ಅವರ ಜನಾಝ ನಮಾಝನ್ನು ನಿರ್ವಹಿಸುವೆನು. ಈಗ ಬರುತ್ತಿರುವ ಜನಾಝದ ಬಗ್ಗೆಗಿನ ಹಲವಾರು ಪತ್ರಗಳಲ್ಲಿ ಎಲ್ಲ ಜನಾಝದ ಕುರಿತು ಇಲ್ಲಿ ಪ್ರಸ್ತಾಪಿಸುವುದು ಕಷ್ಟ. ಹೇಗಿದ್ದರೂ ಕೆಲವರು ಬಗ್ಗೆ ಪ್ರಸ್ತಾಪಿಸುವೆನು. ಬಾಕಿಯುಳ್ಳವರ ಹೆಸರು ಹೇಳದಿದ್ದರೂ ಅವರು ಇದರಲ್ಲಿ ಸೇರಿರುವರು. ಅಲ್ಲಾಹನ ಅವರೆಲ್ಲರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಹೇಗಿದ್ದರೂ ಯಾರ ಬಗ್ಗೆ ಪ್ರಸ್ತಾಪಿಸಲು ಇದೆಯೋ ಅವುಗಳನ್ನು ಓದುವೆನು. ಅವರಲ್ಲಿ ಒಬ್ಬರು ಸನ್ಮಾನ್ಯ ಮುಹಮ್ಮದ್ ಸಾದಿಖ್ ಸಾಹಿಬ್, ದರ್ಗಾರಾಂಪುರಿಯವರದ್ದಾಗಿದೆ. ಮುಹಮ್ಮದ್ ಸಾದಿಖ್ ಸಾಹಿಬ್, ದರ್ಗಾರಾಂಪುರಿ ಬಂಗ್ಲಾದೇಶಿನವರಾಗಿದ್ದರು. 2020ರ ನವೆಂಬರ್ 14ರಂದು 75ನೇ ವಯಸ್ಸಿನಲ್ಲಿ ನಿಧನರಾಗಿದ್ದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**.

ದಿವಂಗತರರ ಇತರ ಹುದ್ದೆಗಳು ಅಲ್ಲದೇ ಒಂದು ದೀರ್ಘಕಾಲದ ವರೆಗೆ ನೇಶನಲ್ ಸೆಕ್ರೆಟರಿ ವಖ್ಫೇ ನೌ ಆಗಿ ಸೇವೆ ಮಾಡಲು ಸೌಭಾಗ್ಯ ಪಡೆದಿದ್ದರು. ವಖ್ಫೇ ನೌ ಮತ್ತು ಅವರ ಹೆತ್ತವರೊಂದಿಗೆ ಕ್ಲಾಸ್‌ಗಳನ್ನು ನಡೆಸಲು ದೂರ ದೂರದ ಜಮಾಅತುಗಳಿಗೆ ನಿಯತವಾಗಿ ಹೋಗುತ್ತಿದ್ದರು. ರೋಗಿಯಾಗುವ ವರೆಗೆ ನಿಯತವಾಗಿ ಮಸೀದಿಗೆ ಹೋಗುತ್ತಿದ್ದರು. ದಿವಂಗತರು ಮೂಸಿಯಾಗಿದ್ದರು. ದಿವಂಗತರು ಪತ್ನಿಯನ್ನಲ್ಲದೆ ಮೂವರು ಪುತ್ರರನ್ನು ಮತ್ತು ಒಬ್ಬಳು ಮಗಳನ್ನು ಅಗಲಿವರು.

ಮುಂದಿನ ಜನಾಝ ದಾರುಲ್‌ಯಮನ್ ರಬ್ವದ ರಶೀದ್ ಅಹ್ಮದ್ ಅತ್‌ವಾಲ್ ಸಾಹಿಬ್‌ರ ಪತ್ನಿಯಾದ ಮುಖ್‌ತಾರಾ ಬೀಬಿ ಸಾಹಿಬ್‌ರದ್ದಾಗಿದೆ. ಇವರು ಬುರ್ಕಿನಾಫಾಸೋ ಜಾಮಿಅತುಲ್ ಮುಬಶ್ಶಿರೀನಿನ ಪ್ರಾಂಶುಪಾಲರಾದ ನಈಂ ಬಾಜ್ವ ಸಾಹಿಬ್‌ರ ಅತ್ತೆಯಾಗಿರುವರು. ಜನವರಿ 16ರಂದು ನಿಧನರಾಗಿದ್ದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಲಜ್ನ ದಾರುಲ್‌ಯಮನ್ ಪೂರ್ವದ ಮಜ್ಲಿಸ್ ಆಮಿಲದಲ್ಲಿ ಒಟ್ಟು 17 ವರ್ಷಗಳಷ್ಟು ಇವರಿಗೆ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತ್ತು. ಹಲವಾರು ದೇಶಗಳಲ್ಲಿ ಇವರಿಗೆ ಆರ್ಥಿಕ ತ್ಯಾಗಗಳನ್ನು ಮಾಡಲು ಸೌಭಾಗ್ಯ ಸಿಕ್ಕಿತ್ತು. ಲಕ್ಷಾಂತರ ರೂಪಾಯಿಗಳಷ್ಟು ಧನತ್ಯಾಗಗಳನ್ನು ಮಾಡಲು ಇವರಿಗೆ ಅಲ್ಲಾಹನು ಸೌಭಾಗ್ಯವನ್ನು ನೀಡಿದ್ದನು.

ನಿಧನಕ್ಕೆ ಕೆಲವು ತಾಸುಗಳಿಗೆ ಮುಂಚೆ, ಕಣ್ಣು ತೆರೆದಾಗ, ನನ್ನ ಬಲೆಗಳು ಎಲ್ಲಿ ಎಂದು ಅವರು ಕೇಳುತ್ತಾ ತನ್ನ ಮಗನೊಡನೆ ಅವುಗಳನ್ನು ಮಾರಾಟ ಮಾಡಿಕೊಂಡು ಸದರ್ ಸಾಹಿಬ್‌ಗೆ ಕೊಡಲು ಹೇಳಿದ್ದರು. ಸುಮಾರು ಮೂರುವರೆ ಲಕ್ಷ ರೂಪಾಯಿದಷ್ಟು ಅವುಗಳ ಬೆಲೆಯಿತ್ತು. ಅದನ್ನು ಜಮಾಅತುಗಳಲ್ಲಿ ಎಂ.ಟಿ.ಎ.ದ ಡಿಶ್ ಅಳವಡಿಸಲು ಕೊಟ್ಟರು.

1995ರಲ್ಲಿ ಜರ್ಮನಿಯಲ್ಲಿ ಅವರ ಇಬ್ಬರು ಪುತ್ರರು ಕಾರ್ ಅಪಘಾತದಲ್ಲಿ ಮೃತಪಟ್ಟಿದ್ದರು. ಬಹಳ ಧೈರ್ಯದಿಂದ ಈ ದುಃಖವನ್ನು ಸಹಿಸಿದರು. ಎಂದಿಗೂ ಈ ಅಪಘಾತದ ಬಗ್ಗೆ ಪ್ರಸ್ತಾಪಿಸಲಿಲ್ಲ, ದೂರಲಿಲ್ಲ, ಈ ದುಃಖವನ್ನು ಅಲ್ಲಾಹನ ಇಚ್ಛೆಯೆಂದು ಅರಿತು ಸಹಿಸಿಕೊಂಡರು. ತಬ್ಲೀಗ್ ಮಾಡಲು ಬಹಳ ಉತ್ಸಾಹ ಮತ್ತು ಆವೇಶವಿತ್ತು. ತಬ್ಲೀಗ್ ಮಾಡಲು ಸುತ್ತುಮುತ್ತಲಿನ ಪ್ರದೇಶಗಳಿಗೆ ದೂರದ ವರೆಗೆ ಹೋಗುತ್ತಿದ್ದರು. ಪವಿತ್ರ ಖುರ್‌ಆನಿನೊಂದಿಗೆ ಪ್ರೇಮವಿತ್ತು. ಸ್ವತಃ ನಿಯತವಾಗಿ ಪವಿತ್ರ ಖುರ್‌ಆನಿನ ಪಾರಾಯಣ ಮಾಡುವುದಲ್ಲದೇ, ಪ್ರದೇಶದ ಮಕ್ಕಳಿಗೂ ಪವಿತ್ರ ಖುರ್‌ಆನ್ ಮತ್ತು ಯಸ್ಸರ್‌ನಲ್ ಖುರ್‌ಆನ್ ಕಲಿಸುತ್ತಿದ್ದರು. ವಸಿಯ್ಯತ್ ಸಹ ಮಾಡಿದ್ದರು. ದಿವಂಗತರು ಪತಿಯನ್ನಲ್ಲದೇ ಒಬ್ಬ ಪುತ್ರನನ್ನು ಮತ್ತು ನಾಲ್ವರು ಪುತ್ರಿಯರನ್ನು ಅಗಲಿರುವರು. ಮೂವರು ಪುತ್ರಿಯರು ಲಂಡನಿನಲ್ಲಿ ಇದ್ದಾರೆ. ಒಬ್ಬಳು ಬುರ್ಕಿನಾಫಾಸೋದಲ್ಲಿ. ಲಂಡನಿನಲ್ಲಿರುವ ಪುತ್ರಿಯರು ಸಹ ಜಮಾಅತಿನ ಕೆಲಸಗಳನ್ನು ಮಾಡುತ್ತಿದ್ದಾರೆ. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್‌ನಿಂದ ವರ್ತಿಸಲಿ.

ಮುಂದಿನ ಜನಾಝ಼ ಮಂಝ಼ೂರ್ ಅಹ್ಮದ್ ಶಾಹ್ ಸಾಹಿಬ್‌ರದ್ದಾಗಿದೆ. ಜನವರಿ 17ರಂದು 82ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ತಂದೆಯಾದ ಹಝ಼್ರತ್ ಮಿಯಾ ಅಬ್ದುಲ್‌ಕರೀಂ ಸಾಹಿಬ್‌ರ ಮೂಲಕ 1903ರಲ್ಲಿ ಕುಟುಂಬದಲ್ಲಿ ಅಹ್ಮದಿಯ್ಯತ್ ಪ್ರವೇಶಿಸಿತ್ತು. ಅವರು ಹಝ಼್ರತ್ ಮಸೀಹ್ ಮೌಊದ್‌ರ(ಅ) ಸಹಾಬಿಯಾಗಿದ್ದರು. ಹಝ಼್ರತ್ ಮಸೀಹ್ ಮೌಊದ್(ಅ) ಕರಂದೀನಿನ ಮೊಕದ್ದಮೆಗೆ ಸಂಬಂಧಿಸಿ ಜೆಹಲಂ ಹೋಗಿದ್ದಾಗ ಅವರು ಬೈಅತ್ ಮಾಡಿದ್ದರು. ಶಾದ್ ಸಾಹಿಬ್‌ರು 1956ರಲ್ಲಿ ಕರಾಚಿಗೆ ಸ್ಥಳಾಂತರಗೊಂಡರು. ಅನಂತರ ಅಲ್ಲಿ ಕರಾಚಿಯ ಜಿಲ್ಲಾ ಖಾಇದ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. ಅಲ್ಲಿ ಅವರು ಖುದ್ದಾಮುಲ್ ಅಹ್ಮದಿಯದಲ್ಲಿ ಬಹಳ ಉತ್ತಮವಾಗಿ ಕೆಲಸ ಮಾಡಿದ್ದರು. ಅನಂತರ ಡರಗ್‌ರೋಡ್ ಕಾಲನಿಯ ಸದರ್ ಜಮಾಅತ್ ಮತ್ತು ಕರಾಚಿಯ ನಾಇಬ್ ಅಮೀರ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದರು. 1984ರಲ್ಲಿ ಸಿಕ್ಕರ್‌ನಲ್ಲಿ ಹಝ಼್ರತ್ ಖ಼ಲೀಫ಼ತುಲ್ ಮಸೀಹ್‌ರನ್ನು ಸ್ವಾಗತಿಸಿದ ಸಂಘದಲ್ಲಿ ಇವರು ಇದ್ದರು. ಅವರ ರವಾನೆ ತನಕ ಏರ್‌ಪೋರ್ಟಿನಲ್ಲಿದ್ದರು. 2010ರಲ್ಲಿ ಲಂಡನಿಗೆ ಶಿಫ್ಟ್ ಆದರು. ನಿಯತವಾಗಿ ಬೈತುಲ್ ಫುತೂಹ್‌ನ ಹೋಮಿಯೋಪತಿಕ್ ಡಿಸ್ಪೆನ್ಸರಿಯಲ್ಲಿ ಸಮಯ ನೀಡುತ್ತಿದ್ದರು. ಮರಣದ ತನಕ ಅವರು ಜಮಾಅತಿನ ತರಬೇತಿ ಸೆಕ್ರಟರಿ ಮತ್ತು ನವ ಅಹ್ಮದಿಯರ ತರಬೇತಿ ಸೆಕ್ರಟರಿ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆಯುತ್ತಿದ್ದರು. ದಿವಂಗತರು ಮೂಸಿಯಾಗಿದ್ದರು. ಅವರಿಗೆ ಇಬ್ಬರು ಮೂವರು ಮೊಮ್ಮಕ್ಕಳು ಇದ್ದಾರೆ. ಒಬ್ಬ ಮೊಮ್ಮಗ ಯು.ಕೆ.ಯಲ್ಲಿ ಮುರಬ್ಬಿಯಾಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆಯುತ್ತಿದ್ದಾರೆ. ಅಲ್ಲಾಹನು ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಂದಿನ ಜನಾಝ಼ ಯು.ಎಸ್.ಎ. ಯ ಅಬ್ದುರ್ರಹ್ಮಾನ್ ಸಲೀಂ ಸಾಹಿಬ್‌ರ ಪತ್ನಿಯಾದ ಹಮೀದ ಉಖ್ತರ್ ಸಾಹಿಬ್‌ರದ್ದಾಗಿದೆ. ಅವರು ಜನವರಿ 19ರಂದು 92ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನು ದಿವಂಗತರಿಗೆ ದೀರ್ಘ ಕಾಲ, ಸುಮಾರು 50 ವರ್ಷಗಳ ಕಾಲ ಕರಾಚಿ ಮತ್ತು ರಾವಲ್ಪಿಂಡಿಯಲ್ಲಿ ಲಜ್ನ ಇಮಾಇಲ್ಲಾಹ್‌ದಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ನೀಡಿದ್ದನು. ಜನರಲ್ ಸೆಕ್ರಟರಿ ಆಗಿ, ಲಜ್ನ ಸದರ್ ಆಗಿ, **ಖಿಯಾದತ್ ನಿಗ್ರಾನ್** ಆಗಿಯೂ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದಿದ್ದರು. ಖ಼ಿಲಾಫ಼ತಿನ ಪ್ರೇಮಿಯಾಗಿದ್ದರು. ಮಕ್ಕಳನ್ನು ಸಹ ಖ಼ಿಲಾಫ಼ತಿನೊಂದಿಗೆ ನಿಷ್ಠೆಯ ಸಂಬಂಧವಿರಿಸಲು ಉಪದೇಶಿಸುತ್ತಿದ್ದರು. ಜೀವನಪೂರ್ತಿ ನಮಾಝ಼್ ಮತ್ತು ತಹಜ್ಜುದ್ ನಿಯತವಾಗಿ ತಹಜ್ಜುದ್ ನಿರ್ವಹಿಸುತ್ತಿದ್ದರು. ಪವಿತ್ರ ಖುರ್‌ಆನ್ ಓದಲು ಮತ್ತು ಕಲಿಸಲು ವಿಶೇಷವಾದ ಗಮನವನ್ನು ವಹಿಸುತ್ತಿದ್ದರು. ತನ್ನ ಮಕ್ಕಳಿಗೂ ಪವಿತ್ರ ಖುರ್‌ಆನ್ ಕಲಿಸಿದ್ದರು. ಇವರಿಗೆ ಉಮ್ರ ಮಾಡುವ ಸೌಭಾಗ್ಯ ಸಿಕ್ಕಿತ್ತು. ದಿವಂಗತರು ವಸಿಯ್ಯತ್ ಮಾಡಿದ್ದರು. ದಿವಂಗತರು ಐವರು ಪುತ್ರರನ್ನು ಮತ್ತು ಇಬ್ಬರು ಪುತ್ರಿಯರನ್ನು ಅಗಲಿರುವರು. ಅವರ ಮಕ್ಕಳಲ್ಲಿ ಜಮಾಅತಿನ ಸೇವೆ ಸಲ್ಲಿಸುವ ಹಲವರು ಇದ್ದಾರೆ. ಜಮಾಅತಿನಲ್ಲಿ ವಿವಿಧ ನೆಲೆಯಲ್ಲಿ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಪಡೆಯುತ್ತಿದ್ದಾರೆ. ಅವರು ಮಕ್ಕಳಾದ ಡಾಕ್ಟರ್ ಅಬ್ದುಸ್ಸಲಾಂ ಸಾಹಿಬ್ ಮತ್ತು ಡಾಕ್ಟರ್ ಖ಼ಲೀಕ್ ಅಹ್ಮದ್ ಸಾಹಿಬ್‌ರು ಉತ್ತಮವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಂದಿನ ಜನಾಝ಼ ಜರ್ಮನ್ ಅಹ್ಮದಿಯಾದ ಸನ್ಮಾನ್ಯ ನಾಸಿರ್ ಪೀಟರ್ ಲೋಟ್‌ಸೀನ್ ಸಾಹಿಬ್‌ರದ್ದಾಗಿದೆ. ಜನವರಿ 20ರಂದು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ಮಗಳು ಹೇಳುತ್ತಾರೆ: 1983ರಲ್ಲಿ ಒಂದು ದಿನ ನನ್ನ ತಂದೆತಾಯಂದಿರು ಪಟ್ಟಣದ ಮುಖ್ಯ ಮಾರುಕಟ್ಟೆಯಿಂದ ಸಾಗುತ್ತಿದ್ದರು. ಅವರ ದೃಷ್ಟಿಗಳು ಒಂದು ಸ್ಟಾಲಿನ ಕಡೆಗೆ ಹೋದುವು. ಆ ಸ್ಟಾಲಿನಲ್ಲಿ ಕೇವಲ ಒಂದು ಮೇಜನ್ನು ಇರಿಸಲಾಗಿತ್ತು. ಅದರಲ್ಲಿ ಕೆಲವು ಪ್ರದಾನ ಪುಸ್ತಕಗಳು ಇದ್ದುವು. ಅದರ ಹಿಂದೆ ಒಂದೆರಡು ವಿದೇಶಿಯರಾದ ಇಬ್ಬರು ಯುವಕರು ನಿಂತಿದ್ದರು. ಅವರನ್ನು ಪರಿಚಯಪಟ್ಟಾಗ, ಅದು ಇಸ್ಲಾಮಿನ ಪ್ರತಿನಿಧಿಯಾದ ಅಹ್ಮದಿಯ್ಯಾ ಜಮಾಅತಿನ ಸ್ಟಾಲೆಂದು ಗೊತ್ತಾಯಿತು. ಹೀಗೆ ಆ ಯುವಕರೊಡನೆ ಸವಾಲುಗಳನ್ನು ಕೇಳಲಾಯಿತು. ಜಮಾಅತಿನ ಸಾಹಿತ್ಯಗಳನ್ನು ಕೊಂಡುಹೋದರು. ಲಿಟರೇಚರ್‌ಗಳನ್ನು ಓದಿದ ನಂತರ ಅವರು ಪುನಃ ಆ ಜನರನ್ನು ಸಂಪರ್ಕಿಸಿ ಭೇಟಿಯಾದರು. ಅವರನ್ನು ಮೂವರು ಅಹ್ಮದಿಯರು ಊಟ ಮಾಡಲು ಆಮಂತ್ರಿಸಿದರು. ರಮಝ಼ಾನಿನ ತಿಂಗಳಾಗಿತ್ತು ಇಫ್ತಾರಿ ಮಾಡಲು ನನ್ನ ತಂದೆತಾಯಂದಿರು ಅವರ ಮನೆಗೆ ಹೋಗಿದ್ದರು. ಅವರು ನೆಲದಲ್ಲಿ ಹಳೆಯ ಪತ್ರಿಕೆಗಳನ್ನು ಬಿಡಿಸಿ ಊಟವನ್ನು ಹಾಕಿದ್ದರು. ಕುಳಿತುಕೊಳ್ಳಲು ಬೇರೆ ಜಾಗವಿರಲಿಲ್ಲ. ನೆಲದಲ್ಲಿ ಕಾಲಿನ್‌ನ ಸಮೀಪ ಪತ್ರಿಕೆ ಹರಡಿಕೊಂಡು ಅದರಲ್ಲಿ ಊಟವನ್ನು ಇರಿಸಿದ್ದರು. ನನ್ನ ತಂದೆತಾಯಂದಿರಿಗೆ ಊಟ ತುಂಬಾ ಇಷ್ಟವಾಯಿತು. ಆದರೆ ಅದಕ್ಕಿಂತ ಹೆಚ್ಚು ಆ ಜನರ ಸರಳತೆ ಮತ್ತು ಅತಿಥಿ ಸತ್ಕಾರ ಅವರಿಗೆ ಇಷ್ಟವಾಯಿತು. ಅದರ ಖುಶಿ ಹೆಚ್ಚಿಗೆ ಇತ್ತು. ಊಟ ಮಾಡಿದ ನಂತರವೂ ಮಾತುಕತೆ ನಡೆಯಿತು. ಅನಂತರ ಮನೆಗೆ ಆಗುಹೋಗು ಶುರುವಾಯಿತು. ಕೆಲವು ತಿಂಗಳ ವರೆಗೆ ಓದಿದ ಮತ್ತು ಅನ್ವೇಷಣೆ ನಡೆಸಿದ ನಂತರ 1984ರಲ್ಲಿ ನನ್ನ ತಂದೆ ತಾಯಂದಿರು ಬೈಅತ್ ಮಾಡಿಕೊಂಡು ಅಹ್ಮದಿಯಾ ಜಮಾಅತಿನಲ್ಲಿ ಸೇರಿದರು. ಅದು ಈದ್ ಹಬ್ಬದ ಸಂದರ್ಭವಾಗಿತ್ತು. ಸ್ಥಳೀಯ ಸಹೋದರರೊಂದಿಗೆ ಸನ್ಮಾನ್ಯ ನಾಸಿರ್ ಸಾಹಿಬ್ ಹೋಗಿ ಬೈಅತ್ ಮಾಡುವ ಸೌಭಾಗ್ಯವನ್ನು ಪಡೆದರು. ಒಂದು ಜಲ್ಸ ಸಾಲಾನದಲ್ಲಿ ಅವರಿಗೆ ಭಾಷಣ ಮಾಡಲು ಸಹ ಸೌಭಾಗ್ಯ ಸಿಕ್ಕಿತ್ತು. ಮಗಳು ಹೇಳುತ್ತಾರೆ: ನನ್ನ ತಾಯಿಗೆ ಧರ್ಮದೊಂದಿಗೆ ವಿಶೇಷವಾದ ಅಭಿರುಚಿಯಿತ್ತು. ಸತ್ಯಧರ್ಮದ ಅನ್ವೇಷಣೆಯ ಆಸಕ್ತಿ ಅವರನ್ನು ಅಹ್ಮದಿಯ್ಯತ್ ಕಡೆಗೆ ಆಕರ್ಷಿಸಿತ್ತು. ಅನಂತರ ಅವರಿಗೆ ಜೀವಂತ ದೇವನೊಂದಿಗೆ ಜೀವಂತವಾದ ಸಂಬಂಧವು ಉಂಟಾಯಿತು. ಪ್ರಾರ್ಥನೆಗಳ ಅಂಗೀಕಾರದ ದೃಷ್ಟಾಂತಗಳನ್ನು ಹಲವು ಬಾರಿ ಕಂಡರು. ಅಲ್ಲಾಹನು ಸಹ ಅವರಿಗೆ ಎಂತಹ ದೃಷ್ಟಾಂತಗಳನ್ನು ದೈವಿಕ ಕುರುಹುಗಳನ್ನು ತೋರಿಸುತ್ತಿದ್ದನು ಎಂಬುದರ ಬಗ್ಗೆ ಅವರ ಮಗಳು ಹೇಳುತ್ತಾರೆ: ನನ್ನ ತಾಯಿಗೆ ಒಂದು ಕಣ್ಣಿನ ದೃಷ್ಟಿ ನಷ್ಟವಾಗಿತ್ತು. 1986ರಲ್ಲಿ ಜಲ್ಸ ಸಾಲಾನ ಯು.ಕೆ.ಯಲ್ಲಿ ಭಾಗವಹಿಸಿದ್ದರು. ಅಚಾನಕ್ಕಾಗಿ ಅವರ ದೃಷ್ಟಿ ಸ್ವಲ್ಪ ಮಟ್ಟಿಗೆ ಮರಳಿಬಂತು. ಮೊದಲು ಆ ಕಣ್ಣು ಪೂರ್ಣವಾಗಿ ಮುಚ್ಚಿತ್ತು. ಆದರೆ ಅನಂತರ ಸ್ವಲ್ಪ ಸ್ವಲ್ಪವಾಗಿ ಆ ಕಣ್ಣಿನಿಂದ ಕಾಣುವಂತಾಯಿತು. ಯಾರ ಒಂದು ಕಣ್ಣು ಪೂರ್ಣವಾಗಿ ಅಂಧವಾಗಿತ್ತೋ ಅವರಿಗೆ ಇದೊಂದು ಪವಾಡವೇ ಆಗಿತ್ತು. ಈ ದೃಷ್ಟಾಂತ ಹನ್ನೊಂದು ವರ್ಷಗಳ ತನಕ ಆ ಕಣ್ಣು ಕುರುಡಾಗಿದ್ದ ನಂತರ ಘಟಿಸಿತ್ತು. ಅದು ಕೇವಲ ಅವರ ದುಆದ ಕಾರಣದಿಂದ ಮತ್ತು ಜಲ್ಸದಲ್ಲಿ ಬಂದು ಪ್ರಾರ್ಥನೆಗಳನ್ನು ಮಾಡಿದ್ದ ಅನುಗ್ರಹದಿಂದ ಲಭಿಸಿತ್ತು ಎಂದು ಅವರು ಹೇಳುತ್ತಿದ್ದರು.

ಲಂಡನನಲ್ಲಿ ಒಬ್ಬಳು ಜರ್ಮನ್ ಅಹ್ಮದಿಯಾದ ಖ಼ದೀಜ ಸಾಹಿಬರ ಮನೆಯಲ್ಲಿ ತಂಗಿದ್ದರು. ಮಗಳು ಹೇಳುತ್ತಾರೆ: ಒಂದು ದಿನ ನನ್ನ ತಂದೆತಾಯಂದಿರು ಸುತ್ತಾಡುವ ಉದ್ದೇಶದಿಂದ ಮನೆಯಿಂದ ಹೊರಟು ಸ್ವಲ್ಪ ದೂರಕ್ಕೆ ನಡೆದರು. ಮರಳಿ ಬರುವಾಗ ರಸ್ತೆ ಮರೆತುಹೋಯಿತು. ಇರುಳು ವರ್ಧಿಸುವುದರೊಂದಿಗೆ ಅವರ ಚಿಂತೆ ವರ್ಧಿಸುತ್ತಿತ್ತು. ವಾಹನಗಳು ಬಹಳವಾಗಿ ಇದ್ದ ಒಂದು ಮಾರ್ಗದಲ್ಲಿ ಅವರು ನಿಂತಿದ್ದರು. ಎಲ್ಲಿ ನಿಂತಿರುವರು ಎಂದು ಅವರಿಗೆ ಗೊತ್ತಾಗುತ್ತಿರಲಿಲ್ಲ. ಇರುಳು ಬಹಳ ಅಧಿಕವಾದಾಗ ನನ್ನ ತಾಯಿ ಹೇಳಿದರು: ಬನ್ನಿ ದುಆ ಮಾಡೋಣ, ದುಆ ಮಾಡಿದ ಕೂಡಲೇ ಸನ್ಮಾನ್ಯ ಖದೀಜ ಸಾಹಿಬ್‌ರ ಅಳಿಯ ತನ್ನ ವಾಹನದೊಂದಿಗೆ ಅವರ ಮುಂದೆ ನಿಂತು "ಬನ್ನಿರಿ ವಾಹನದಲ್ಲಿ ಕುಳಿತುಕೊಳ್ಳಿರಿ, ನಿಮ್ಮನ್ನು ಮನಗೆ ಕೊಂಡುಹೋಗುವೆನು" ಎಂದು ಹೇಳುತ್ತಿದ್ದರು. ದುಆ ಸ್ವೀಕಾರದ ಈ ದೃಶ್ಯ ಅವರ ವಿಶ್ವಾಸವನ್ನು ಇನ್ನೂ ಹೆಚ್ಚು ಸುದೃಢಗೊಳಿಸಿತ್ತು ಮತ್ತು ವರ್ಧಿಸಿತ್ತು. ಜರ್ಮನಿಯ ಮುರಬ್ಬಿಯಾದ ಲಈಖ್ ಮುನೀರ್ ಸಾಹಿಬ್ ಬರೆಯುತ್ತಾರೆ: ಲೇತಿಸನ್ ಸಾಹಿಬ್‌ರ ಸಂಪೂರ್ಣ ಕುಟುಂಬ ಅಹ್ಮದಿಯಾಗಿತ್ತು. ಇದು ಏಕ ಜರ್ಮನಿ ಅಹ್ಮದಿ ಕುಟುಂಬವಾಗಿದೆ ಎಂದು ಆ ಕಾಲದಲ್ಲಿ ನಾವು ಹೇಳುತ್ತಿದ್ದುವು. ಅವರು ಬಹಳ ನಿಷ್ಠಾವಂತ, ಮಿತಭಾಷಿ ಮತ್ತು ಸಭ್ಯ ವ್ಯಕ್ತಿಯಾಗಿದ್ದರು. ಧನತ್ಯಾಗದಲ್ಲಿ ಲೇತಿಸನ್ ಸಾಹಿಬ್‌ರು ಬಹಳ ಮುಂದಿದ್ದರು. ತಬ್ಲೀಗ್ ಪ್ರೋಗ್ರಾಮ್‌ಗಳಲ್ಲಿ ಲೆಕ್ಚರ್ ನೀಡುತ್ತಿದ್ದರು. ಅವರ ಮುಂದೆ ಹಝ಼್ರತ್

ಮಸೀಹ್ ಮೌಊದ್‌ರ ಹೆಸರು ಹೇಳಲ್ಪಡುವಾಗ ಅವರ ಕಣ್ಣುಗಳು ಕಣ್ಣೀರಿನಿಂದ ಒದ್ದೆಯಾಗುತ್ತಿದ್ದುವು. ತಬ್ಲೀಗಿನ ಒಂದು ಮೀಟಿಂಗಿನಲ್ಲಿ ಅವರು ಇಸ್ಲಾಮಿನ ಅಧ್ಯಾಪನೆಗಳನ್ನು ಎಷ್ಟು ಮನೋಹರವಾದ ಶೈಲಿಯಲ್ಲಿ ಮುಂದಿರಿಸಿದ್ದರು ಎಂದರೆ, 70 ವರ್ಷ ಪ್ರಾಯದ ಒಬ್ಬ ಜರ್ಮನ್ ನನ್ನ ಬಳಿಗೆ ಬಂದು ಹೀಗೆ ಹೇಳಿದರು: ನನಗೆ ಇಸ್ಲಾಮಿನ ಬಗ್ಗೆ ಇಂದು ಲಭಿಸಿದ ಮಾಹಿತಿ ಇದಕ್ಕೆ ಮುಂಚೆ ಎಂದೂ ಲಭಿಸಿರಲಿಲ್ಲ. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಮಕ್ಕಳನ್ನು ಸಹ ಅಹ್ಮದಿಯ್ಯತ್‌ನಲ್ಲಿ ನೆಲೆಗೊಳಿಸಲಿ.

ಮುಂದಿನ ಜನಾಝ ಜಾಮಿಅ ರಬ್ವದ ವೈಸ್ ಪ್ರಿನ್ಸಿಪಾಲ್ ಆದ ಮುರಬ್ಬಿ ಖಲೀಲ್ ಅಹ್ಮದ್ ತನ್ವೀರ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ರಝಿಯ ತನ್ವೀರ್ ಸಾಹಿಬರದ್ದಾಗಿದೆ. ಜನವರಿ 27ರಂದು 58ನೇ ವಯಸ್ಸಿನಲ್ಲಿ ಕೆನಡದಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರಿಗೆ ಕ್ಯಾನ್ಸರ್ ಇತ್ತು. ದಿವಂಗತರಿಗೆ ಧಾರ್ಮಿಕ ಕೆಲಸಗಳಲ್ಲಿ ಬಹಳ ಅಭಿರುಚಿಯಿತ್ತು, ಅದು ಅವರ ಮರಣದ ವರೆಗೆ ನೆಲೆನಿಂತಿತ್ತು. 22 ವರ್ಷಗಳ ಕಾಲ ಪಾಕಿಸ್ತಾನದ ಲಜ್ನ ಇಮಾಇಲ್ಲಾಹ್ ಆಫೀಸ್ ಮತ್ತು ಮಿಸ್‌ಬಾಹ್ ನಿಯತಕಾಲಿಕದ ಆಫೀಸ್‌ನ ಹಲವು ವಿಭಾಗದಲ್ಲಿ ಅಕೌಂಟ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯವನ್ನು ಪಡೆದಿದ್ದರು. ರೋಗಿಯಾಗುವ ವರೆಗೆ ಅವರ ಈ ಸೇವೆ ಜಾರಿಯಲ್ಲಿತ್ತು. ಹಝ್ರತ್ ಛೋಟಿಆಪರೊಂದಿಗೆ ಸಾಕಷ್ಟು ಸೇವೆ ಸಲ್ಲಿಸಲು ಸೌಭಾಗ್ಯವನ್ನು ಪಡೆದಿದ್ದರು. ಬಹಳವಾಗಿ ಕಲಿಯಲು ಅವರಿಗೆ ಸಂದರ್ಭ ಸಿಕ್ಕಿತ್ತು. ಅವರ ದುಆಗಳನ್ನು ಪಡೆಯಲು ಅವರಿಗೆ ಸೌಭಾಗ್ಯ ಸಿಕ್ಕಿತ್ತು. ಅಲ್ಲಾಹನು ಅವರೊಡನೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಂದಿನ ಜನಾಝ ಸರ್‌ಗೋಧ ಜಿಲ್ಲೆಯ ದೋಧ ಗ್ರಾಮದ ಮಿಯಾ ಶೇರ್ ಮುಹಮ್ಮದ್ ಸಾಹಿಬ್‌ರ ಮಗನಾದ ಮಿಯಾ ಮಂಝೂರ್ ಅಹ್ಮದ್ ಗ್ಹಾಲಿಬ್‌ರದ್ದಾಗಿದೆ. ಫೆಬ್ರವರಿ 7ರಂದು ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ಹಿರಿಯ ಸಹೋದರರಿಗೆ 1955ರಲ್ಲಿ ಅಹ್ಮದಿಯ್ಯತ್ ಸ್ವೀಕರಿಸಲು ಸೌಭಾಗ್ಯ ಲಭಿಸಿತ್ತು. ಅನಂತರ ಹಿರಿಯ ಸಹೋದರರೊಂದಿಗೆ ರಬ್ವ ಹೋಗುತ್ತಿದ್ದರು. ಅಲ್ಲಿ ಅವರು ಸಹ ಬೈಅತ್ ಮಾಡಿದರು. ಅವರ ಮಗನಾದ ಬೆಲ್ಜಿಯಂನ ಬಶೀರ್ ಅಹ್ಮದ್ ಸಾಹಿಬ್ ಹೇಳುತ್ತಾರೆ: ಅವರು ಖಿಲಾಫತಿನ ಪ್ರೇಮಿಯಾಗಿದ್ದರು. ಪೂರ್ಣವಾಗಿ ಅನುಸರಿಸುತ್ತಿದ್ದರು. ಸ್ವತಃ ಅದರ ಬಗ್ಗೆ ಅವರಿಗೆ ಚೆನ್ನಾಗಿ ಗೊತ್ತಿತ್ತು. ಖಂಡಿತವಾಗಿಯೂ ಬಹಳ ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಜಮಾಅತಿನ ಸೇವೆ ಮಾಡುವ ಮತ್ತು ಖಿಲಾಫತಿನ ಅನುಸರಣೆ ಮಾಡುವವರಾಗಿದ್ದರು. ಧಾರ್ಮಿಕ ವಿಷಯಕ್ಕೆ ಲೌಕಿಕತೆಯ ಮೇಲೆ ಆದ್ಯತೆ ನೀಡುತ್ತಿದ್ದರು. ದೀನಿನ ಸೇವಕ, ಅತಿಥಿ ಸತ್ಕಾರಿ, ಬಹಳ ಸರಳತೆ ಹೊಂದಿದ್ದ, ಬಡವರ ಸೇವೆ ಮಾಡುವ, ಸ್ನೇಹಮಯಿ, ಅತ್ಯಂತ ಕರುಣಾಳು ಮತ್ತು ಪ್ರಿಯಕರ ವ್ಯಕ್ತಿಯಾಗಿದ್ದರು. ಸರ್‌ಗೋಧ ಜಿಲ್ಲೆಯ ಖುದ್ದಾಮುಲ್ ಅಹ್ಮದಿಯದಲ್ಲೂ ಅನ್ಸಾರುಲ್ಲಾಹ್‌ದಲ್ಲೂ ಜಮಾಅತಿನಲ್ಲಿ ಜಿಲ್ಲಾ ಮಟ್ಟದಲ್ಲಿ ಸೆಕ್ರಟರಿ ಮಾಲ್, ವಖ್ಫೇ ಜದೀದ್ ಮತ್ತು ತಹ್ರೀಕ್ ಜದೀದ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದಿದ್ದರು. ಬಹಳ ಉತ್ತಮವಾಗಿ ಅವರು ತಮ್ಮ ಸೇವೆಗಳನ್ನು ಸಲ್ಲಿಸಿದರು ಅವರ ಒಬ್ಬ ಮೊಮ್ಮಗನು ಮುರಬ್ಬಿಯಾಗಿರುವರು. ಲಂಡನಿನಲ್ಲಿ ಈಗ ಪಿ.ಎಸ್. ಆಫೀಸ್‌ನಲ್ಲಿ ಕೆಲಸ ಮಾಡುತ್ತಿದ್ದಾರೆ. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಂದಿನ ಜನಾಝ ಎಂ.ಟಿ.ಎ.ದಲ್ಲಿ ನಮ್ಮ ಸ್ವಯಂ ಸೇವಕರಾದ ಯಮನಿನ ಹಮೀದ್ ಅಹ್ಮದ್ ಅದನ್ ಸಾಹಿಬ್‌ರ ಪತ್ನಿಯಾದ ಬುಶ್ರಾ ಹಮೀದ್ ಅನ್ವರ್ ಅದ್‌ನೀ ಸಾಹಿಬರದ್ದಾಗಿದೆ. ಸನ್ಮಾನ್ಯ ಮುಹಮ್ಮದ್ ಅಹ್ಮದ್ ಅನ್ವರ್ ಸಾಹಿಬ್‌ರ ತಾಯಿಯಾಗಿದ್ದರು. ಡೈರಕ್ಟರ್ ಪ್ರೊಡೆಕ್ಷನ್ ಎಂ.ಟಿ.ಎ. ಆದ ಮುನೀರ್ ಅಹ್ಮದ್ ಓದೆ ಸಾಹಿಬ್‌ರ ಅತ್ತೆಯಾಗಿದ್ದರು. ಫೆಬ್ರವರಿ 14ರಂದು 69ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಇವರು ಹಝ್ರತ್ ಮಸೀಹ್ ಮೌಊದ್‌ರ(ಅ) ಸಹಾಬಿಯಾದ ಹಝ್ರತ್ ಹಾಜೀ ಮುಹಮ್ಮದ್ ದೀನ್ ಸಾಹಿಬ್ ದಯಾಲವಿ ಮತ್ತು ಹಝ್ರತ್ ಹುಸೈನ್ ಬೀಬಿ ಸಾಹಿಬರ ಮೊಮ್ಮಗಳಾಗಿದ್ದರು. ಎಂ.ಟಿ.ಎ.ಯಲ್ಲೂ ಸಹ ಇವರಿಗೆ ಕೆಲಸ ಮಾಡುವ ಸೌಭಾಗ್ಯ ಸಿಕ್ಕಿತ್ತು. ಲಿಖಾಮಅಲ್ ಅರಬ್ ಪ್ರೋಗ್ರಾಮಿನ ಎಲ್ಲ ಡೇಟವನ್ನು ಟ್ರಾನ್ಫರ್ ಮಾಡುವುದಕ್ಕೆ ಸಂಬಂಧಿಸಿ ಬಹಳ ಕರಾರುವಕ್ಕಾಗಿ ದೀರ್ಘಕಾಲ ಕೆಲಸ ಮಾಡುತ್ತಾ ಇದ್ದರು. ಅದರೊಂದಿಗೆ ಅಲ್‌ಅರಬಿಯದಲ್ಲೂ ಸೇವೆಗಳನ್ನು ಮಾಡಿದ್ದರು. ಜಮಾಅತಿನ ಎಲ್ಲ ರೀತಿಯ ಸೇವೆಗಳನ್ನು ಮಾಡುವುದರಲ್ಲಿ ಖುಶಿಪಡುತ್ತಿದ್ದರು. ಬಹಳ ಸಹನೆ ಮತ್ತು ಕೃತಜ್ಞತೆ ಹೊಂದಿದ್ದ ಸ್ತ್ರೀಯಾಗಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಂದಿನ ಜನಾಝ ಏಲ್ಡ್ ವರೀಡ್ ಕೆನ್ಯಾದ ಮುಬಲ್ಲಿಗ್ ಆಗಿರುವ ಸನ್ಮಾನ್ಯ ಮುಹಮ್ಮದ್ ಅಫ್‌ಝಲ್ ಝಫರ್ ಸಾಹಿಬ್‌ರ ಪತ್ನಿಯಾದ ನೂರುಸ್ಸಬಾಹುಝ್ಝಫರ್‌ದ್ದಾಗಿದೆ. ಮಾರ್ಚ್ 25ರಂದು 62ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ದಿವಂಗತ ಮುರಬ್ಬಿಯಾದ ಮೌಲಾನ ಸಈದ್ ಅನ್ಸಾರಿ ಸಾಹಿಬ್‌ರ ಕಿರಿಯ ಮಗಳಾಗಿದ್ದರು. ಬ್ರಿಟನಿನ ದಿವಂಗತ ನಸೀಂ ಬಾಜ್ವ ಸಾಹಿಬ್‌ರ ಪತ್ನಿಯ ಕಿರಿಯ ಸಹೋದರಿಯಾಗಿದ್ದರು. ಅವರ ಪತಿಯಾದ ಮುಹಮ್ಮದ್ ಅಫ್‌ಝಲ್ ಸಾಹಿಬ್ ಬರೆಯುತ್ತಾರೆ: ಅಲ್ಲಾಹನ ಅನುಗ್ರಹದಿಂದ ಐದು ಹೊತ್ತಿನ ನಮಾಝನ್ನು ಸರಿಯಾಗಿ ನಿರ್ವಹಿಸುವ, ತಹಜ್ಜುದ್ ಅನುಷ್ಠಿಸುವ ನಿಯತವಾಗಿ ಪ್ರತಿದಿನ ಪವಿತ್ರ ಖುರ್‌ಆನ್ ತಿಲಾವತ್ ಮಾಡುವ ಸ್ತ್ರೀಯಾಗಿದ್ದರು. ಪ್ರಾರ್ಥನೆಗಳ ಮೇಲೆ ಅಪರಿಮಿತವಾದ ದೃಢವಿಶ್ವಾಸವಿತ್ತು. ಸ್ವತಃ ಸದಾ ದುಆಗಳಲ್ಲಿ ನಿರತರಾಗುತ್ತಿದ್ದರು ಮತ್ತು ಮಕ್ಕಳೊಡನೆ ಸಹ ಯಾವಾಗಲೂ ದುಆಗಳನ್ನು ಮಾಡಲು ಉಪದೇಶಿಸುತ್ತಿದ್ದರು. ಖಲೀಫತುಲ್ ಮಸೀಹ್‌ರ ಖುತ್ಬಗಳನ್ನು ಎಡಬಿಡದೇ ಕೇಳುತ್ತಿದ್ದರು. ಅನಂತರ ಮಕ್ಕಳ ತರಬೇತಿಗಾಗಿ ಸ್ವತಃ ಪುನಃ ಅದರಿಂದ ಕೆಲವು ಅಂಶಗಳನ್ನು ಹೇಳುಕೊಡುತ್ತಿದ್ದರು. ಹದೀಸ್, ಚರಿತ್ರೆ ಮತ್ತು ಜಮಾಅತಿನ ಗ್ರಂಥಗಳ ವಿಶ್ವಾಸವರ್ಧಕ ಘಟನೆಗಳು ಬಹಳವಾಗಿ ಮಕ್ಕಳಿಗೆ ಹೇಳಿಕೊಡುತ್ತಿದ್ದರು. ಸದಾ ಧರ್ಮದ ಸೇವೆ ಮತ್ತು ಖಿಲಾಫತ್‌ನೊಂದಿಗೆ ಸೇರಿಕೊಂಡಿರಲು ಉಪದೇಶಿಸುತ್ತಿದ್ದರು. ಅಲ್ಲಾಹನ ಅನುಗ್ರಹದಿಂದ ಮೂಸಿಯಾಗಿದ್ದರು. ಚಂದಾಗಳ ಪಾವತಿಯಲ್ಲಿ ಬಹಳ ಕಟ್ಟುನಿಟ್ಟಾಗಿದ್ದರು. ಪ್ರತಿಯೊಂದು ಧನತ್ಯಾಗದಲ್ಲಿ ಭಾಗಿಯಾಗುತ್ತಿದ್ದರು. ಅತಿಥಿ ಸತ್ಕಾರದಲ್ಲಿ ಅಲ್ಲಾಹನು ಅವರಿಗೆ ಬಹಳ ಹೆಚ್ಚು ತೆರೆದ ಮನಸ್ಸನ್ನು ದಯಪಾಲಿಸಿದ್ದನು. ಅವರು ಹೇಳುತ್ತಾರೆ: ದಿವಂಗತ ಪತ್ನಿಯೊಂದಿಗೆ ನನಗೆ 21 ವರ್ಷದ ಸಂಬಂಧವಿತ್ತು. ಅವರ ಈ ಸಂಬಂಧ ಬಹಳ ಮೃದು ಮತ್ತು ಶ್ಲಾಘನೀಯವಾಗಿತ್ತು. ಫಿಜಿಯಲ್ಲಿ ಝಫರ್ ಸಾಹಿಬ್ ಮುಬಲ್ಲಿಗ್ ಆಗಿದ್ದಾಗ ಅವರ ಮೊದಲ ಪತ್ನಿ ಒಂದು ಅಪಘಾತದಲ್ಲಿ ಅಲ್ಲೇ ಶಹೀದ್ ಆಗಿದ್ದರು. ಮೊದಲ ಪತ್ನಿಯ ಇಬ್ಬರು ಪುತ್ರಿಯರು ಸಮೇತ ಎಲ್ಲ ನಾಲ್ಕು ಮಕ್ಕಳನ್ನು ಇವರು ಪಾಲನೆ ಪೋಷಣೆ ಮಾಡಿದರು. ಮೊದಲು ಪತ್ನಿಯ ಮಕ್ಕಳಿಗೂ ಇವರು ಸ್ವಂತ ತಾಯಿಯ ರೀತಿಯಲ್ಲಿ ಪ್ರೀತಿ ನೀಡಿದರು. ಅವರು ನಮ್ಮ ತಾಯಿಯಲ್ಲವೆಂಬ ಭಾವನೆ ಉಂಟಾಗುವಂತೆ ಮಾಡಿರಲಿಲ್ಲವೆಂದು ಆ ಮಕ್ಕಳು ಹೇಳುತ್ತಾರೆ. ಆ ಮಕ್ಕಳಿಗೂ ಉತ್ತಮ ನೈತಿಕ ತರಬೇತಿ ನೀಡಿದರು. ಕಲಿಸಿದರು. ಝಫರ್ ಸಾಹಿಬ್ ಹೇಳುತ್ತಾರೆ: ಕೇವಲ ಮಕ್ಕಳೊಂದಿಗೆ ಮಾತ್ರವಲ್ಲ ನನ್ನ ಮೊದಲ ತಾಯಿಯ ಮನೆಯವರೊಂದಿಗೆ ಸಹ ಬಹಳ ಉತ್ತಮ ರೀತಿಯಲ್ಲಿ ವರ್ತಿಸುತ್ತಿದ್ದರು. ಅದರಿಂದ ಅವರು ಸಹ ಆಕರ್ಷಿತರಾದರು. ಅವರ ಮಗಳು ಹೇಳುತ್ತಾರೆ: ನಮ್ಮ ಜೀವಿತದಲ್ಲಿ ಇವರು ಬಂದಾಗ, ಒಂದು ಬೆಳಕು, ಒಂದು ಬೆಂಬಲ, ಕೃಪಾಳು ತಾಯಿಯಾಗಿ ಬಂದಿದ್ದಳು. ನಮ್ಮ ಯಥಾರ್ಥ ತಾಯಿಯ ಕೊರತೆ ಆಗದ ರೀತಿಯಲ್ಲಿ ನಮಗೆ ಪ್ರೀತಿ ಮತ್ತು ವಾತ್ಸಲ್ಯವನ್ನು ನೀಡಿದರು. ಅವರಿಗೆ ಸ್ವಂತ ಕೂಡ ಒಬ್ಬಳು ಮಗಳಿದ್ದಳು. ಆದರೆ ಮೂವರು ಮಕ್ಕಳಲ್ಲಿ ಯಾವುದೇ ವ್ಯತ್ಯಾಸವನ್ನು ಮಾಡಿರಲಿಲ್ಲ. ನಿಸ್ವಾರ್ಥ ಮತ್ತು ತ್ಯಾಗಿಯಾದ ಸ್ತ್ರೀಯಾಗಿದ್ದರು. ಅಲ್ಲಾಹನ ಮೇಲೆ ಭರವಸೆ ಇರಿಸಲು, ಖಿಲಾಫತ್‌ನೊಂದಿಗೆ ಸಂಬಂಧವರಿಸಲು ಮತ್ತು ಧಾರ್ಮಿಕ ಅಧ್ಯಾಪನೆಗಳನ್ನು ಪಾಲಿಸಲು ನಮ್ಮನ್ನು ಉಪದೇಶಿಸುತ್ತಿದ್ದರು. ನಮಗೆ ಸಂಬಂಧದ ಮಹತ್ವ ಮತ್ತು ರಕ್ತಸಂಬಂಧವನ್ನು ಸುದೃಢಗೊಳಿಸಲು ಉಪದೇಶಿಸುತ್ತಿದ್ದರು. ಅಲ್ಲಾಹನು ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಂದಿನ ಜನಾಝ ಮರ್ಕಝಿ ಅರಬೀ ಡೆಸ್ಕಿನ ಮುಬಲ್ಲಿಗ್ ಆದ ಮುಹಮ್ಮದ್ ಅಹ್ಮದ್ ನಈಂ ಸಾಹಿಬ್‌ರ ತಂದೆಯಾದ ಸುಲ್ತಾನ್ ಅಲಿ ರೈಹಾನ್ ಸಾಹಿಬ್‌ರದ್ದಾಗಿದೆ. ಮಾರ್ಚ್ 26ರಂದು 83ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಮುಹಮ್ಮದ್ ಅಹ್ಮದ್ ಸಾಹಿಬ್ ಬರೆಯುತ್ತಾರೆ; ನಮ್ಮ ದೊಡ್ಡಪ್ಪ ಸ್ವತಃ ಅನ್ವೇಷಣೆ ನಡೆಸಿಕೊಂಡು 1958ರಲ್ಲಿ ಬೈಅತ್ ಮಾಡಿದ್ದರು. ಅನಂತರ ನನ್ನ ತಂದೆಯವರಿಗೆ ತಬ್ಲೀಗ್ ಮಾಡಿದರು. ಬೈಅತಿನ ನಂತರ ಇಬ್ಬರು ಸಹೋದರರನ್ನು ಎದುರಾಳಿಗಳು ಕಠಿಣವಾಗಿ ವಿರೋಧಿಸಿದರು. ಕೊಲ್ಲಲ್ಲು ಸಹ ಪ್ರಯತ್ನಿಸಿದರು. ಆದರೆ ಅಲ್ಲಾಹನು ಸುರಕ್ಷಿತಗೊಳಿಸಿದನು. ನಿಮ್ಮಿಂದ ಇಬ್ಬರು ಯುವಕರನ್ನು ಕೊಲ್ಲಲು ಆಗುತ್ತಿಲ್ಲವೆಂದು ಮೌಲವಿಗಳು ಗ್ರಾಮವಾಸಿಯರೊಡನೆ ಹೇಳುತ್ತಿದ್ದರು. ಹೇಗಿದ್ದರೂ ಅಲ್ಲಾಹನು ಅವರನ್ನು ಸಂರಕ್ಷಿತ್ತಾ ಇದ್ದನು. ಹೀಗಿದ್ದರೂ ಅವರು ತಮ್ಮ ಅಹ್ಮದಿಯೇತರ ಸಂಬಂಧಿಕರೊಂದಿಗೆ ಕೊನೆಯುಸಿರು ತನಕ ಸಂಬಂಧವನ್ನು ಇರಿಸಿದ್ದರು. ಅವರ ವಿರೋಧದ ನಂತರವೂ ಅವರೊಂದಿಗೆ ಉತ್ತಮವಾಗಿ ವರ್ತಿಸುತ್ತಿದ್ದರು. ಅವರಿಗೆ ಇಬ್ಬರು ಪುತ್ರರು ಮತ್ತು ಆರು ಪುತ್ರಿಯರು ಇದ್ದಾರೆ. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಮುಹಮ್ಮದ್

ನಈಂ ಸಾಹಿಬ್‌ರಿಗೆ ಅವರ ತಂದೆಯ ಜನಾಝಾದಲ್ಲಿ ಭಾಗಿಯಾಗಲು ಸಾಧ್ಯವಾಗಿರಲಿಲ್ಲ.

ಜಮ್ಮೂ ಕಾಶ್ಮೀರದ ರಾಜೋರಿ ಜಿಲ್ಲೆಯ ಕಾಲಾಬನ್ನಿನ ಮುಬಲ್ಲಿಗ್ ಆದ ಮೌಲವಿ ಗುಲಾಂ ಖಾದಿರ್ ಸಾಹಿಬ್‌ರದ್ದಾಗಿದೆ. ಮಾರ್ಚ 26ರಂದು 56ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಮೌಲವಿ ಗ್ಗುಲಾಂ ಖಾದಿರ್ ಸಾಹಿಬ್‌ರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ತಾತರಾದ ಸನ್ಮಾನ್ಯ ಬಹಾದೂರ್ ಅಲಿ ಸಾಹಿಬ್‌ರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ತಾತರಾದ ಸನ್ಮಾನ್ಯ ಬಹಾದೂರ್ ಅಲಿ ಸಾಹಿಬ್‌ರ ಮೂಲಕ ಪ್ರವೇಶಿಸಿತ್ತು. ಅವರ ಕುಟುಂಬದ ಹದಿಮೂರು ವ್ಯಕ್ತಿಗಳು ಅಲ್ಲಾಹನ ಅನುಗ್ರಹದಿಂದ ಜಮಾಅತಿನ ಸೇವೆಯಲ್ಲಿ ನಿರತರಾಗಿರುವರು. ಮುಬಲ್ಲಿಗ್ ಆಗಿ 36 ವರ್ಷಗಳು ಆರು ತಿಂಗಳುಗಳ ಕಾಲ ಅವರಿಗೆ ಸೇವೆ ಸಲ್ಲಿಸಲು ಸೌಭಾಗ್ಯ ಸಿಕ್ಕಿತ್ತು. ದಿವಂಗತರ ಪೋಸ್ಟಿಂಗ್ ಎಲ್ಲಿ ಆದಾಗಲೂ ಬಹಳ ಸಂತೋಷದಿಂದ ಮತ್ತು ಸಂಪೂರ್ಣವಾದ ಪರಿಶ್ರಮದೊಂದಿಗೆ ಶಿಕ್ಷಣ ಮತ್ತು ನೈತಿಕ ತರಬೇತಿಯ ಜವಾಬ್ದಾರಿಯನ್ನು ಕೊನೆಯ ತನಕ ನಿರ್ವಹಿಸುತ್ತಿದ್ದರು. ತಬ್ಲೀಗ್ ಮಾಡಲು ಚೆನ್ನಾಗಿ ತಿಳಿದಿದ್ದರು. ತಬ್ಲೀಗ್ ಮೈದಾನದಲ್ಲಿ ಬರುವ ತೊಂದರೆಗಳು ಮತ್ತು ವಿರೋಧಗಳನ್ನು ಕೆಚ್ಚೆದೆಯಿಂದ ಎದುರಿಸುತ್ತಿದ್ದರು. ಅತ್ಯಂತ ಸಹನೆಯುಳ್ಳ, ಇದ್ದುದ್ದರಲ್ಲಿ ತೃಪ್ತಿ ಹೊಂದಿದ್ದ ಧೀರ ಮುಬಲ್ಲಿಗ್‌ರಾಗಿದ್ದರು. ದಿವಂಗತರು ಪತ್ನಿಯನ್ನಲ್ಲದೇ ಮೂವರು ಪುತ್ರರನ್ನು ಮತ್ತು ಇಬ್ಬರು ಪುತ್ರಿಯರನ್ನು ಅಗಲಿರುವರು. ಒಬ್ಬ ಮಗನಾದ ಬಶೀರುದ್ದೀನ್ ಖಾದಿರ್ ಸಾಹಿಬ್‌ರು ಜಾಮಿಅ ಅಹ್ಮದಿಯಾ ಖಾದಿಯಾನನಲ್ಲಿ ಕೊನೆಯ ಕ್ಲಾಸಿನಲ್ಲಿ ಕಲಿಯುತ್ತಿದ್ದಾರೆ. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಂದಿನ ಜನಾಝಾ ಖಾದಿಯಾನಿನ ದರ್ವೇಶ್ ಆದ ಮುಹಮ್ಮದ್ ಸಾದಿಖ್ ಸಾಹಿಬ್‌ರ ಪತ್ನಿಯಾದ ಮಹ್ಮೂದ ಬೇಗಂ ಸಾಹಿಬರದ್ದಾಗಿದೆ. 85ನೇ ವಯಸ್ಸಿನಲ್ಲಿ ಹೃದಯಾಘಾತ ನಿಮಿತ್ತ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರು ಹಝ್ರತ್ ಮಸೀಹ್ ಮೌಊದ್‌ರ ಸಹಾಬಿಯಾದ ಯು.ಪಿ.ಯ ಮೇನ್‌ಪೂರ್ ಜಿಲ್ಲೆಯ ಅಲಿಪೂರ್ ಎಂಬ ಸ್ಥಳದ ಖಾಝಿ ಶಾದ್ ಬಖ್ಷ್ ಸಾಹಿಬ್‌ರ ಮಗಳಾಗಿದ್ದರು. ಅವರ ವಿವಾಹ ದಿವಂಗತ ದರ್ವೇಶ್ ಮುಹಮ್ಮದ್ ಆರಿಫ್ ಸಾದಿಖ್‌ರೊಂದಿಗೆ ನಡೆದಿತ್ತು. ದಿವಂಗತರು ದರ್ವೇಶೀ ಕಾಲವನ್ನು ತನ್ನ ಕುಟುಂಬದೊಂದಿಗೆ ಅತ್ಯಂತ ಸಹನೆ ಮತ್ತು ಕೃತಜ್ಞತೆಯಿಂದ ಸಾಗಿಸಿದ್ದರು. ಹಸಿವಿನಿಂದ ಇರಬೇಕಾದ ಸ್ಥಿತಿ ಬಂದರೂ ಸದಾ ಸಹನೆಯ ಮಾದರಿಯನ್ನು ತೋರಿಸಿದ್ದರು. ಯಾವತ್ತೂ ಯಾರ ಮುಂದೆಯೂ ತನ್ನ ದಾರಿದ್ರ್ಯದ ಬಗ್ಗೆ ಹೇಳಿರಲಿಲ್ಲ. ಮರಣಾವಸ್ಥೆಯಲ್ಲೂ ನಮಾಝಿನ ಬಗ್ಗೆ ಬಹಳ ಚಿಂತೆಯಿರುತ್ತಿತ್ತು. ಅದರ ಪಾಲನೆ ಮಾಡುತ್ತಿದ್ದರು. ನಿಯತವಾಗಿ ಪವಿತ್ರ ಖುರ್‌ಆನ್ ಸಹ ಪಾರಾಯಣ ಮಾಡುತ್ತಿದ್ದರು. ಚಂದಾ ಪಾವತಿಯಲ್ಲೂ ಬಹಳ ಕರಾರುವಕ್ಕಾಗಿದ್ದರು. ಖಿಲಾಫತ್‌ನೊಂದಿಗೆ ಅತ್ಯಂತ ಉತ್ತಮ ಸಂಬಂಧವನ್ನು ಇರಿಸುತ್ತಿದ್ದರು. ಮಕ್ಕಳೊಂದಿಗೂ ಈ ಸಂಬಂಧವಾಗಿ ಉಪದೇಶಿಸುತ್ತಿದ್ದರು. ದಿವಂಗತರು ವಸಿಯ್ಯತ್ ಮಾಡಿದ್ದರು. ದಿವಂಗತರು ಮೂವರು ಪುತ್ರರನ್ನು ಮತ್ತು ಇಬ್ಬರು ಪುತ್ರಿಯರನ್ನು ಅಗಲಿರುವರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಂದಿನ ಜನಾಝಾ ಅರ್ದನಿನ ಖಾಲಿದ್ ಸಅದುಲ್ಲಾಹ್ ಮಿಸ್ರೀ ಸಾಹಿಬ್‌ರದ್ದಾಗಿದೆ. ಅವರು ಕೆಲವು ದಿನಗಳ ಹಿಂದೆ 60ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಇವರು ತಮ್ಮ ಕುಟುಂಬದಲ್ಲಿ ಮೊದಲ ಅಹ್ಮದಿಯಾಗಿದ್ದರು. ಅತ್ಯಂತ ನಿಷ್ಠಾವಂತ, ನಮಾಝ್ ನಿರ್ವಹಿಸುವ, ಚಂದಾಗಳಲ್ಲಿ ಕಟ್ಟುನಿಟ್ಟು ಪಾಲಿಸುತ್ತಿದ್ದ, ಜಮಾಅತಿನ ವ್ಯವಸ್ಥೆಯನ್ನು ಅನುಸರಿಸುವ ವ್ಯಕ್ತಿಯಾಗಿದ್ದರು. ಅತ್ಯಂತ ಹಸನ್ಮುಖಿ, ಅತಿಥಿ ಸತ್ಕಾರಿಯಾದ, ಸ್ನೇಹಮಯಿ ವ್ಯಕ್ತಿಯಾಗಿದ್ದರು. ಬಹಳ ಸೌಮ್ಯ ಸ್ವಭಾವದ ಮತ್ತು ಮಿತಭಾಷಿಯಾದ ವ್ಯಕ್ತಿಯಾಗಿದ್ದರು. ಅವರಿಗೆ ಖಲೀಫರ ಮಾತು ಅಂತಿಮ ತೀರ್ಮಾನದಂತೆ ಆಗಿತ್ತು. ಎಂ.ಟಿ.ಎ. ವಿಶೇಷವಾಗಿ ಖುತ್ಬ ಜುಮಾ ನಿಯತವಾಗಿ ನೋಡುತ್ತಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಂದಿನ ಜನಾಝಾ ರಬ್ವದ ದಾರುಲ್‌ಫಝ್ಲಿನ ಸನ್ಮಾನ್ಯ ಮುಹಮ್ಮದ್ ಮುನೀರ್ ಸಾಹಿಬ್‌ರದ್ದಾಗಿದೆ. 73ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. 1972ರಲ್ಲಿ ಅವರು ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್‌ರ ಕೈಯಲ್ಲಿ ಬೈಅತ್ ಮಾಡಿದ್ದರು. ಅವರು ಕುಟುಂಬದ ಇತರ ಸದಸ್ಯರು ಅಹ್ಮದಿಯಾಗಿರಲಿಲ್ಲ. ಆದ್ದರಿಂದ ಅವರಿಗೆ ಬಹಳವಾಗಿ ಕಿರುಕುಳ ನೀಡುತ್ತಿದ್ದರು. ಅಹ್ಮದಿಯ್ಯತ್ ಉಪೇಕ್ಷಿಸಿದ್ದರೆ, ನಿಮ್ಮ ಮಕ್ಕಳಿಗೂ ಸಾಕಾಗುವಷ್ಟು ಸಂಪತ್ತನ್ನು ಕೊಡುವೆವು ಎಂದು 2003ರಲ್ಲಿ ಅವರಿಗೆ ಓಫರ್ ಸಹ ಸಿಕ್ಕಿತ್ತು. ಆದರೆ ಅವರು ಅಹ್ಮದಿಯ್ಯತ್‌ನಲ್ಲಿ ಸ್ಥಿರವಾಗಿದ್ದರು. ಒಬ್ಬಳು ಮಗಳಾದ ಖಮರ್ ಮುನೀರ್ ಸಾಹಿಬ ಇಸ್ಲಾಮಾದಿನ ನಮ್ಮ ವಖ್ಫೇ ಝಿಂದಗಿ ಸ್ಟಾಫ್‌ರ ಪತ್ನಿಯಾಗಿರುವರು ಒಬ್ಬ ಮಗನು ತಾಹಿರ್ ಹಫೀಝ್ ಅವರು ಸಹ ವಖ್ಫೇ ಝಿಂದಗಿಯಾಗಿರುವರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಬಹಳ ಸಾತ್ವಿಕ ಮತ್ತು ನಿಷ್ಠಾವಂತ ವ್ಯಕ್ತಿಯಾಗಿದ್ದರು. ಯಾವಾಗಲೂ ಮುಗುಳ್ನಗುತ್ತಿದ್ದರು. ಎಂದಿಗೂ ಯಾವ ವಿಷಯದಲ್ಲೂ ಕೋಪಗೊಳ್ಳುತ್ತಿರಲಿಲ್ಲ. ಐದು ಹೊತ್ತಿನ ನಮಾಝಿನ ಪಾಲನೆ, ಸಮಯಕ್ಕೆ ಸರಿಯಾಗಿ ಚಂದಾಗಳನ್ನು ನೀಡುತ್ತಿದ್ದರು. ಅವರ ಸಂಬಂಧಿಕರಾದ ಹಾಫಿಝ್ ಸಈದುರ್ರಹ್ಮಾನ್ ಸಾಹಿಬ್ ಹೇಳುತ್ತಾರೆ: ಅವರ ಅಹ್ಮದಿಯೇತರ ಸಂಬಂಧಿಕರು ಅವರೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸುತ್ತಿರಲಿಲ್ಲ. ಆದ್ದರಿಂದ ನನ್ನ ತಂದೆಯವರು ಅವರಿಗೆ ಕೆಲಸವನ್ನು ಕಲಿಸಿದರು. ಅವರು ಅದಕ್ಕಾಗಿ ಸಮೀಪದಲ್ಲೇ ಇದ್ದ ನನ್ನ ತಂದೆಯ ಅಂಗಡಿಗೆ ಹೋಗುತ್ತಿದ್ದರು. ನನ್ನ ತಂದೆಯವರು ಅವರಿಗೆ ಅಂಗಡಿಯಲ್ಲಿ ಕೆಲಸವನ್ನು ಕಲಿಸಿಕೊಟ್ಟರು. ಅನಂತರ ಅವರ ಮನೆಯಲ್ಲೇ ಇರಲು ಶುರುಮಾಡಿದರು. ಬಹಳ ನಿಯತವಾಗಿ ನಮಾಝಿಗಾಗಿ ಮಸೀದಿಗೆ ಹೋಗುತ್ತಿದ್ದರು. ಮುಂದಿನ ಪಂಕ್ತಿಗಳಲ್ಲಿ ಹೋಗಿ ಕುಳಿತುಕೊಳ್ಳುತ್ತಿದ್ದರು. ತಬ್ಲೀಗ್ ಮಾಡಲು ಎಷ್ಟು ಆಸಕ್ತಿ ಹೊಂದಿದ್ದರು ಎಂದರೆ, ತನ್ನ ಪತ್ನಿಯೊಂದಿಗೆ ಹೆಚ್ಚಾಗಿ ಸಮೀಪದ ಗ್ರಾಮಕ್ಕೆ ತಬ್ಲೀಗ್ ಮಾಡಲು ಹೋಗುತ್ತಿದ್ದರು. ಅಲ್ಲಾಹನು ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಂದಿನ ಜನಾಝಾ ರಬ್ವದ ದಾರುಲ್‌ಬರ್ಕತಿನ ಮಾಸ್ಟರ್ ನಝೀರ್ ಅಹ್ಮದ್ ಸಾಹಿಬ್‌ರದ್ದಾಗಿದೆ. ಎಪ್ರಿಲ್ 4ರಂದು 80ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರ ಕುಟುಂಬದಲ್ಲಿ ಅಹ್ಮದಿಯ್ಯತಿನ ಪ್ರವೇಶ ಅವರ ತಂದೆಯಾದ ಮಿಯಾ ಉಮರ್ ದೀನ್ ಸಾಹಿಬ್ ಇಬ್ನು ಮಿಯಾ ಕರಂ ದೀನ್ ಸಾಹಿಬ್ ಆಫ್ ದಾತ ಝೈದ್ ಸಿಯಾಲ್‌ಕೋಟ್‌ರ ಮೂಲಕ ಪ್ರವೇಶಿಸಿತ್ತು. ಅವರಿಗೆ 15ವರ್ಷ ಪ್ರಾಯವಿದ್ದಾಗ ಅವರಿಗೆ ಜಮಾಅತಿನ ಬಗ್ಗೆ ಗೊತ್ತಾಯಿತು. 1914ರ ಅಥವಾ 1915ರ ಜಲ್ಸ ಸಾಲಾನದಲ್ಲಿ ಖಲೀಫತುಲ್ ಮಸೀಹ್‌ರ ಕೈಯಲ್ಲಿ ಬೈಅತ್ ಮಾಡಿದ್ದರು. ಕನಸಿನ ಮೂಲಕ ಅವರಿಗೆ ಸನ್ಮಾರ್ಗ ಸಿಕ್ಕಿತ್ತು, ಅನಂತರ ಸರ್ಗೋಧದಲ್ಲಿ ನೆಲೆಸಿದ್ದಾಗ ಸ್ಕೂಲಿನ ಅಧ್ಯಾಪಕರ ಕಡೆಯಿಂದ ಅವರನ್ನು ಬಾಯಕೋಟ್ ಮಾಡಲಾಯಿತು. ಅದೇ ಸ್ಕೂಲಿನಲ್ಲಿ ಕಲಿಯುತ್ತಿದ್ದ ಅವರ 9 ವರ್ಷ ಪ್ರಾಯದ ಮಗನಾದ ನಸೀರ್ ಅಹ್ಮದ್‌ರನ್ನು ಚಾಕುವಿನಿಂದ ಹಲ್ಲೆ ನಡೆಸಲಾಯಿತು. ಮಾಸ್ಟರ್ ಸಾಹಿಬ್‌ರು ಬಹಳ ಸಹನೆಯನ್ನು ತೋರಿಸಿದರು. ಹೇಗಿದ್ದರೂ ಕೆಲವು ಕಾಲದ ನಂತರ, ಅಂದು ಬಚಾವಾಗಿದ್ದ ಆ ಮಗನು ಜ್ವರದ ಕಾರಣದಿಂದ ಮೃತಪಟ್ಟನು. ಅವರ ಮಗನ ಮೃತದೇಹವನ್ನು ಗೋರಿಗೆ ಇಳಿಸುವಾಗ ಅವರು ಬಹಳ ಸಹನೆ ಮತ್ತು ಧೈರ್ಯದಿಂದ ಹೀಗೆ ಹೇಳಿದರು: ನೀನು ನಿನ್ನ ಶರೀರದ ಮೇಲೆ ಜಮಾಅತಿನ ಸತ್ಯದ ಕುರುಹನ್ನು ತೆಗೆದುಕೊಂಡು ಹೋಗುತ್ತಿದ್ದೀಯ ಎಂಬುದರಿಂದ ನನಗೆ ಹೆಮ್ಮೆಯಿದೆ. ಅವರು ಆ ಗ್ರಾಮದಲ್ಲಿ ಅಧ್ಯಾಪಕರಾಗಿದ್ದ ಕಾಲದಷ್ಟು ಯಾರೇ ಮುಬಲ್ಲಿಗ್ ಮತ್ತು ಮುಅಲ್ಲಿಮ್‌ರ ಆವಶ್ಯಕತೆ ಉಂಟಾಗಿರಲಿಲ್ಲ. ಸ್ವತಃ ಆ ಕರ್ತವ್ಯವನ್ನು ಸಹ ನಿರ್ವಹಿಸುತ್ತಿದ್ದರು. ಅನಂತರ ಅವರ ಪೋಸ್ಟಿಂಗ್ ರಬ್ವದ ಸಮೀಪವಾಯಿತು. ಅಲ್ಲಿಂದ ಅವರು ರಬ್ವಕ್ಕೆ ಸ್ಥಳಾಂತರಗೊಂಡರು. ಅಲ್ಲೂ ಸೇವೆ ಸಲ್ಲಿಸುತ್ತಿದ್ದರು. ಹಲವಾರು ಮಕ್ಕಳಿಗೆ ಪವಿತ್ರ ಖುರ್‌ಆನ್ ಕಲಿಸಿದ್ದರು. ನಿವೃತ್ತರಾದ ನಂತರ ಖಾರಿ ಆಶಿಕ್ ಸಾಹಿಬ್‌ರಿಂದ ಪವಿತ್ರ ಖುರ್‌ಆನಿನ ತರ್ತೀಲ್ ಕಲಿತರು. ಅನಂತರ ಮೊಹಲ್ಲದಲ್ಲಿ ತರ್ತೀಲುಲ್ ಖುರ್‌ಆನಿನ ಕ್ಲಾಸ್ ಸಹ ಜಾರಿಗೊಳಿಸಿದರು. ಹತ್ತನೇ ತರಗತಿ ಪಾಸ್ ಆದ ಯಾವನೇ ವಿದ್ಯಾರ್ಥಿಗೆ ಪವಿತ್ರ ಖುರ್‌ಆನ್ ಗೊತ್ತಿಲ್ಲದೇ ಆಗಬಾರದು ಎಂದು ಅವರು ಪ್ರಯತ್ನಿಸುತ್ತಿದ್ದರು. ಯಾರಾದರೂ ಹಾಗೆ ಇದ್ದರೆ, ಅವರ ಮನೆಗೆ ಹೋಗಿ ಅವರಿಗೆ ಪವಿತ್ರ ಖುರ್‌ಆನ್ ಕಲಿಸುತ್ತಿದ್ದರು. ಬಹಳ ಕಿರಿಯ ವಯಸ್ಸಿನಲ್ಲೇ ತಹಜ್ಜುದ್ ನಿರ್ವಹಿಸುತ್ತಿದ್ದರು. 60 ವಯಸ್ಸಿಗೆ ಮೇಲ್ಪಟ್ಟ ಪ್ರಾಯದ ವ್ಯಕ್ತಿಗಳು ಮಸೀದಿಗೆ ಬರಬಾರದು ಎಂಬ ನಿಯಮ ಕೊರೋನದ ಕಾರಣದಿಂದ ಬಂದಾಗ ಅವರು ನಿಯತವಾಗಿ ಮನೆಯಲ್ಲಿ ನಮಾಝ್ ಮತ್ತು ಜುಮಾ ನಮಾಝ್ ನಿರ್ವಹಿಸುತ್ತಿದ್ದರು. 80 ವಯಸ್ಸಿನಲ್ಲಿ ನಿಧನರಾಗುವರು ಎಂದು ಒಂದು ಕನಸಿನ ಆಧಾರದಲ್ಲಿ ಅವರಿಗೆ ದೃಢವಿಶ್ವಾಸವಿತ್ತು. ಹಾಗೆಯೇ ಆಯಿತು. ಅವರಿಗೆ ಮೂವರು ಪುತ್ರರು ಮತ್ತು ಒಬ್ಬಳು ಪುತ್ರಿ ಇದ್ದಾರೆ. ಹೇಗಿದ್ದರೂ ಅವರ ಮೂವರು ಮಕ್ಕಳು ವಖ್ಫೇ ಝಿಂದಗಿಯಾಗಿರುವರು. ಅವರಲ್ಲಿ ಒಬ್ಬರಾದ ಅಝೀಝ್ ಸಾಹಿಬ್ ಇಲ್ಲಿ ಇಸ್ಲಾಮಾಬಾದಿನಲ್ಲೇ ಸೇವೆ ಸಲ್ಲಿಸುತ್ತಿದ್ದಾರೆ. ಎರಡನೇ ಮಗನು ರಬ್ವದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಮೂರನೇ ಮಗನು ನೈಜೀರಿಯದಲ್ಲಿ ಮುಬಲ್ಲಿಗ್ ಆಗಿರುವರು. ಇವರು ಸಹ ದಫನ್ ಮಾಡುವ ಸಮಯದಲ್ಲಿ ತಲುಪಲು ಸಾಧ್ಯವಾಗಲಿಲ್ಲ. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಎಲ್ಲ ದಿವಂಗತರ ಸಂಬಂಧಿಕರಿಗೆ ಸಹನೆ ಮತ್ತು

ಧೈರ್ಯವನ್ನು ನೀಡಲಿ. ಅವರೆಲ್ಲರ ಒಳಿತುಗಳನ್ನು ಜಾರಿಯಲ್ಲಿರಿಸಲು ಸೌಭಾಗ್ಯ ನೀಡಲಿ.

****************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಮಾತಿಗೆ ಬದ್ಧನಾಗಿರುತ್ತಾನೆ. ಎಲ್ಲಿಯವರೆಗೆ ತನ್ನ ತಂದೆ ಅನುಮತಿ ನೀಡುವುದಿಲ್ಲ ಅಥವಾ ಸ್ವಯಂ ಅಲ್ಲಾಹನೇ ಒಂದು ನಿರ್ಣಯ ಕೈಗೊಳ್ಳುವುದಿಲ್ಲ. ನಾನು ಇಲ್ಲಿಂದ ಕದಲುವುದಿಲ್ಲ. ಅಲ್ಲಾಹನ ನಿರ್ಣಯದ ತಾತ್ಪರ್ಯವು ಅವರ ಮನದಲ್ಲಿ ಇದಾಗಿರಬೇಕು, ಯಾವುದೇ ರೀತಿಯಲ್ಲಿ ಬಿನ್‌ಯಾಮೀನ್ ಸ್ವತಂತ್ರಗೊಳ್ಳಬೇಕು ಮತ್ತು ನಾನು ಅವನ ಜೊತೆಯಲ್ಲಿ ಮರಳಬೇಕು.

ಹಝ್ರತ್ ಯೂಸೂಫ್(ಅ) ರವರ ಜೇಷ್ಠ ಸಹೋದರನ ಹೆಸರು ರೋಬನ್ ಎಂದಾಗಿತ್ತು. ಬೈಬಲ್‌ನ ಪ್ರಕಾರ, ಈ ಸಂದರ್ಭದಲ್ಲಿ ಯಾವ ಸಹೋದರನು ಮನೆಗೆ ಮರಳಲು ನಿರಾಕರಿಸಿದನೋ ಅವನು ಯಹುದಾ ಆಗಿದ್ದನು. ಅವನು ಸಹೋದರರಲ್ಲಿ ನಾಲ್ಕನೇಯವನಾಗಿದ್ದನು. ಮಸೀಹಿ ಲೇಖಕರು ಇಲ್ಲಿ ಆಕ್ಷೇಪಿಸುವುದೇನೆಂದರೆ ಖುರ್‌ಆನ್‌ನ ಲೇಖಕರಿಗೆ ಸ್ವಲ್ಪವು ಇತಿಹಾಸದ ಜ್ಞಾನವಿಲ್ಲ ಎಂದು. ಅದು ಯಹೂದನ ಮಾತನ್ನು ರೋಬನ್‌ನ ಮಾತು ಎನ್ನುತ್ತದೆ. ನನಗೆ ಮಸೀಹ ಲೇಖಕರ ಮೇಲೆ ಸದಾ ಆಶ್ಚರ್ಯವಾಗುತ್ತದೆ. ಅವರು ಬೈಬಲನ್ನು ಸರ್ವಶ್ರೇಷ್ಠ ಐತಿಹಾಸಿಕ ಗ್ರಂಥವೆಂಬಂತೆ ನಂಬಿಕೆ ಹೊಂದಿದ್ದಾರೆ. ಅದಾಗ್ಯೂ ಸ್ವಯಂ ಮಸೀಹರ ಸಾಹಿತ್ಯವು ಬೈಬಲ್‌ನ ಸ್ಥಾನವನ್ನು ಕುಂದಿಸಿ ವಿವರಿಸಿದ ಸಾಕ್ಷ್ಯಗಳು ದೊರೆಯುತ್ತವೆ. ಪುರಾತನ ಇತಿಹಾಸ ಒಂದೆಡೆ ಮೂಸಾರವರ ಗ್ರಂಥದಲ್ಲಿ ನಮೂದಿತ ವಾದಗಳನ್ನು ಮಸೀಹ ಸಂಶೋಧಕರೇ ಒಪ್ಪುವುದಿಲ್ಲ. ಭೌಗೋಳಿಕ ಮತ್ತು ಆ ಕಾಲಘಟ್ಟದ ಇತರ ಇತಿಹಾಸದಿಂದ ಮತ್ತು ಸ್ವಯಂ ಬೈಬಲ್‌ನ ಆಂತರಿಕ ಸಾಕ್ಷ್ಯಗಳು ಅದಕ್ಕೆ ವಿರುದ್ಧವಾಗಿವೆ. ಇಂತಹದೊಂದು ಗ್ರಂಥದ ವರದಿಗಳನ್ನು ಆಧಾರವಾಗಿಟ್ಟು ಪವಿತ್ರ ಖುರ್‌ಆನ್‌ನ ಮೇಲೆ ಆಕ್ಷೇಪವೆತ್ತುವುದು ಆಶ್ಚರ್ಯಕರವಾಗಿದೆ. ನಿಸ್ಸಂದೇಹವಾಗಿ ನಾವು ಬೈಬಲ್‌ನ ಕೆಲವು ವರದಿಗಳನ್ನು ಐತಿಹಾಸಿಕ ನೆಲೆಯಲ್ಲಿ ಸಾಕ್ಷ್ಯಗಳನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಅದೇ ಸಮಯಕ್ಕೆ ಅವು ಬೌದ್ಧಿಕ ನೆಲೆಯಲ್ಲಿ, ಇತರ ಇತಿಹಾಸ ನಿಮಿತ್ತ, ಅಥವಾ ಪವಿತ್ರ ಖುರ್‌ಆನ್‌ನ ಅನ್ವಯವಾಗಿರಬೇಕು. ಇಲ್ಲದಿದ್ದರೆ ಬೈಬಲ್ ಹಸ್ತಕ್ಷೇಪಗಳಿಂದ ಎಷ್ಟೊಂದು ತುಂಬಿ ಹೋಗಿದೆ ಎಂದರೆ ಅದರ ಇತಿಹಾಸವು ಸುರಕ್ಷಿತವಿಲ್ಲ. ಆದುದರಿಂದ ಇಂತಹ ಪರಿಸ್ಥಿತಿಗಳಲ್ಲಿ ಬೈಬಲ್‌ನ್ನು ಆಧಾರವಾಗಿಟ್ಟು ಪವಿತ್ರ ಖುರ್‌ಆನ್‌ನ ಮೇಲೆ ಆಕ್ಷೇಪವೆತ್ತುವುದು ಅರ್ಥಹೀನ. ಯಹೂದ್ಯರು ವಿವರಿಸಿದ ಐತಿಹಾಸಿಕ ಘಟನೆಗಳು ಸತ್ಯವೆಂದು ಹೇಳುತ್ತಿದೆಯಾದರೂ ಯಹೂದಿ ಇತಿಹಾಸಕಾರರಿಂದ ಅದು ತಪ್ಪೆಂದು ಸಾಬೀತಾಗುತ್ತಿದೆ. ಉದಾಹರಣೆಗೆ ಹಾರೂನರು ಕರುವನ್ನು ಪೂಜಿಸುವುದು, ಮೂಸಾ ಕಾಲದ ಫಿರ್‌ಔನನ ಶವ ಸುರಕ್ಷಿತವಾಗಿದ್ದುದು ಇತ್ಯಾದಿ.

ಆದರೆ ನಾವು ಈ ಪೈಕಿ ತೌರಾತಿನ ವಿವರವನ್ನು ಸತ್ಯವೆಂದು ಪರಿಗಣಿಸಿದರೂ ಯಾವ ಆಕ್ಷೇಪ ಬಾರದು. ಆದುದರಿಂದ ಪವಿತ್ರ ಖುರ್‌ಆನ್ ಕಬೀರುಹುಮ್ ಎಂದು ಹೇಳಿದೆ. ಅಕ್‌ಬರುಹುಮ್ ಎಂದು ಹೇಳಲಿಲ್ಲ. ಹನ್ನೊಂದು ಪುತ್ರರಲ್ಲಿ ನಾಲ್ಕನೇ ಪುತ್ರನು ಕಬೀರ್ ಎಂದು ಹೇಳಿಕೊಳ್ಳಬಹುದು. ಏಕೆಂದರೆ ಕಬೀರ್ ಅರ್ಥ ಕೇವಲ ಹಿರಿಯನು ಎಂದಾಗಿದೆ, ಎಲ್ಲರಿಗಿಂತ ಹಿರಿಯನು ಎಂದಲ್ಲ. ಅದಲ್ಲದೆ ಹೀಗೆಯೂ ಬೈಬಲ್‌ನ ವಿವರವನ್ನು ಮತ್ತು ಪವಿತ್ರ ಖುರ್‌ಆನ್‌ನ ವಿವರವನ್ನು ತಾಳೆಹಾಕಿ ನೋಡಬಹುದು. ಕಬೀರ್ ಎಂದರೆ ವಯಸ್ಸಿನಲ್ಲಿ ಹಿರಿಯನು ಎಂದು ಪರಿಗಣಿಸದೇ ದರ್ಜೆಯಲ್ಲಿ ದೊಡ್ಡವನು ಎನ್ನಬಹುದು. ಅಂದಹಾಗೆ ಈ ವಚನದನ್ವಯ "ಕಾಲಲನ್ ಅರ್‌ಸಿಲಹು ಮಾಆಕುಂ" ನಲ್ಲಿ ಸಾಬೀತುಪಡಿಸಲಾಗಿದೆ. ಹಝ್ರತ್ ಯಾಖೂಬರಿಗೆ ಯಹೂದಾ ಮೇಲೆ ಇದ್ದ ಭರವಸೆಯೂ ರೋಬನ್ ಮೇಲೆ ಇರಲಿಲ್ಲ. ಬಿನ್‌ಯಾಮೀನರಿಗೆ ಅವರು ಯಹೂದ್ ಮಾತಿನ ಮೇಲೆಯೇ ಕಳುಹಿಸಿದ್ದರು. ಆದ್ದರಿಂದ ಈ ನೆಲೆಯಲ್ಲಿ ಯಹೂದರೇ ಸರ್ವಶ್ರೇಷ್ಠರಾಗಿದ್ದರು.

**(ತಫ್ಸೀರ್ ಕಬೀರ್, ಸಂಪುಟ 3, ಪುಟ 346, ಮುದ್ರಣ ಖಾದಿಯಾನ್ 2010)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಹುಸೇನ್ ಬಟೌಲ್ವಿ ಬರೆದ ರಿವ್ಯೂ (ಟಿಪ್ಪಣಿ) ಆಗಿತ್ತು. ಅದು ಅವರು ಬರಾಹೀನ್ ಅಹ್ಮದಿಯಾ ಬಗ್ಗೆ ಬರೆದಿದ್ದರು. ಸತ್ಯದ ಪರವಾಗಿ ಒಂದು ಜಾಣ್ಮೆ ಭರಿತ ಟಿಪ್ಪಣಿಯಾಗಿತ್ತು. ಆದರೆ ಅವರು ನಂತರ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ವಿರೋಧಿಯಾದರು. ಅಗ ಅಜ್ಞಾನಗಳ ಕೂಪವಾದರು. ಅಲ್ಲಾಹನು ಹಝ್ರತ್ ಮಸೀಹ್ ಮೌಊದ್(ಅ)ರವರನ್ನು ವಿರೋಧ ಮಾಡುವ ಉಲಮಾಗಳಿಗೆ ಜಹಲಾಗಳಾಗಿ (ಅಂದರೆ ಮತಪಂಡಿತರನ್ನು ಅಜ್ಞಾನಿಗಳಾಗಿ) ಮಾಡಿದನು. ವಿರೋಧಿಗಳು ಮಾಡಿದ ಈ ಆರೋಪ– ಚಂದ್ರಕ್ಕೆ ರಂಜಾನಿನ ಮೊದಲ ರಾತ್ರಿಗೆ ಗ್ರಹಣ ಉಂಟಾಗಬೇಕಾಗಿತ್ತು. ಈ ಆರೋಪವು ಅಪ್ಪಟ ಅಜ್ಞಾನದಿಂದ ಕೂಡಿದ್ದಾಗಿದೆ. ಏಕೆಂದರೆ:

* ಮೊದಲ ತಾರೀಖಿನ ಚಂದ್ರದರ್ಶನವೇ ತುಂಬ ಪ್ರಯಾಸದ್ದಾಗಿರುತ್ತದೆ. ಆ ಗ್ರಹಣ ಹಿಡಿದರೆ ಲೋಕವು ಹೇಗೆ ತಾನೇ ಅದನ್ನು ನೋಡಲು ಸಾಧ್ಯ. ಅದು ಹೇಗೆ ಒಂದು ದೃಷ್ಟಾಂತ ಎಂದಾಗುವುದು.

* ಎರಡನೆಯದಾಗಿ ಏನೆಂದರೆ ಹದೀಸಿನಲ್ಲಿ ಖಮರ್ ಎಂಬ ಪದ ಬಂದಿದೆ, ಮೊದಲ ತಾರೀಖಿನ ಚಂದ್ರನನ್ನು 'ಹಿಲಾಲ್'' ಎಂದು ಕರೆಯುತ್ತಾರೆ. ನಂತರ ಅದನ್ನು ಖಮರ್ ಎನ್ನುತ್ತಾರೆ.

* ಮೂರನೆಯದಾಗಿ ಅಲ್ಲಾಹನ ದೈವಿಕನಿಯಮದಲ್ಲಿ ಸದಾ ಈ ಕಾಯಿದೆ ನಿಗದಿಯಾಗಿರುತ್ತದೆ. ಚಂದ್ರನಿಗೆ ಗ್ರಹಣ ಉಂಟಾದರೂ ಅದು ಚಂದ್ರನ 13, 14, 15 ತಾರೀಖುಗಳಲ್ಲಿ ಯಾವುದೆ ಒಂದು ತಾರೀಖಿಗೆ ಉಂಟಾಗುವುದು. ಅದರ ಮೊದಲು ಅಲ್ಲ, ಅದರ ನಂತರವು ಅಲ್ಲ.

ಈ ಪೈಕಿ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಅಧ್ಯಾಪನೆಗಳು ಈ ಕೆಳಗೆ ನಾವು ಪ್ರಸ್ತುತಪಡಿಸುತ್ತಿದ್ದೇವೆ.

**ಲೋಕ ಸೃಷ್ಟಿ ಆದಾಗಿನಿಂದ ಉಂಟಾದ ಚಂದ್ರ, ಸೂರ್ಯಗಳ ಗ್ರಹಣ ತಾರೀಖುಗಳು.**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಲೋಕ ಸೃಷ್ಟಿ ಆದಾಗಿನಿಂದ ಚಂದ್ರಗ್ರಹಣಗೋಸ್ಕರ ಮೂರು ರಾತ್ರಿಗಳನ್ನು ಅಲ್ಲಾಹನು ತನ್ನ ನೀತಿಸಂಹಿತೆಯಲ್ಲಿ ನಿಗದಿಪಡಿಸಿರುವನು. ಅಂದರೆ 13, 14, 15, ಚಂದ್ರಗ್ರಹಣಕ್ಕೆ ಅಲ್ಲಾಹನು ನಿಗದಿಪಡಿಸಿದ ಚಂದ್ರಗ್ರಹಣದ ಮೊದಲನೇ ರಾತ್ರಿ ಎಂದರೆ ಅದು ಚಂದ್ರಮಾಸದ 13ನೇ ರಾತ್ರಿಯಾಗಿದೆ. ಮತ್ತು ಸೂರ್ಯಗ್ರಹಣಗೋಸ್ಕರ ದೇವನಿಯಮದಲ್ಲಿ ನಿಗದಿಗೊಂಡ ದಿನಗಳೆಂದರೆ ಚಂದ್ರಮಾಸದ 27, 28, 29 ದಿನಗಳಾಗಿವೆ. ಈ ಮೂರು ದಿನಗಳಲ್ಲಿ ಚಂದ್ರಮಾಸದನ್ವಯ 28ನೇ ತಾರೀಖು ಮಧ್ಯದ ದಿನವಾಗಿದೆ. ಅಂದ ಹಾಗೆ ಹದೀಸಿನ ಪ್ರಕಾರವೇ ಅದೇ ತಾರೀಖುಗಳಲ್ಲಿ ಸೂರ್ಯನಿಗೆ ಮತ್ತು ಚಂದ್ರನಿಗೆ ಗ್ರಹಣ ಉಂಟಾಗಿದೆ ಅಂದರೆ ಚಂದ್ರಗ್ರಹಣದ 13ನೇ ರಾತ್ರಿಯಲ್ಲಿ ಸೂರ್ಯಗ್ರಹಣ ಅದೇ ರಂಝಾನಿನ 28 ರಂದು ಆಯಿತು. (ಹಕೀಖತುಲ್ ವಹಿ, ರೂಹಾನಿ ಖಝಾಈನ್, ಸಂಪುಟ–22, ಪುಟ–2)

**ಹದೀಸಿನಲ್ಲಿ ಖಮರ್ ಕುರಿತು ಗ್ರಹಣದ ವಿವರವಿದೆ ಹೊರತು "ಹಿಲಾಲ್" ಗೆ ಅಲ್ಲ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಓ ಮೂಢರೇ! ಓ ಕುರುಡರೇ! ಮೌಲ್ವಿ ಜಾತಿಗೆ ಕೆಟ್ಟ ಹೆಸರು ತರುವರೇ! ಸ್ವಲ್ಪ ಯೋಚಿಸಿರಿ! ಹದೀಸಿನಲ್ಲಿ ಚಂದ್ರಗ್ರಹಣಕ್ಕಾಗಿ ಖಮರ್ ಪದ ಬಂದಿದೆ, ಒಂದು ವೇಳೆ ಮೊದಲ ರಾತ್ರಿಯಲ್ಲಿ ಚಂದ್ರಗ್ರಹಣ ಆಗುವುದಿದ್ದರೆ ಹದೀಸಿನಲ್ಲಿ ಖಮರ್ ಪದ ಬರುತ್ತಿರಲಿಲ್ಲ. ಬದಲು "ಹಿಲಾಲ್" ಪದ ಬರುತ್ತಿತ್ತು. ಏಕೆಂದರೆ ಯಾವ ನಿಘಂಟು ತಜ್ಞನಿಗೆ ಮತ್ತು ಭಾಷಾ ವಿದ್ವಾಂಸರಿಗೆ ಕೇಳಿ ನೋಡಿ. ಮೊದಲ ರಾತ್ರಿಯ ಚಂದ್ರನಿಗೆ ಖಮರ್ ಪದ ಬಳಸುವುದಿಲ್ಲ. ಬದಲು ಅದು ಮೂರು ರಾತ್ರಿಯವರೆಗೂ ಹಿಲಾಲ್ ಹೆಸರಿನಿಂದ ಕರೆಯಲ್ಪಡುತ್ತದೆ. ಆದುದರಿಂದ ಒಬ್ಬ ಪ್ರಮಾಣಿಕನಾದವನ ಆದ್ಯ ಕರ್ತವ್ಯವಾಗಿದೆ. ಇಲ್ಲಿ ಮೊದಲ ರಾತ್ರಿ ಎಂಬ ಉದ್ದೇಶ ತಿಂಗಳಿನ ಮೊದಲ ರಾತ್ರಿ ಅಲ್ಲ ಬದಲು ಗ್ರಹಣ ಹಿಡಿಯುವ ಮೊದಲ ರಾತ್ರಿಯಾಗಿದೆ. ಒಂದು ವೇಳೆ ತಿಂಗಳಿನ ಮೊದಲ ರಾತ್ರಿ ಉಂಟಾಗುತ್ತಿದ್ದರೆ ಆಗ ಹಿಲಾಲ್ ಪದ ಬರಬೇಕಾಗಿತ್ತೇ ಹೊರತು ಖಮರ್ ಅಲ್ಲ. ಅಂದರೆ ಆ ಬರಹ ಹೀಗಾಗಬೇಕಾಗಿತ್ತು. ಯನ್‌ಕಸಿಫುಲ್ ಹಿಲಾಲ್ ಲಿಅವ್ವಲಿ ಲೈಲತಿನ್, ಇದೀಗ ಯೋಚಿಸಿರಿ. ಈ ಜ್ಞಾನದೊಂದಿಗೆ ಅವರುಗಳು ತಮ್ಮನ್ನು ಮೌಲ್ವಿಗಳು ಅಂದುಕೊಳ್ಳುತ್ತಿದ್ದಾರೆ. ಅವರಿಗೆ ಇಲ್ಲಿಯವರೆಗೆ ಇಷ್ಟು ತಿಳಿದಿಲ್ಲ. ಮೊದಲ ರಾತ್ರಿಯ ಚಂದ್ರನಿಗೆ ಅರಬಿ ಭಾಷೆಯಲ್ಲಿ ಏನು ಹೇಳುತ್ತಾರೆ ಎಂದು. (ಝುಮೀಮ ರಿಸಾಲ ಅಂಜಾಮ್ ಆಥಂ, ರೂಹಾನಿ ಖಝಾಈನ್, ಸಂಪುಟ–11, ಪುಟ–330)

**ಮೂರು ದಿನಗಳವರೆಗೆ ಚಂದ್ರ ಹಿಲಾಲ್ ಆಗಿರುತ್ತದೆ ಮತ್ತು ಕೆಲವರ ದೃಷ್ಟಿಯಲ್ಲಿ ಏಳು ದಿನಗಳವರೆಗೆ**

ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ರೊಂದಿಗೆ ಹೆಚ್ಚಿಗೆ ದಿನಗಳಾಗಿದ್ದರೆ ಅದರ ಹೆಸರು ಹಿಲಾಲ್ ಆಗಿರುತ್ತದೆಯೇ ಹೊರತು ಖಮರ್ ಅಲ್ಲ, ಕೆಲವರ ದೃಷ್ಟಿಯಲ್ಲಿ ಏಳು ದಿನಗಳವರೆಗೆ ಹಿಲಾಲ್ ಎಂದೇ ಕರೆಯಲ್ಪಡುತ್ತದೆ. ಅಂದ ಹಾಗೆ ಖಮರ್ ಪದ ಕುರಿತು ಲಿಸಾನುಲ್ ಅರಬ್ ಮುಂತಾದವುಗಳಲ್ಲಿ ಹೀಗೆ ಬರೆಯಲ್ಪಟ್ಟಿದೆ. ಹುವ ಬಾದಲ್ ಸಲಾಸ ಲಯಲಿನ್ ಇಲಾ ಆಖಿರಿಶ್ಶಹರಿ" ಅಂದ ಮೇಲೆ ಮೊದಲ ರಾತ್ರಿಯಲ್ಲಿ ಖಮರ್‌ಗೆ ಗ್ರಹಣ ಹಿಡಿಯುವುದು ಎಂಬುದು ಹೇಗೆ ಸರಿಯಾದ ಅರ್ಥವಾಗಲು ಸಾಧ್ಯ? ಇದು ಯಾವ ತರಹದ ಉದಾಹರಣೆಯಾಗಿದೆ ಎಂದರೆ, ಮಹಿಳೆಯು ಮೊದಲ ರಾತ್ರಿಯಲ್ಲಿ ಗರ್ಭಿಣಿಯಾಗುವುದು ಎಂದಾಯಿತು. ಅದನ್ನು ಒಬ್ಬ ಮೌಲ್ವಿ ತನ್ನ ಹಟದಿಂದ ಮೊದಲ ರಾತ್ರಿಯ ತಾತ್ಪರ್ಯ ಆ ಹುಡುಗಿ ಹುಟ್ಟಿದ ರಾತ್ರಿ ಎಂದರೆ ಸರಿಯಾದಿತೇ? (ತೊಹಫ ಗೊಲ್ಡವಿಯ, ರೂಹಾ ಖಝಾಈನ್, ಸಂಪುಟ–17, ಪುಟ–138)

ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು: ಚಂದ್ರಗ್ರಹಣದ ಮೊದಲ ದಿನ ಯಾವಾಗಲೂ 13ನೇ ತಾರೀಕು ಎಂದೇ ಪರಿಗಣಿಸಲಾಗುತ್ತದೆ. ಹಾಗೆಯೇ ಸೂರ್ಯ ಗ್ರಹಣದ ಮಧ್ಯದ ದಿನವೆಂದರೆ ಯಾವಾಗಲೂ ತಿಂಗಳಿನ 28 ತಾರೀಖು ಎಂದು ವಿವೇಕನಾದವನು ತಿಳಿದಿರುತ್ತಾನೆ. ಇದು ಕೂಲಂಕಶವಾದ ಭವಿಷ್ಯವಾಣಿಯ ಮೇಲೆ ಚರ್ಚೆ ಮಾಡುವುದು, ಖಮರ್ ಗ್ರಹಣ ತಿಂಗಳಿನ ಮೊದಲ ರಾತ್ರಿಗೆ ಆಗಬೇಕಿತ್ತು. ಅಂದರೆ ಆಗ ಆಕಾಶದ ತೆರೆಯಲ್ಲಿ ಹಿಲಾಲ್ ಉಂಟಾಗುತ್ತದೆ. ಅಂದರೆ ಎಷ್ಟೊಂದು ಅತಿರೇಕದ ಮಾತಾಗಿದೆ. ಇಂತಹ ಬುದ್ಧಿಗಳ ಬಗ್ಗೆ ರೋಧಿಸುವವರು ಎಲ್ಲಿದ್ದಾರೆ, ಅವರ ಬಗ್ಗೆ ಅಳುವುದೋ ನಗುವುದೋ ತಿಳಿಯದು, ಅವರಿಗೆ ಇಷ್ಟು ಸಹ ಅರಿವು ಇಲ್ಲ. ಮೊದಲ ತಾರೀಖಿನ ಚಂದ್ರ ಅದನ್ನು ಹಿಲಾಲ್ ಎನ್ನುತ್ತಾರೆ. ಅದು ಸ್ವಯಂ ತುಂಬ ವಿರಳವಾಗಿ ಕಾಣಲ್ಪಡುತ್ತದೆ. ಅದೇ ಕಾರಣದಿಂದ ಹಬ್ಬಗಳ ಸಮಯ ಜಗಳಗಳಾಗುತ್ತವೆ. ಅಂದ ಹಾಗೆ ಇಂತಹ ಸ್ಥಿತಿಯಲ್ಲಿ ಗ್ರಹಣ ಹೇಗಾಗುವುದು. "ಕ್ಯಾ ಪಿಡ್ಡಿ ಕ್ಯ? ಆ ಪಿಡ್ಡಿ ಕಾ ಶೋರಂಭ" (ಹುಳುವೇನು ಹುಳುವಿನ ಪದಾರ್ಥವೇನು) (ಅದೇ ಪುಟ 139)

**ಸೂರ್ಯ ಚಂದ್ರ, ಗ್ರಹಣ ಉಂಟಾದ ಸುದ್ದಿ ಕೇಳಿ ಮೌಲ್ವಿಗಳು ಹೈರಾಣಾದರು.**

ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಆ ದಿನಗಳಲ್ಲಿ ಪಂಚಾಂಗಗಳ ಮೂಲಕ ಈ ವಿಷಯ ಜನಜನಿತವಾಗಿತ್ತು. ರಂಝಾನಿನಲ್ಲಿ ಸೂರ್ಯ ಮತ್ತು ಚಂದ್ರ ಎರಡಕ್ಕೂ ಗ್ರಹಣ ಹಿಡಿಯುವುದು, ಜನರ ಹೃದಯಗಳಲ್ಲಿ ಈ ಭಾವನೆ ಮೂಡಿತ್ತು. ಇದು ವಾಗ್ದತ್ತ ಇಮಾಮರ ಆಗಮನದ ಕುರುಹು ಆಗಿದೆ. ಆ ಸಮಯ ಮೌಲ್ವಿಗಳಿಗೆ ಈ ವಿಷಯ ತುಂಬ ಕಾಡತೊಡಗಿತ್ತು. ಮಹದಿ ಮತ್ತು ಮಸೀಹರ ದಾವೆ ಹೂಡುವ ಒಬ್ಬನೇ ವ್ಯಕ್ತಿ ಮೈದಾನದಲ್ಲಿದ್ದಾನೆ, ಅವನ ಕಡೆ ಜನರು ವಾಲುವಂತಾಗಬಾರದು ಎಂದು ಯೋಚಿಸಿ. ಈ ದೃಷ್ಟಾಂತವನ್ನು ಮರೆ ಮಾಚಲು ಕೆಲವರು ಹೀಗೆ ಹೇಳಲು ಪ್ರಾರಂಭಿಸಿದರು. ಈ ರಂಝಾನಿನಲ್ಲಿ ಖಂಡಿತವಾಗಿಯೂ ಸೂರ್ಯ ಚಂದ್ರ, ಗ್ರಹಣ ಆಗುವುದಿಲ್ಲ. ಬದಲು ಅದು ಇಮಾಮ್ ಮಹದಿ ಆಗಮಿಸಿದಾಗ ಉಂಟಾಗುವುದು, ರಂಝಾನಿನಲ್ಲಿ ಸೂರ್ಯ, ಚಂದ್ರ, ಗ್ರಹಣ ಉಂಟಾದ ಮೇಲೆ ಹೀಗೆ ಹೇಳತೊಡಗಿದರು. ಈ ಸೂರ್ಯ, ಚಂದ್ರ, ಗ್ರಹಣ ಹದೀಸಿನ ಪದಗಳ ಪ್ರಕಾರವಿಲ್ಲ, ಏಕೆಂದರೆ ಹದೀಸಿನಲ್ಲಿ ಚಂದ್ರನನ್ನು ಮೊದಲ ರಾತ್ರಿಯಲ್ಲಿ ಗ್ರಹಣ ಉಂಟಾಗುವುದು ಎಂದಿದೆ. ಮತ್ತು ಸೂರ್ಯಗ್ರಹಣವು ಮಧ್ಯದ ತಾರೀಖಿಗೆ ಉಂಟಾಗುವುದು ಎಂದಿದೆ. ಅವರಿಗೆ ತಿಳಿಸಿ ಹೇಳಿಕೊಟ್ಟಾಗ ಹದೀಸಿನಲ್ಲಿ ತಿಂಗಳಿನ ಮೊದಲ ತಾರೀಖು ಎಂದಿಲ್ಲ. ಮೊದಲ ತಾರೀಖಿನ ಚಂದ್ರನನ್ನು ಖಮರ್ ಎಂದು ಹೇಳುವುದಿಲ್ಲ. ಅದರ ಹೆಸರು "ಹಿಲಾಲ್" ಎಂದಿದೆ. ಹದೀಸಿನಲ್ಲಿ ಖಮರ್ ಎಂಬ ಪದ ಬಂದಿದೆಯೇ ಹೊರತು ಹಿಲಾಲ್ ಎಂದಲ್ಲ. ಅಂದ ಹಾಗೆ ಹದೀಸಿನ ತಾತ್ಪರ್ಯವೇನೆಂದರೆ ಚಂದ್ರನಿಗೆ ಗ್ರಹಣ ಹಿಡಿಯುವ ತಾರೀಖುಗಳಲ್ಲಿ ಮೊದಲ ತಾರೀಖಿಗೆ ಅಂದರೆ ತಿಂಗಳಿನ 13ನೇ ತಾರೀಖಿಗೆ, ಸೂರ್ಯದ ಮಧ್ಯದ ದಿನದಲ್ಲಿ ಅಂದರೆ ಗ್ರಹಣ ಹಿಡಿಯುವ ತಾರೀಖುಗಳಲ್ಲಿ ಅಂದರೆ 28 ತಾರೀಖಿಗೆ ಅದು ಗ್ರಹಣ ಹಿಡಿಯುವ ದಿನಗಳಲ್ಲಿ ಮಧ್ಯದ ದಿನಗಳಾಗಿರುತ್ತದೆ. ಆಗ ಆ ಮೂಢ ಮೌಲ್ವಿಗಳು ಸರಿಯಾದ ಅರ್ಥ ತಿಳಿದು ತುಂಬ ನಾಚಿಕೆಪಟ್ಟರು. (ಝುರುರತುಲ್ ಇಮಾಮ್, ರೂ.ಖ ಸಂ 13 ಪುಟ 507)

**ಒಂದು ಸಾವಿರ ರೂಪಾಯಿಯ ವೈಭವಯುತ ಬಹುಮಾನ ಪಂಥಾಹ್ವಾನ.**

ಆ ಪರಿಪೂರ್ಣ ಅಧಿಪತಿಯ ಮುಂದೆ ಸಾಹಸ ತೋರಿಸಬೇಡ, ಅವನು ಅರಬ್ ಅರಬೇತರರಿಗಿಂತ ಹೆಚ್ಚು ವಾಕ್‌ಚಾತುರ್ಯನು ಮತ್ತು ಪೂರ್ವ ಪಶ್ಚಿಮಗಳಲ್ಲೂ ಹೆಸರುವಾಸಿಯಾಗಿದ್ದಾನೆ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಚಂದ್ರಗ್ರಹಣವು ರಂಝಾನಿನ ಮೊದಲ ತಾರೀಖಿಗೆ ಆಗಲು ಸಾಧ್ಯವೆ ಇಲ್ಲ. ಮೊದಲ ರಾತ್ರಿ ಗ್ರಹಣ ಉಂಟಾಗಲು ಯಾವ ಕಾರಣವು ಇಲ್ಲ. ಏಕೆಂದರೆ ಈ ಬರಹದಲ್ಲಿ ಖಮರ್ ಎಂಬ ಪದವಿದೆ. ಮೂರು ರಾತ್ರಿಯವರೆಗೆ ಅದನ್ನು ಖಮರ್ ಎಂದೇ ಹೇಳಲಾಗುತ್ತದೆ. ಖಮರ್ ಎಂದು ಹೇಳಲು ಕಾರಣವೇನೆಂದರೆ ಅದು ತುಂಬ ಬಿಳಿಯಾಗಿ ಕಾಣುತ್ತದೆ. ಮೂರು ರಾತ್ರಿಗಿಂತ ಮೊದಲು "ಹಿಲಾಲ್" ಎನ್ನುತ್ತಾರೆ. ಅದನ್ನು ಯಾರೂ ಅಲ್ಲಗಳೆಯುವುದಿಲ್ಲ. ಅದರ ಮೇಲೆ ಎಲ್ಲ ಅರಬರ ಒಮ್ಮತಾಭಿಪ್ರಾಯವಿದೆ. ಮಾತೃ ಭಾಷೆಗಳಲ್ಲಿ ಯಾರೂ ಸಹ ಅದರ ವಿರೋಧವಾಗಿಲ್ಲ, ನಿರಾಕರಿಸುವುದಿಲ್ಲ. ಆದರೆ ಯಾವ ವ್ಯಕ್ತಿಯ ಬುದ್ಧಿ ಭ್ರಮಣೆಗೊಂಡಿದೆ ಮತ್ತು ಅಲ್ಪ ಜ್ಞಾನ ಹೊಂದಿದೆ. ಅವನ ಬಾಯಿಯಿಂದ ಮಾತ್ರ ಇಂತಹ ವಾಕ್ಯ ಹೊರಡಬಹುದು. ವಿವೇಕವಂತನಿಂದ ಇಂತಹ ಮಾತು ಹೊರಡಲು ಸಾಧ್ಯವಿಲ್ಲ. ನಿಮಗೆ ಸಂಶಯವಿದ್ದರೆ ಖಾಮುಸ್ ಮತ್ತು ತಾಜುಲ್ ಊರೂಸ್ ಮತ್ತು ಸಿಹಾಅ ಇನ್ನೊಂದು ಮೇರು ಕೃತಿ ಮುಸಲ್ಮಾನ್ ಅಸಾನುಲ್ ಅರಬ್ ಅಂತೆಯೇ ಎಲ್ಲ ನಿಘಂಟುಗಳ ಗ್ರಂಥಗಳಲ್ಲಿ, ಮತ್ತು ಗದ್ಯಪದ್ಯ ಸಾಹಿತ್ಯದಲ್ಲಿ ವಿಮರ್ಶಿಸಿ ನೋಡಿದರೆ ನಾವು ಅವರಿಗೆ ಸಾವಿರ ರೂಪಾಯಿ ಬಹುಮಾನ ನೀಡುವೆವು. ಅದರ ವಿರುದ್ಧ ಸಾಬೀತು ಮಾಡಿ ತೋರಿಸಬೇಕು. ಅಂದ ಹಾಗೆ ನೀನು ಸಯ್ಯದುಲ್ ಅಂಬಿಯಾ(ಸ) ರವರ ವಚನವನ್ನು ಮತ್ತು ಇಮಾಮರ ವಚನಗಳನ್ನು ಅದರ ನಿಜ ಅರ್ಥದಿಂದ ತಿರುಚಿ ಹೇಳಬೇಡಿ. ಓ ಬಲಹೀನನೇ ಅಲ್ಲಾಹನಿಂದ ಭಯಪಡು. ಆ ಪರಿಪೂರ್ಣ ಅಧಿಪತಿಯ ಮುಂದೆ ಸಾಹಸ ತೋರಿಸಬೇಡ, ಅವನು ಅರಬಿ ಅರಬೇತರರಿಗಿಂತ ವಾಕ್‌ಚಾತುರ್ಯನು ಮತ್ತು ಪೂರ್ವ ಪಶ್ಚಿಮಗಳಲ್ಲಿ ಖ್ಯಾತಿಪಡೆದವನಾಗಿದ್ದಾನೆ. ನಿನ್ನ ಮನಸ್ಸು ಅದನ್ನು ಒಪ್ಪುತ್ತದೆಯೇ? ನಿನ್ನ ಮನಸ್ಸು ಆ ಮಾತನ್ನು ಒಪ್ಪುತ್ತದೆಯೇ? ಅವನು ಎಲ್ಲವನ್ನು ಬಲ್ಲವನು, ವಾಕ್‌ಚಾತುರ್ಯನು, ಅವನ ಎಲ್ಲಾ ಪ್ರೌಢಿಮೆ ಇದೆ, ದಿವ್ಯ ಜ್ಞಾನ ಅವನಿಗಿದೆ. ಎಲ್ಲ ವಚನಗಳು ಅದರ ವಾಕ್‌ಚಾತುರ್ಯದ ಮತ್ತಿನಿಂದ ಮತ್ತು ಅರಬಿ ಭಾಷೆಯ ಸಾಹಿತ್ಯದಿಂದ ತುಂಬಿದ ಅವನಿಂದ ತಪ್ಪಾಗಲು ಸಾಧ್ಯವೇ, ಸರಿಯಾದ ಮತ್ತು ಸಾಹಿತ್ಯದ ಪದವನ್ನು ಬಿಟ್ಟು ಅಸಂಬದ್ಧ ಪದ ಉಪಯೋಗಿಸಬಹುದೇ, ಅಷ್ಟೇ ಅಲ್ಲ ಸಮುದಾಯದ ಒಪ್ಪಿತ ಅಧಿಕೃತ ನಿಲುವಿನ ವಿರುದ್ಧ ವಿವರ ನೀಡಬಹುದೇ, ಕಾಲಘಟ್ಟದ ಹೆಸರುವಾಸಿ ಪಂಡಿತರ ಪದಗಳನ್ನು ಬಿಟ್ಟು ನಗುವವರಿಗೆ ನಕ್ಕಲು ಅವಕಾಶ ಮಾಡಿಕೊಡಬಹುದೇ, ಅಕಟಾಕಟಾ!. ಇಂತಹ ಅಪ್ಪಟ ತಪ್ಪು ಎಡವಟ್ಟು ಅಪಹಾಸ್ಯಕ್ಕೆ ಗುರಿಯಾಗುವಂತಹದು. ಯಾವ ದೊಡ್ಡ ದೊಡ್ಡ ಬುದ್ಧಿಯಿಂದಲು ಅಗಲು ಸಾಧ್ಯವಿಲ್ಲ. ಏಕೆಂದರೆ ವಾಕ್‌ಚಾತುರ್ಯ ಮೈದಾನದ ಸರದಾರರಾದ ಅವರಿಂದ ಹೇಗೆ ಸಾಧ್ಯ. ನಿಮಗೆ ಏನಾಗಿದೆ, ನೀವು ಅಲ್ಲಾಹ್ ಮತ್ತು ಅವನ ಪ್ರವಾದಿಯ ಘನತೆಯನ್ನು ಲೆಕ್ಕಿಸುವುದಿಲ್ಲ, ಓ ಒಣ ಸಾಹಸ ತೋರುವವರೇ ನಿಮಗೆ ನಿಮ್ಮ ಜಿಪುಣತನವೇ ಪ್ರಿಯವಾಗಿದೆಯೇ, ರಸೂಲುಲ್ಲಾಹ್(ಸ) ರವರೊಂದಿಗೆ ಪ್ರೀತಿ ಇಲ್ಲವೇ.

**ನಿಮ್ಮ ಈ ಅವಹೇಳನ ಹಾಗೂ ಗೊಡ್ಡು ಸಾಹಸದಿಂದ ಆಕಾಶ ಒಡೆದು ಹೋಗಬಹುದು, ಆದುದರಿಂದ ನೀವು ಅಲ್ಲಾಹನಿಂದ ಬಯಪಡುವವರಾಗಿರಿ ಮತ್ತು ಸತ್ಯವನ್ನು ಸ್ವೀಕರಿಸುವವರಾಗಿರಿ.**

ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ಈ ಪದ ಅನುಚಿತ ಅಸಂಬದ್ಧವಾಗಿದೆ ಎಂದು ತಿಳಿಯುವುದಿಲ್ಲವೇ, ಭಾಷಾ ವಿದ್ವಾಂಸರಿಂದ ಅದರ ಬಳಕೆ ಸಾಬೀತಾಗಿಲ್ಲ. ಯಾವನೋ ವಿದ್ವಾಂಸ, ಅವಿದ್ವಾಂಸನ ಬರಹದಲ್ಲಿ ಈ ಪದ ಲಭ್ಯವಿಲ್ಲ. ಎಂತಹ ದಡ್ಡ ಪೆದ್ದ ಆದವನು ಸಹ ಎಂತಹ ಸಮಯದಲ್ಲೂ ಈ ಪದ ಬರೆಯಲಿಲ್ಲ. ಅಂದ ಹಾಗೆ ವಾಕ್‌ಚಾತುರ್ಯದ ಸರದಾರರಾದ ಬಾಯಿಯಿಂದ ಇಂತ ಪದ ಹೊರಡಲು ಹೇಗೆ ಸಾಧ್ಯ. ನಿಮ್ಮ ಬುದ್ಧಿ ಭ್ರಮಣಗೊಂಡಿದೆಯೇ, ಅದರಿಂದ ನಿಮ್ಮ ಬಂಡವಾಳ ಹೊರಗೆ ಬಂದಿದೆ, ನಿಮ್ಮ ಸಾಹಿತ್ಯವೇನು ಅದರ ಹೊಸತು ಏನು ನಿಮ್ಮ ಸಾಹಿತ್ಯದ ಎಲ್ಲ ನಿಜ ಬಣ್ಣ ಬಯಲಾಗಿದೆ. ಏಕೆಂದರೆ ನೀವು ಸಯ್ಯದುಲ್ ಅಂಬಿಯಾ(ಸ) ರವರ ಮಾತನ್ನು ಒಬ್ಬ ಅಜ್ಞನಿಗೆ ಹೋಲುವಂತೆ ಮಾಡಿದಿರಿ. ಈ ದುಸ್ಸಾಹಸದಿಂದ ಆಕಾಶ ಕಳಚಿ ಬೀಳಲು ಸಾಧ್ಯ ಆದುದರಿಂದ ನೀವು ಅಲ್ಲಾಹನಿಂದ ಭಯಪಡುವವರಾಗಿರಿ ಮತ್ತು ಸತ್ಯವನ್ನು ಸ್ವೀಕರಿಸಿರಿ. ಸನ್ಮಾರ್ಗ ಪಡೆದವರು ಸ್ವೀಕರಿಸುವ ಹಾಗೆ. (ನೂರುಲ್ ಹಖ್, ಭಾಗ–2, ರೂಹಾನಿ ಖಝಾಈನ್, ಸಂಪುಟ–8, ಪುಟ–198)

ಮುಂದಿನ ಸಂಚಿಕೆಯಲ್ಲಿ ಇನ್‌ಶಾಅಲ್ಲಾಹ್ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನದ ಪಂಥ್ವಾನ ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಭರವಸೆಗಳಿಗೆ ಭಂಗ ತರುವುದಕ್ಕಿಂತ ಮತ್ತು ಅನೈತಿಕ ಕಾರ್ಯಗಳಲ್ಲಿ ಮುಳುಗುವುದಕ್ಕಿಂತ ಉತ್ತಮವಾಗಿರುತ್ತದೆ.

ಹುಝೂರ್ ಹೇಳಿದರು. ಮೊದಲ ಪತ್ನಿ ವಿಶ್ವಾಸ ಭಂಗಗೊಳಿಸುವುದಕ್ಕಿಂತ ವ್ಯಭಿಚಾರದಲ್ಲಿ ಸಿಲುಕುವುದಕ್ಕಿಂತ ಇನ್ನೊಂದು ಮದುವೆಯಾಗುವುದು ಉತ್ತಮವಾಗಿರುತ್ತದೆ.

ಅದೆ ಮಹಿಳೆಯೂ ಪ್ರಶ್ನೆ ಮಾಡಿದಳು ಪುರುಷರಲ್ಲಿ ಇಂತಹ ರೋಗಗಳಿದ್ದರೆ ಮಹಿಳೆ ಏನು ಮಾಡಬೇಕು?

ಆಗ ಹುಝೂರ್ ಹೇಳಿದರು. ಪುರುಷರಲ್ಲಿ ಇಂತಹ ರೋಗಗಳಿದ್ದರೆ ಮಹಿಳೆಯರು ಖುಲಾ ಪಡೆದು ಪ್ರತ್ಯೇಕವಾಗಬಹುದು. ಅಂತೆಯೇ ಪುರುಷನು ಎರಡನೆಯ ಮದುವೆ ಆಗಲೇಬಾರದು ಎನಿಸಿದರೂ ಖುಲಾ ಕೊಡಬಹುದು. ಪುರುಷನಿಗೆ ತಲಾಖ್ ಕೊಡುವ ಹಕ್ಕಿದ್ದರೆ, ಮಹಿಳೆಗೆ ಖುಲಅ ಪಡೆಯುವ ಹಕ್ಕಿದೆ. ಹೀಗೆ ತನ್ನ ಪತ್ನಿಯಿಂದ ಪ್ರತ್ಯೇಕವಾಗಬಹುದು. ಆಗ ಪುರುಷನು ತನ್ನ ಪತ್ನಿಯನ್ನು ಎಲ್ಲ ಹಕ್ಕುಗಳೊಂದಿಗೆ ಬೀಳ್ಕೊಡಬಹುದು. ಆ ಪತ್ನಿಗೆ ಸಂತಾನವಿದ್ದರೆ ಶರೀಅತ್ ಪ್ರಕಾರ ಸಂತಾನದ ಹಕ್ಕುಗಳನ್ನು ಪಾಲಿಸಲು ಬದ್ಧನಾಗಿರುವನು.

**(ಮುಂದುವರಿಯುವುದು)**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2020-22 Vol No.02, Thursday, 13 May 2021, Issue No. 19

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 18ರ ವರದಿಯ ಉಳಿದ ಭಾಗ)**

ಕ್ರೋಶಿಯನ್ ತಂಡದ ಸದಸ್ಯರೊಬ್ಬರು Bruno ಸಾಹಿಬ್ ಹೇಳಿದರು. ನಾನು ಜಲ್ಸ ಸಾಲಾನದ ವಿವಿಧ ವ್ಯವಸ್ತೆಗಳ ಬಗ್ಗೆ ತುಂಬ ಜಾಗ್ರತೆವಹಿಸಿ ಪರಿಶೀಲಿಸಿದ್ದೇನೆ ಅದರಿಂದ ಸ್ಪಷ್ಟವಾಗಿದೆ. ಅಷ್ಟೊಂದು ದೊಡ್ಡ ಸಮಾವೇಶವನ್ನು ಯಶಸ್ವಿಗೊಳಿಸಲು ತುಂಬ ಶ್ರಮವಹಿಸಿ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಎಲ್ಲ ಕಾರ್ಯಕರ್ತರ ಸೇವಾ ಭಾವನೆಯಿಂದ ತುಂಬ ಪ್ರಭಾವಿತನಾಗಿದ್ದೇನೆ. ಜಲ್ಸ ಮಧ್ಯದಲ್ಲಿ ಎಲ್ಲೂ ಪೋಲೀಸ್ ಕಂಡು ಬಂದಿಲ್ಲ. ಯಾವ ಅಚ್ಚುಕಟ್ಟು ರೀತಿಯಲ್ಲಿ, ಸುವ್ಯವಸ್ಥಿತವಾಗಿ, ಜಲ್ಸದ ಜನರು ವಿವಿಧ ಸಮಯಗಳಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಇಂತಹ ಪರಿಸರದಲ್ಲಿ ನಿಜಕ್ಕೂ ಪೋಲೀಸರ ಏನೂ ಕೆಲಸವಿಲ್ಲ.

ಕ್ರೋಶಿಯನ್ ತಂಡಗಳ ಭೇಟಿಯ ಈ ಕಾರ್ಯಕ್ರಮವು 8.55 ಗಂಟೆಯುವರಗೆ ನಡೆಯಿತು. ಅನಂತರ ತಂಡದ ಎಲ್ಲ ಸದಸ್ಯರು ಹುಝೂರೊಂದಿಗೆ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. ಹುಝೂರ್ ಪ್ರೀತಿಪೂರ್ವಕವಾಗಿ ತಂಡದ ಸದಸ್ಯರಿಗೆ ಲೇಖನಿ ನೀಡಿದರು.

**ಲಿಥ್ವಾನಿಯಾದಿಂದ ಬಂದ ತಂಡದವರ ಹುಜೂರೊಡನೆ ಭೇಟಿ.**

ಅನಂತರ ಲಿಥ್ವಾನಿಯಾದಿಂದ ಬಂದ ತಂಡದವರೊಡನೆ ಹುಝೂರ್ ಭೇಟಿ ಪ್ರಾರಂಭಿಸಿದರು. ಈ ವರ್ಷ ಲಿಥ್ವಾನಿಯಾದಿಂದ 8 ಜನರ ತಂಡವು ಭಾಗವಹಿಸಿತ್ತು ಈ ತಂಡದಲ್ಲಿ ವಿದ್ಯಾರ್ಥಿಯರು, ಪ್ರೋಫೆಸರುಗಳು, ಒಂದು ಕಾಲೇಜಿನ Administrator ಮತ್ತು ವಕೀಲರು ಭಾಗವಹಿಸಿದ್ದರು. ಭೇಟಿಯ ಪ್ರಾರಂಭದಲ್ಲಿ ತಂಡದ ಎಲ್ಲ ಸದಸ್ಯರು ಸರತಿಯಂತೆ ತಮ್ಮ ತಮ್ಮ ಪರಿಚಯ ನನಗೆ ನೀಡಿದರು ಮತ್ತು ಇಂದು ಖಲೀಫತುಲ್ ಮಸೀಹರೊಡನೆ ದೊರೆತ ಭೇಟಿಯ ಅವಕಾಶಕ್ಕಾಗಿ ತಮ್ಮ ಸಂತೋಷ ವ್ಯಕ್ತಪಡಿಸಿದರು.

ಅನಂತರ ಸದಸ್ಯರೊಬ್ಬರು ಪ್ರಶ್ನೆ ಕೇಳಿದರು ಹುಝೂರ್ ತಮ್ಮ ಭಾಷಣಗಳನ್ನು ಸ್ವಯಂ ಬರೆದುಕೊಳ್ಳುವರೇ?

ಆಗ ಹುಝೂರ್ ಹೇಳಿದರು. ಸ್ವಯಂ ನನಗೆ ಏನು ಹೇಳಬೇಕು ತಿಳಿದಿರುವುದಿಲ್ಲ ಇಂದಿನ ಖುತುಬ ಕುರಿತು ನಾನು ನಿನ್ನೆ ಯೋಚಿಸಿದ್ದೆ. ಭಾಷಣಗಳು ಸಹ ಸ್ವಯಮ ತಯಾರಿಸಿಕೊಳ್ಳುತ್ತೇನೆ. ಕೆಲವು ಪುರಾವೆಗಳು ಬೇಕಾದರೆ ಕಚೇರಿಯಿಂದ ಸಹಾಯ ಪಡೆಯುತ್ತೇನೆ. ಭಾಷಣಗಳ ಶೀರ್ಷಿಕೆ ಇತ್ಯಾದಿ ನಾನೇ ಆಯ್ಕೆ ಮಾಡಿಕೊಳ್ಳುತ್ತೆನೆ. ಪುರಾವೆಗಳಿಗೆ ಮಾರ್ಗದರ್ಶನ ನೀಡುತ್ತೇನೆ. ಇಂತಿಂತಹ ಪುರಾವೆಗಳನ್ನು ಒದಗಿಸಿಕೊಡಿ ಎಂದು.

ತಂಡದ ಇನ್ನೋರ್ವ ಸದಸ್ಯರು ಕೇಳದಿರು ಇಸ್ಲಾಮಿನಲ್ಲಿ ಹಂದಿಯ ಮಾಂಸ ತಿನ್ನಲು ಏಕೆ ಹರಾಮ್ (ನಿಷೇಧ) ವಿದೆ?

ಆಗ ಹುಝೂರ್ ಹೇಳಿದರು ಹಂದಿಯ ಮಾಂಸ ತಿನ್ನಲು ಬೈಬಲ್‌ನಲ್ಲಿಯೂ ಹರಾಮ್ ಇದೆ.

ಇನ್ನೋರ್ವ ಸದಸ್ಯರು ಪ್ರಶ್ನೆ ಕೇಳಿದರು. ಹುಝೂರ್ ವಿಭಿನ್ನ ಕಾರ್ಯಗಳನ್ನು ಹೇಗೆ manage ಮಾಡುತ್ತೀರಿ?

ಆಗ ಹುಝೂರ್ ಹೇಳಿದರು. ಸ್ವಯಂ ನನಗೆ ತಿಳಿದಿರುವುದಿಲ್ಲ. ಅಲ್ಲಾಹನ ಅನುಗ್ರಹದಿಂದ ಎಲ್ಲ ಕಾರ್ಯಗಳು ಆಗುತ್ತವೆ. ಮೊದಲು ನನ್ನ ಜೀವನದ ಶೈಲಿ ಬೇರೆಯೇ ರೀತಿಯದ್ದಾಗಿತ್ತು. ಆದರೆ ಖಲೀಫತಿನ ಜವಾಬ್ದಾರಿ ಬಂದ ಮೇಲೆ ನನ್ನ ಎಲ್ಲ ಕಾರ್ಯ ವೈಖರಿಯ U-turn ಆಗಿವೆ. ಇದು ಹೇಗೆ ಆಗಿದೆ. ನನಗೆ ಗೊತ್ತಿಲ್ಲ. ಎಲ್ಲ ಕಾರ್ಯಗಳನ್ನು ಮಾಡುವವನು ಅಲ್ಲಾಹನಾಗಿದ್ದಾನೆ.

ಮಹಿಳೆಯೋರ್ವರು ಪ್ರಶ್ನೆ ಕೇಳಿದಳು ಇಸ್ಲಾಮಿನಲ್ಲಿ ನಾಲ್ಕು ಮದುವೆಗಳಿಗೆ ಅನುಮತಿ ಏಕೆ ಇದೆ?

ಆಗ ಹುಝೂರ್ ಹೇಳಿದರು. ನಾಲ್ಕು ವಿವಾಹಗಳ ಅನುಮತಿಯೂ ಶರತ್ತುಗಳೊಂದಿಗೆ ನೀಡಲಾಗಿದೆ. ಉದಾಹರಣೆಗೆ ಎರಡು, ಮೂರು ಮತ್ತು ನಾಲ್ಕು ವಿವಾಹಗಳಿಗಾಗಿ ಪವಿತ್ರ ಖುರ್‌ಆನ್ ಅನುಮತಿ ಕೊಟ್ಟಿದ್ದು, ಯುದ್ಧ ಕಾಲವನ್ನು ದೃಷ್ಟಿಯಲ್ಲಿಟ್ಟುಕೊಂಡು ನೀಡಲಾಗಿದೆ. ಮಹಾ ಜಾಗತಿಕ ಯುದ್ಧಗಳಾದ ನಂತರ ಪುರುಷರು ಹೆಚ್ಚು ಹತ್ಯೆಯಾದರು. ಇಲ್ಲಿ ಜರ್ಮನಿಯಲ್ಲಿ ಸಹ ಪುರುಷರು ಹೆಚ್ಚಿನ ಸಂಕ್ಯೆಯಲ್ಲಿ ಹತರಾಗಿದ್ದರು. ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ಉಳಿದುಕೊಂಡರು. ನಾಲ್ಕು ವಿವಾಹಗಳಿಗೆ ಅನುಮತಿ ಇರುತ್ತಿದ್ದರೆ ಆ ಮಹಿಳೆಯರೂ ವಿವಾಹವಾಗಬಹುದಾಗಿತ್ತು.

ಹುಝೂರ್ ಹೇಳಿದರು. ಇಸ್ಲಾಮಿಗಿಂತ ಮೊದಲು ಸಹ ಜನರು ಬಹುಪತ್ನಿಯರನ್ನು ಹೊಂದಿರುತ್ತಿದ್ದರು. ಅವರು ಕ್ರೈಸ್ತರಾಗಲಿ ಅಥವಾ ನಾಸ್ತಿಕರಾಗಿರಲಿ ಅಥವಾ ವಿಗ್ರಪೂಜಕರಾಗಿರಲಿ, ಅವರೆಲ್ಲ ಎಷ್ಟೆಷ್ಟು ಪತ್ನಿಯರು ಇಪ್ಪತ್ತು, ಮೂವತ್ತು, ಪತ್ನಿಯರು ಹೊಂದಿರುತ್ತಿದ್ದರು. ಯಾವ ವ್ಯಕ್ತಿ ಎಷ್ಟೋ ದೊಡ್ಡವನಾಗುತ್ತಿದ್ದನೋ ಅಷ್ಟೇ ಹೆಚ್ಚು ಪತ್ನಿಯರು ಹೊಂದುತ್ತಿದ್ದರು. ಆಫ್ರಿಕಾದಲ್ಲಿ ಈಗಲೂ ಕೆಲವು ಕ್ಷೇತ್ರಗಳಲ್ಲಿ ರಿವಾಜು ಇದೆ. ಚೀಫ್‌ಗಳು ಎಷ್ಟೆಷ್ಟು ಪತ್ನಿಯರನ್ನು ಹೊಂದಿರುತ್ತಾರೆ. ಅಹ್ಮದಿ ಆದ ಮೇಲೆ ಕೇಳುತ್ತಾರೆ. ಈಗ ನಮಗೆ ಏನು ಮಾಡಬೇಕಾಗಿದೆ? ಆಗ ಅವರಿಗೆ ಹೇಳಲಾಗುತ್ತದೆ. ನಾಲ್ಕು ಪತ್ನಿಯರನ್ನು ಇಟ್ಟುಕೊಂಡು ಉಳಿದವರನ್ನು ಪತ್ನಿತ್ವದಿಂದ ಸ್ವತಂತ್ರಗೊಳಿಸಿರಿ. ಹೀಗೆ ಇಸ್ಲಾಮ್ ಅಂತೂ ವಿವಾಹಗಳಿಗೆ ಕಡಿವಾಣ ಹಾಕಿದೆ ಮತ್ತು ಅದರೊಂದಿಗೆ ಶರತ್ತುಗಳನ್ನು ವಿಧಿಸಲಾಗಿದೆ. ಒಂದಕ್ಕಿಂತ ಹೆಚ್ಚು ವಿವಾಹ ಆಗಬೇಕಾದರೆ ಎಲ್ಲ ಪತ್ನಿಯರೊಂದಿಗೆ ನ್ಯಾಯಪಾಲನೆ ಮಾಡಬೇಕು. ಯಾವ ಪತ್ನಿಯರನ್ನು ಸಹ ತ್ರಿಶಂಕು ಸ್ಥಿತಿಯಲ್ಲಿ ಬಿಡಬಾರದು.

ಅದೇ ಮಹಿಳೆ ಮತ್ತೊಂದು ಪ್ರಶ್ನೆ ಕೇಳಿದಳು ನಾಲ್ಕು ಏಕೆ? ಐದು ಏಕಿಲ್ಲ?

ಆಗ ಹುಝೂರ್ ಹೇಳಿದರು. ಐದು ಇರುತ್ತಿದ್ದರೆ ನೀವು ಆರು ಏಕಿಲ್ಲ? ಎಂದು ಕೇಳುತ್ತಿದ್ದಿರಿ.

ಹುಝೂರ್ ಹೇಳಿದರು. ಯುದ್ದಗಳ ಪರಿಸ್ಥಿತಿಗಳಲ್ಲದೆ ಹೀಗೂ ಅವಶ್ಯಕತೆ ಬರುತ್ತದೆ. ಮೊದಲ ಪತ್ನಿಯಿಂದ ಸಂತಾನ ಆಗದಿದ್ದರೆ. ಪುರುಷನಿಗೆ ಸಂತಾನದ ಇಚ್ಛೆಯಿದ್ದರೆ ಮತ್ತೊಂದು ಮದುವೆ ಮಾಡಿಕೊಳ್ಳಬಹುದು. ಕೆಲವು ಮಹಿಳೆಯರು ರೋಗಗ್ರಸ್ಥರಾಗಿರುತ್ತಾರೆ. ಪುರುಷನ ಅಗತ್ಯಗಳು ಪೂರೈಸುತ್ತಿಲ್ಲ. ಆಗಲೂ ಪುರುಷನು ಇನ್ನೊಂದು ಮದುವೆ ಮಾಡಿಕೊಳ್ಳಬಹುದು. ಅದೇ ರೀತಿ ಕೆಲವು ಇತರ ಅಗತ್ಯಗಳಿಂದಾಗಿ ಪುರುಷನನ್ನು ಬಹುಪತ್ನಿತ್ವ ಹೊಂದುವ ಅವಶ್ಯಕತೆ ಇರುತ್ತದೆ. ಅದೇ ರೀತಿ ಧಾರ್ಮಿಕ ಅಗತ್ಯಗಳಿಗೋಸ್ಕರವೂ ಕೆಲ ಜನರಿಗೆ ಮದುವೆಯ ಅವಶ್ಯಕತೆ ಇರುತ್ತದೆ. ಕೆಲ ಪುರುಷರಿಗೆ ಒಂದೇ ಪತ್ನಿಯಿಂದ ಜೀವಿಸಲು ಆಗುವುದಿಲ್ಲ. ಇಂತಹವರು ಅಲ್ಲಲ್ಲಿ ಹೋಗುವ ಬದಲು ಇನ್ನೊಂದು ಮದುವೆ ಮಾಡಿಕೊಳ್ಳುವುದೇ ಉತ್ತಮ.

ಹುಝೂರ್ ಹೇಳಿದರು. ಮನೆಯಲ್ಲಿ ಪವಿತ್ರವಾದ ವಾತಾವರಣ ಇರಬೇಕು. ಪುರುಷನಗೆ ಜೀವಿಸಲು ಆಗುತ್ತಿಲ್ಲವಾದರೆ ಪವಿತ್ರ ವಾತಾವರಣಕ್ಕಾಗಿ ಇನ್ನೊಂದು ಮದುವೆಯೇ ಲೇಸು. ಹುಝೂರ್ ಅಖದಸ್ ಮಸೀಹ್ ಮೌಊದ್(ಅ) ಹೇಳಿದರು. ಸ್ತ್ರೀಯ ಹಕ್ಕುಗಳೇನು ಎಂದು. ಒಬ್ಬ ಪುರುಷನು ತಿಳಿದವನಾದರೆ ಎರಡು ಮೂರು ಏಕೆ ಒಂದು ಮದುವೆಗೆ ಹಿಂಜರಿಯುವನು.

ಹುಝೂರ್ ಹೇಳಿದರು. ಇಸ್ಲಾಮ್ ವಾಸ್ತವ ಮತ್ತು ನೈಸರ್ಗಕ್ಕೆ ಸಮೀಪ ತರುವ ಧರ್ಮವಾಗಿದೆ. ಇಲ್ಲಿ 65% ಅಥವಾ 75% ತಲಾಕುಗಳಾಗುವ ಕಾರಣವೆಂದರೆ ಪುರುಷರ ಮತ್ತು ಮಹಿಳೆಯರಲ್ಲಿ ಒಂದು ವಿಶಿಷ್ಠ ಅವಧಿಯ ನಂತರ ಭರವಸೆಯಿರುವುದಿಲ್ಲ. ನೀವು ಬೇಕಾದರೆ ನೋಡಿ ಪುರುಷ ಎಲ್ಲೆಂದರಲ್ಲಿಯಾದರೂ involve ಆಗಿರುತ್ತಾನೆ. ಬಹುಶ: ಸ್ತ್ರೀಯು ಆಗಿರಬಹುದು ಆದರೆ ಸಾಮಾನ್ಯವಾಗಿ ಪುರುಷರ ಮೇಲೆ ಈ ಆರೋಪ ಬರುತ್ತದೆ. ಮತ್ತು ಸ್ತ್ರೀಯರು ಇದೇ ಕಾರಣದಿಂದ ತಲಾಖ್ ಪಡೆಯುತ್ತಾರೆ. ಅಂದರೆ ನಿಸರ್ಗದ ನಿಯಮವಿದೆ. ಅದರಂತೆ ನಡೆಯದಿದ್ದರೆ ದುಷ್ಕರ್ಮಿಗಳು ಹುಟ್ಟುತ್ತಾರೆ. ಆದುದರಿಂದ ಆ ದುಷ್ಕರ್ಮಗಳನ್ನು ತಡೆಯಲು ಇಸ್ಲಾಮ್ ಹೇಳುವುದು ವಿವಾಹವಾಗಿರಿ ಎಂದು. ಪರಸ್ಪರ ವಿಶ್ವಾಸ ಕಳೆದುಕೊಲ್ಲುವ ಬದಲು ಮೊದಲ ಪತ್ನಿಯಲ್ಲಿ ಭರವಸೆ ಮೂಡಿಸಿರಿ. ತನ್ನ ಅಗತ್ಯವನ್ನು ಪೂರೈಸಿಕೊಳ್ಳಲು ಇನ್ನೊಂದು ಮದುವೆಯಾಗಿ, ಅಥವಾ ಮೂರನೆಯ ಮದುವೆಯಾಗಿ ಇದು ಅವರ

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
1800–103–2131

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.